RNI :
KARKAN 22229/10/1/2012-TC
ಸಂಪುಟ : 2
ಸಂಚಿಕೆ : 5
ಪುಟಗಳು : 24
ಮಾರ್ಚ್-ಏಪ್ರಿಲ್ 2013
ಬೆಲೆ : 10 ರೂ

ಹುಣ್ಣಿಮೆಯಿಂದ ಹುಣ್ಣಿಮೆಗೆ

ಆದಿಮ

ಲಿವಿಂಗ್ ಆರ್ಕೈವ್ಸ್

ತಪ್ಪು ಚಿಕ್ಕದು ಮಾಡು ತೆಪ್ಪ ದೊಡ್ಡದು ಮಾಡು



ನೆಟ್ಟ ಹೊಂಗೆ ಸಸಿಗಳು ನೆರಳಾಗುವಷ್ಟು ಬೆಳೆಯಲಿಲ್ಲವೇಕೆ?

ಸಂಸ್ಕೃತಿ ಅಧ್ಯಯನದ ಕಣ್ಕಟ್ಟು

ಬುದ್ಧ ನಾಟಕದಲ್ಲಿ ದಲಿತ ಲೋಕ

ತತ್ವಪದಕಾರರಲ್ಲಿ ದಲಿತ ಸಂವೇದನೆ

"ಆದಿಮ ಲಿವಿಂಗ್ ಟೈಮ್ಸ್ ಈ ಹೊತ್ತಿಗೆ ಬೇಕಿರುವ ಪತ್ರಿಕೆಯೇ?"

15 ಸಂಚಿಕೆಗಳ ನಂತರ ಈ ಪ್ರಶ್ನೆ ಎದುರಾಗಿದೆ. ಏಕೆಂದರೆ ಪಂಚಮದ ನೆಲೆಯಲ್ಲಿ ಹುಟ್ಟುವ ಯಾವುದಕ್ಕೂ ಈ ನೆಲದಲ್ಲಿ ಉಳಿವೆಂಬುದು ಅಸಾಧ್ಯವಾಗಿರುವುದರಿಂದ ಈ ಪ್ರಶ್ನೆ. ಇದು ಯಾರ ಎದೆ ದನಿಯಾಗಬೇಕಿತ್ತೋ ಅವರಿಗೆ ಇದರ ಅವಶ್ಯಕತೆ ಇದೆಯೇ ಎಂಬುದು ಇಂದಿಗೂ ನಮಗೆಲ್ಲ ಚಿದಂಬರ ರಹಸ್ಯ. ಇದುವರೆಗಿನ ಬೆಂಬಲ ಬೆಲೆಗಳು,ನೈತಿಕ ಸಹಕಾರಗಳು ಕೂಡ ಈ ಪತ್ರಿಕೆಯನ್ನು ಉಸಿರಾಡುವಂತೆ ಮಾಡುತ್ತಿಲ್ಲ. ಈ ಪತ್ರಿಕೆ ಉಳಿಸುವುದಕ್ಕಿರುವ ಕಳ್ಳ ದಾರಿಗಳಲ್ಲಿ ನಮಗೆ ನಂಬಿಕೆ ಇಲ್ಲ. ಆದರೇನು ಮಾಡುವುದು .... ಬೆರಳೆಣಿಕೆಯಷ್ಟಿದ್ದರೂ ಕೆಲವು ಉದಯೋನ್ಮುಖ ಬರಹಗಾರರಿಗೆ,ಚಿಂತಕರಿಗೆ ಈ ಪತ್ರಿಕೆ ಈ ಹೊತ್ತಿನ ಅಗತ್ಯವಾಗಿದೆ. ಅಂಥವರಿಗಾಗಿಯೇ ಕೊನೇ ಪ್ರಯತ್ನ, ಕಡೇ ಆಟ.

ಪತ್ರಿಕೆಯ ಎಲ್ಲಾ ಖರ್ಚೂ ಸೇರಿ ಒಂದು ಸಾವಿರ ಪ್ರತಿಗಳಿಗೆ ತಿಂಗಳಿಗೆ ಹತ್ತು ಸಾವಿರ ಮುಟ್ಟುತ್ತದೆ.ನಲವತ್ತು ಜನ ಚಂದಾದಾರರಾಗುವುದಾದರೆ ಪ್ರತಿ ತಿಂಗಳು ಈ ಪತ್ರಿಕೆಯನ್ನು ಕೊಂಚ ಕಾಲ ಉಸಿರಾಡುವಂತೆ ಮಾಡಬಹುದು ಅಥವಾ ಉದಾರಿಗಳೆನಿಸಿದವರು ಈ ಭಾರವನ್ನು ಹಂಚಿಕೊಳ್ಳುವುದಾದರೆ ಸಂಭ್ರಮದಿಂದಲೇ ಪತ್ರಿಕೆ ತರಬಹುದು.ಪತ್ರಿಕೆಗೆಂದೇ 'ಆದಿಮ ಜೀವ ಬಳಗ' ಟ್ರಸ್ಟ್ ಸ್ಥಾಪಿಸಲಾಗಿದೆ. ಇಷ್ಟರಲ್ಲೇ ಬ್ಯಾಂಕ್ ಖಾತೆಯ ವಿವರಗಳನ್ನು ನೀಡಲಾಗುತ್ತದೆ.ದಯವಿಟ್ಟು ಸಹಕರಿಸಿ.

■ಕೆ.ರಾಮಯ್ಯ
■ಸಿ.ಜಿ.ಲಕ್ಷ್ಮೀಪತಿ
■ಬಿ.ಶ್ರೀಪಾದ ಭಟ್

ಆ ತರಗೆಲೆ ಕಸವಲ್ಲ

■ಕೆ.ಎಂ.ಬೈರಪ್ಪ

ಮಣ್ಣಮಡಿಲೊಳಗಿಂದ
ಕಣ್ಬಿಟ್ಟು [illegible]
[illegible]
ತರುಮರಗಳೊಳಗೆ
[illegible]
ಎಲೆಎಲೆಯೂ
ಜೀವದುಸಿರಾಗಿ
[illegible]
ತೊಟ್ಟು ಬಿಟ್ಟು [illegible]ತ್ತದೆ.
ಕುರುಹು [illegible]
[illegible]
ಆ ಎಲೆ [illegible] ತರಗೆಲೆಯಲ್ಲಿ
[illegible] ಕಲೆಯೂ ಇಲ್ಲ;
ಕಳಚಿಬಿದ್ದ ಕಸವೂ ಇಲ್ಲ;
ಮಣ್ಣೊಡಲ [illegible]
ರಸ
ಬೇರಿಗೆ ಕಸುವಾಗಿ
[illegible]
ಮರದೊಳಗೆ.
[illegible]
ತರುಮರಗಳಿಂದ [illegible]
[illegible]
[illegible]
'[illegible]
[illegible]
[illegible]'

ಭ್ರಷ್ಟಾಚಾರಕ್ಕಿಂತಲೂ ದೊಡ್ಡ ವ್ಯಾಧಿ ಮತಾಂಧತೆ

ನನ್ನ ಆಯ್ಕೆಯ ಕುರಿತು ಹೇಳುವುದಾದರೆ ಬಹುಶಃ ನನ್ನನ್ನು ಹೊರತುಪಡಿಸಿದ ಪಟ್ಟಿಯಲ್ಲಿದ್ದ ಇತರರಿಗೂ ನನ್ನ ಆಯ್ಕೆಯ ವಿಷಯದಲ್ಲಿ ತಕರಾರಿಲಿಲ್ಲ ಎಂದೆನಿಸುತ್ತದೆ. ಇದರಿಂದಾಗಿ ಪರಿಷತ್ತಿನ ಅಧ್ಯಕ್ಷರಿಗೂ ಸುಲಭವಾಯಿತು ಎಂದುಕೊಳ್ಳುತ್ತೇನೆ. ನಿಜಹೇಳಬೇಕೆಂದರೆ ನಾನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿ ಆಯ್ಕೆಯಾಗುತ್ತೇನೆ ಎಂದು ಕನಸು ಮನಸಿನಲ್ಲಿಯೂ ಯೋಚಿಸಿರಲಿಲ್ಲ. ಈ ಸ್ಥಾನವನ್ನು ಪಡೆಯಬಹುದು ಎಂದು ನನಗೆ ಎಂದೂ ಅನಿಸಿರಲಿಲ್ಲ. ಅದಕ್ಕಾಗಿ ನಾನು ಬರೆದೂ ಇಲ್ಲ. ಮತ್ತೆ ಈ ಸ್ಥಾನ ಬಹುತೇಕ ಶಿಕ್ಷಕ ಕ್ಷೇತ್ರದಿಂದ ಬಂದವರಿಗೇ ಮೀಸಲಾಗಿ ಬಂದಿರುವಂತದ್ದು. ಕೊನೇ ಪಕ್ಷ ಪ್ರೈಮರಿ ಶಾಲೆ ಮೇಸ್ಟರಾಗಿದ್ದರೂ ನಡೆಯುತ್ತದೆ. ಆದರೆ ಈ ವಿಷಯದಲ್ಲಿ ಈ ಸಲ ಉದಾರ ಮನಸ್ಸನ್ನು ತೋರಿಸಿದ್ದಾರೆ. ನನ್ನನ್ನು ಅಧ್ಯಕ್ಷನ್ನನಾಗಿ ಆಯ್ಕೆ ಮಾಡಿರುವುದು ಸಹಜವಾಗಿ ನನಗೆ ಖುಷಿ ತಂದಿದೆ.

ನಾನು ಹೈಸ್ಕೂಲಿನಲ್ಲಿದ್ದಾಗ ಗಾಂಧೀವಾದಿ ಹರ್ಡೀಕರ್ ಮಂಜಪ್ಪನವರ ಪತ್ರಿಕೆಯಲ್ಲಿ ವೀರ ಸಾವರ್ಕರ್ ಅವರ ಜೀವನ ಚರಿತ್ರೆ ಪ್ರಕಟವಾಗಿತ್ತು. ಅದನ್ನು ಓದಿದ ನನಗೆ ಬಹಳ ಸ್ಫೂರ್ತಿ ಬಂದುಬಿಟ್ಟಿತು. ಅಂದೇ ನಾನು ನನ್ನ ಮೊದಲ ಕವಿತೆ ವೀರ ಸಾವರ್ಕರ್‌ಗೆ ಎಂದು ಬರೆದು ಕಳಿಸಿದೆ. ಅದು ಅಚ್ಚಾಗಿಬಿಟ್ಟಿತ್ತು. ಇದರಿಂದ ನನಗೆ ಬಹಳ ಹುರುಪು ಬಂದುಬಿಟ್ಟಿತು. ನನ್ನ ಹೆಸರು ಅಚ್ಚಾಯಿತಲ್ಲಾ ಎಂಬ ಕಾರಣಕ್ಕೆ. ಹಾಗೆಯೇ ನಾನು ಬರೆದ ಕೆಲವು ಬರೆಹಗಳು ಕರ್ಮವೀರದಲ್ಲೂ ಪ್ರಕಟವಾಗತೊಡಗಿದವು. ಅದರಿಂದ ಸ್ಫೂರ್ತಿಗೊಂಡು ಮತ್ತೂ ಬರೆಯತೊಡಗಿದೆ ಅಷ್ಟೆ.


ಒಂದೊಂದು ದೃಷ್ಟಿಯಿಂದ ಒಂದೊಂದು. ಕುವೆಂಪು ಅವರ ರಾಮಾಯಣ ದರ್ಶನಂ ಮಹಾಕಾವ್ಯ ವಿಮರ್ಶೆ ನನಗೆ ಉತ್ತಮವೆನಿಸಿದೆ. ಕಾದಂಬರಿಗಳಲ್ಲಿ 'ಹಿಂದಿರುಗಿ ಬರಲಿಲ್ಲ', 'ಬೇಡಿ ಕಳಚಿತು ದೇಶ ಒಡೆಯಿತು', 'ರಕ್ತ ತರ್ಪಣ' ಇವು ಖುಷಿ ನೀಡಿವೆ. ಕವಿತೆಗಳನ್ನು ಹೆಚ್ಚು ಬರೆಯದಿದ್ದರೂ, ವ್ಯಾಕರಣ ಛಂದಸ್ಸು ದೃಷ್ಟಿಯಿಂದ ಇವು ಶ್ರೇಷ್ಠವಲ್ಲದಿದ್ದರೂ ಸಮಾಜಮುಖಿಯಾಗಿ ಬರೆದಿದ್ದೇನೆ.

ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕೆಂದು ಹೇಳುವುದಲ್ಲ. ಶಿಕ್ಷಣ ತಜ್ಞರು ಹೇಳುವ ಪ್ರಕಾರ ಮಗುವಿನ ಬೆಳವಣಿಗೆಗೆ ಮಾತೃಭಾಷೆಯ ಅಥವಾ ತಾಯಿನುಡಿಯ ಶಿಕ್ಷಣ ಅಗತ್ಯ. ತಾಯಿನುಡಿಯಲ್ಲಿ ಕಲಿಸುವುದು ಹೃದಯಕ್ಕೆ ತಟ್ಟುತ್ತದೆ. ಮೆದುಳಿಗೆ ತಲುಪುತ್ತದೆ. ಇಂದು ಇಂಗ್ಲಿಷ್ ಕಲಿತರೆ ಉದ್ಯೋಗ ಸಿಗುತ್ತದೆ ಎಂದು ಜನರು ನಂಬಿದ್ದಾರೆ. ಆದರೆ ಇದು ಪೂರ್ತಿ ಸತ್ಯವಲ್ಲ ಎನ್ನುವುದನ್ನು ಅರಿಯಬೇಕಾಗಿದೆ. ಇಂಗ್ಲಿಷ್ ಓದಿದವರಿಗೆಲ್ಲರಿಗೂ ನೌಕರಿ ಸಿಗುವುದಿಲ್ಲ. ಹೊಟ್ಟೆ ತುಂಬಿಸಿಕೊಳ್ಳಲು ಇಂಗ್ಲಿಷನ್ನೇ ಕಲಿಯಬೇಕು ಎಂಬ ಭಾವನೆಯಿಂದ ನಾವು ಹೊರಬರಬೇಕು. ಅಂದ ಮಾತ್ರಕ್ಕೆ ಇಂಗ್ಲಿಷನ್ನು ನಾವು ತ್ಯಜಿಸಬೇಕೆಂದು ಅಲ್ಲ. 200 ವರ್ಷಗಳಿಂದ ಇಂಗ್ಲಿಷಿನಿಂದ ನಾವು ಸಾಕಷ್ಟು ಪ್ರಯೋಜನವನ್ನೂ ಪಡೆದುಕೊಂಡಿದ್ದೇವೆ. ಒಂದು ಭಾಷೆಯಾಗಿ ಅದನ್ನು ಕಲಿಯುವುದರಲ್ಲಿ ಯಾವ ಸಮಸ್ಯೆಯೂ ಇಲ್ಲ. ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿರಲಿ. ಹಾಗೆಯೇ ಮತ್ತೊಂದು ಭಾಷೆಯಿಂದ ಪಡೆಯುವುದರಿಂದಲೇ ನಮ್ಮ ಭಾಷೆ ಬೆಳೆಯಲು ಸಾಧ್ಯ ಎನ್ನುವುದನ್ನೂ ನಾವು ಅರ್ಥಮಾಡಿಕೊಳ್ಳಬೇಕು. ನಮ್ಮ ಸಾಹಿತ್ಯದಲ್ಲಿ ಎಷ್ಟೊಂದು ಸಂಪತ್ತು ತುಂಬಿದೆ. ಇದನ್ನೆಲ್ಲಾ ಇಂಗ್ಲಿಷಿಗೆ ಅನುವಾದ ಮಾಡಿಕೊಂಡೇ ಓದಬೇಕೇ?

–ಕೋ. ಚೆನ್ನಬಸಪ್ಪ

ಹರ್ಷಕುಮಾರ್ ಕುಗ್ವೆ ಅವರ ಸಂದರ್ಶನದಲ್ಲಿ ಕೋಚೆ ಹೇಳಿದ ಕೆಲವು ಮಾತುಗಳು

ನೆಟ್ಟ ಹೊಂಗೆ ಸಸಿಗಳು ನೆರಳಾಗುವಷ್ಟು ಬೆಳೆಯಲಿಲ್ಲವೇಕೆ?



■ ಕೋಟಿಗಾನಹಳ್ಳಿ ರಾಮಯ್ಯ

ಮಾನ್ಯರೇ,

ಎಷ್ಟೋ ಕಾಲದ ನಂತರ ಆರಂಭದ ದಲಿತ ಚಳುವಳಿಯ ಭಾಗೀದಾರರು ಇಲ್ಲಿ ಒಂದೇ ವೇದಿಕೆಯಲ್ಲಿರುವುದು ಸಮಾಧಾನಕರ ವಿದ್ಯಾಮಾನ.ಇದಕ್ಕಾಗಿ ಸಂಘಟಕರಿಗೆ ನನ್ನ ಅಭಿನಂದನೆಗಳು. ಇದು ಅಕ್ಷರ ಬೇಸಾಯದ ಕಾಲ. ಕೆಲವರ ಮಾತುಗಳಿಗೆ ನೆಲ ಎಷ್ಟು ಹದಗೊಂಡಿರುತ್ತದೆ ಎಂದರೆ ಮುಂಗಾರಿನ ಕುಂಕುಮ ಭೂಮಿಯಲ್ಲಿ ಕೋಲು ನೆಟ್ಟರೆ ಕುಳಿ ಬೀಳುತ್ತದಲ್ಲ ಹಾಗಿರುತ್ತದೆ... ಇದಕ್ಕೆ ಕೂಸಿನ ತೋಳ್ಬಲವಿದ್ದರೂ ಸಾಕು. ಇನ್ನು ಕೆಲವರ ದೌರ್ಭಾಗ್ಯವೋ ಏನೋ ಅಂಥವರ ಪಾಲಿಗೆ ಭೂಮಿ ಹದಗೊಂಡಿರುವುದಿಲ್ಲ. ನಾನು ಈ ಎರಡನೆಯ ಗುಂಪಿಗೆ ಸೇರಿದವನು.ಇದುವರೆಗೂ ನನ್ನ ಮಾತುಗಳಿಂದ ಆಗಿರುವ ಲಾಭಕ್ಕಿಂತ ಎದೆಗೆ ಬಿದ್ದ ಏಟುಗಳೇ ಅಧಿಕ. ಆದ್ದರಿಂದ ಹೇಗೂ ಇರಲಿ ಎಂದು ಮಾತುಗಳನ್ನೇ ಅಕ್ಷರ ರೂಪಕ್ಕೆ ಇಳಿಸಿ ತಂದಿದ್ದೇನೆ.

ಮೊದಲ ಬಾರಿಗೆ ಈ ವಿಚಾರ ಸಂಕಿರಣಕ್ಕೆ ದೇವನೂರು ಮಹಾದೇವ, ಡಾ॥ ಸಿದ್ಧಲಿಂಗಯ್ಯ ಮತ್ತು ನನ್ನ ಮುಮ್ಮಾತುಗಳ ಬಗ್ಗೆ ಐಜೂರ್‌ರು ತಿಳಿಸಿದಾಗ (ಈಗ ವಿನ್ಯಾಸ ಬದಲಾಗಿದೆ,ಕೆ.ಬಿ.ಸಿದ್ದಯ್ಯನ ಭಾಷಣವಿದೆ) ಇದು ಕೇವಲ ದಲಿತ ಸಾಹಿತ್ಯಕ್ಕೆ ಒತ್ತುಕೊಡುವ 'ಸಂಕಿರಣ'ವೆಂದು ಭಾವಿಸಿರಲಿಲ್ಲ. ಬದಲಿಗೆ ಒಟ್ಟು ದಲಿತ ಚಳವಳಿ ನಡೆದು ಬಂದ ದಾರಿಯನ್ನು ನಮ್ಮ ಮೂರೂ ಜನರ ಕಣ್ಣುಗಳ ಮೂಲಕ ಹೊರಳಿ ನೋಡುವ ಪ್ರಯತ್ನವಿರಬಹುದೆಂದು ಭಾವಿಸಿದ್ದೆ. ಹೀಗೆ ಕೇವಲ ನಮ್ಮ ಮುವ್ವರ ಕಣ್ಣುಗಳ ಮೂಲಕವಷ್ಟೆ ಹೊರಳಿ ನೋಡುವುದು ಅದೆಷ್ಟೇ ಮಿತಿಯದ್ದಾಗಿದ್ದರೂ ಹಾಗು ಅಸ್ಪೃಶ್ಯ ನೆಲೆಯ ಒಂದು ಶಾಖೆಯದಾಗಿದ್ದರೂ ಅದಕ್ಕೊಂದು 'ಪರಿಪ್ರೇಕ್ಷ' ಒದಗಿ ಬರುವ ಸಾಧ್ಯತೆ ಇತ್ತು. ಇದುವರೆಗೂ ದಲಿತ ಚಳವಳಿಯನ್ನು ವ್ಯಕ್ತಿಗತ ನೆಲೆಗಳಿಂದಲೇ ಅಳೆಯುತ್ತಾ 'ಸಮಷ್ಠಿ'ಯದೆಂದು ಬಿಂಬಿಸಿರುವ ಚರಿತ್ರೆಯಷ್ಟೇ ದಾಖಲಾಗಿರುವುದು ಎಂಬುದಂತೂ ನಿರ್ವಿವಾದದ ಸಂಗತಿ. ದಲಿತ ಚಳವಳಿಯ ಯಾವುದೇ ಚರಿತ್ರೆಯ ಪುಟ ತೆರೆದರೂ ಅಲ್ಲಿ ಕಾಣುವುದು ಬಿ.ಕೆ, ದೇವನೂರು, ಸಿದ್ದಲಿಂಗಯ್ಯ ಅಷ್ಟೇ, ಇವರ ನಾಯಕತ್ವದಲ್ಲಿ ದಲಿತ ಚಳವಳಿ ಆರಂಭವಾಯಿತೆಂದು ಅವರ ಕಣ್ಣೋಟಗಳಷ್ಟೆ ದಲಿತ ಚಳವಳಿಯ ಚಾಲಕ ಶಕ್ತಿಯಾಗಿತ್ತೆಂದು ಬಿಂಬಿಸಿರುವ ಬಗೆಗಳೇ ಬಹುಪಾಲು. ಇನ್ನುಳಿದಂತೆ ಕೆ.ಬಿ.ಸಿದ್ಧಯ್ಯ, ಗೋವಿಂದಯ್ಯ,ಹನುಮಂತಯ್ಯ ಅಥವಾ ಇನ್ನೂ ಒಂದೋ ಎರಡೋ ಹೆಸರುಗಳು ಈ ಪಟ್ಟಿಯಲ್ಲಿ ಕಂಡಿದ್ದಿರಬಹುದು; ಇದಿಷ್ಟೇ ಹೊರತು ಇದರಾಚೆಗೆ ವ್ಯಕ್ತಿಗತ ನೆಲೆ ದಾಟಿ ಆ ಹೊತ್ತಿನ ಚಾರಿತ್ರಿಕ ಸನ್ನಿವೇಶಗಳ ಪ್ರಧಾನ ಭಿತ್ತಿಯಲ್ಲಿ ವ್ಯಕ್ತಿಗತ ನೆಲೆಗಳು ಕೇವಲ ಆಕಸ್ಮಿಕ ಪಾತ್ರವನ್ನಷ್ಟೇ ವಹಿಸಿದ್ದು ಎನ್ನುವಂತಹ ಕಟ್ಟುವಿಕೆ ಇನ್ನೂ ಸಾಧ್ಯವಾಗಿಲ್ಲ, ಇರಲಿ... ಇಂತದ್ದರಲ್ಲಿ ಮೇಲಿನಂತೆ ಯೋಚಿಸುವವರ ಮಿತಿ ಅದೇನೇ ಇದ್ದರೂ ನಮ್ಮ ಮುವ್ವರ ಮೂಲಕ ಬಿಚ್ಚಿಕೊಳ್ಳಬಹುದುದಾಗಿದ್ದ ಫ್ಲಾಶ್‌ಬ್ಯಾಕ್ ರೀಲುಗಳಿಗೆ ಒಂದು ಸಿಫಿಯಾ ಕಲರ್ ಸಿಗುವ ಸಾಧ್ಯತೆ ಇತ್ತು. ಇತ್ತೀಚಿನ ತಂತ್ರಜ್ಞಾನದ ಆವಿಷ್ಕಾರದಿಂದ ಬ್ಲಾಕ್ ಅಂಡ್ ವೈಟ್ ನೆಗೆಟೀವ್‌ಗೂ ಬಣ್ಣ ಹಚ್ಚುವುದು ಸಾಧ್ಯವಿರುವಂತೆ ಅದು ಈಸ್ಟ್‌ಮನ್ ಕಲರ್ ಆಗದಂತೆ 'ಟೋನ್ ಡೌನ್'ಆಗಿ ಸಿಫಿಯ ಕಲರ್‌ಗಷ್ಟೆ ನಿಲ್ಲುವ ಸಾಧ್ಯತೆ ಇತ್ತು. ಚರಿತ್ರೆಗೆ ಬಣ್ಣ ಹಚ್ಚಿದಷ್ಟೂ ವಸ್ತು ನಿಷ್ಠತೆಯ ಹತ್ಯೆಯಾಗುತ್ತದೆ ಅಂತೆಯೇ ಆತ್ಮಹತ್ಯೆಯೂ ಆಗಬಲ್ಲದು. ಚಳುವಳಿಯ ಭಾಗೀದಾರರೂ, ಅದರ ನೆನಪುಗಳ ಹಂಗಿನ ಅರಮನೆಯಲ್ಲಿರುವವರೂ ಈ ವಿದ್ವತ್ ಸಭೆಯಲ್ಲಿ ಹಾಜರಿರುವುದರಿಂದ ಕ್ಷುಲ್ಲಕವೆನಿಸಬಹುದಾದ ಇಂತಹ ಎರಡು ಸಂಗತಿಗಳನ್ನು ಇಲ್ಲಿ ಉಲ್ಲೇಖಿಸಬಹುದೆನಿಸುತ್ತದೆ.

ಒಂದು ಬಣದ ಹೋರ್ಡಿಂಗ್ ನೋಡಿದೆ. ಅದರಲ್ಲಿ "ಎಷ್ಟೋ ಕಾಲದ ನಂತರ ದಲಿತರ ಗುಡಿಸಿಲಲ್ಲಿ ಒಂದು ದೀಪ ಹಚ್ಚಿದ್ದೇನೆ; ಆರದಂತೆ ನೋಡಿಕೊಳ್ಳಿ" ಎಂಬ ಬಿ.ಕೃಷ್ಣಪ್ಪನವರು ಹೇಳಿದರೆನ್ನಲಾದ ಹೇಳಿಕೆ ಇದೆ. ಹೌದು ಇದನ್ನು ಹೇಳಿದವರು ಬಿ.ಕೆ.ಯವರೇ; ಅನುಮಾನ ಇಲ್ಲ. ಚುನಾವಣೆಗೆ ಸಂಬಂಧಿಸಿದಂತೆ ತೆಗೆದು ಕೊಂಡ ದಸಂಸ ನಿರ್ಣಯಕ್ಕೆ ಸಂಬಂಧಿಸಿ ತಿಪಟೂರಿನ ಸಭೆಯಲ್ಲಿ ಹೇಳಿದ ಮಾತಿದು. ಆದರೆ ಅವರು "ನಾನು ಹಚ್ಚಿದ್ದೇನೆ" ಎಂದೇನೂ ಹೇಳಲಿಲ್ಲ. ಹೇಳಿದ್ದು, "ಎಷ್ಟೋ ಕಾಲದ ನಂತರ ದಲಿತರ ಗುಡಿಸಲಲ್ಲಿ ಒಂದು ದೀಪ ಬೆಳಗುತ್ತಿದೆ. ಹೊರಗೆ ಬಿರುಗಾಳಿ ಬೀಸುತ್ತಿದೆ ; ಆರದಂತೆ ನೋಡಿಕೊಳ್ಳಿ" ಎಂದು, ಬೇಕಿದ್ದಲ್ಲಿ ಇಲ್ಲಿ ಆ ಮಾತು ಕೇಳಿದವರಿದ್ದಾರೆ. ಅವರೇ ತುಲನೆ ಮಾಡಿ ತೀರ್ಮಾನ ಕೊಡಬಹುದು.

ಇನ್ನೊಬ್ಬರು ವಿಶ್ವವಿದ್ಯಾನಿಲಯ ಪಂಡಿತರು ಕನ್ನಡ ಸಾಹಿತ್ಯ ಅಕ್ಯಾಡೆಮಿಗೆ ಒಂದು ಪುಸ್ತಕ ಸಂಪಾದಿಸಿಕೊಟ್ಟಿದ್ದಾರೆ. ಅದರಲ್ಲಿ ದಲಿತ ಚಳವಳಿಯ ಕುರಿತು ಮಹನೀಯರೊಬ್ಬರ ಲೇಖನ ಇದೆ. ಆ ಲೇಖನದಲ್ಲಿ "ಬಿ.ಕೆಯವರು ಬೀಡಿ, ಸಿಗರೇಟು ಸೇದುತ್ತಿರಲಿಲ್ಲ. ಹೆಂಡ ಕುಡಿಯುತ್ತಿರಲಿಲ್ಲ, ಆದ್ದರಿಂದಲೇ ದಲಿತ ಚಳವಳಿ ಬಲಿಷ್ಟವಾಗಿ ಬೆಳೆಯಿತು" ಎಂದಿದ್ದಾರೆ. ನನಗೆ ನೆನಪಿರುವಂತೆ "ಹೋರಾಟದ ಹಾಡುಗಳು" ಮೊಟ್ಟ ಮೊದಲು ಪ್ರಕಟ ಆದಾಗ, ಅದರ ಮುಖಪುಟದ ಶೀರ್ಷಿಕೆಯನ್ನು ದೇವನೂರು ಮಹಾದೇವ ಬೀಡಿ ತುಂಡನ್ನು ಕೆಂಪು ಇಂಕಿನ ಬಾಟ್ಲಿಯಲ್ಲಿ ಅದ್ದಿ ಬರೆದರು. ಜೊತೆಯಲ್ಲಿ ಗೋವಿಂದಯ್ಯನೂ ಇದ್ದ. ಇದಕ್ಕೆ ನಾನೇ ಕಣ್ಸಾಕ್ಷಿ. ನಾಗಸಂದ್ರ ಭೂ ಹೋರಾಟದಲ್ಲಿ ನಾವೆಲ್ಲ 'ಹೆಂಡ ಬೇಡ.ಭೂಮಿ ಬೇಕು ಎಂಬ ಹಿಪೋಕ್ರೆಟಿಕ್ ಸ್ಲೋಗನ್ ಕೂಗುತ್ತಿದ್ದಾಗ ಆಕೆ 'ಹೆಂಡ ಯಾಕೆ ಬೇಡ.. ಹೆಂಡಾನೂ ಬೇಕು.ಭೂಮಿನೂ ಬೇಕು ಎಂದದ್ದು ಆತ್ಮದ ನುಡಿಯಂತೆ ಇನ್ನೂ

ನನ್ನ ಕಿವಿಯಲ್ಲಿದೆ. ಅಂತೆಯೇ ಈಗ ಬಹು ಭರದಿಂದ ಸಾಗಿರುವ 'ಎದೆಗೆ ಬಿದ್ದ ಅಕ್ಷರ' ಬೇಸಾಯದಲ್ಲೂ ಹಲವು ಸಂದರ್ಭ ಮರೆತ ಅಥವಾ ಮುಚ್ಚಿರುವ ಅಕ್ಷರಗಳಿವೆ. ಅದನ್ನೆಲ್ಲಾ ತಿಪ್ಪೆ ಕೆದಕುವ ಕೋಳಿಯಂತೆ ಕೆದಕುತ್ತಾ ಹೋಗುವುದು ಉಚಿತವಲ್ಲವೆಂದು ಅನೇಕರು ನನಗೆ ಬುದ್ಧಿವಾದ ಹೇಳುತ್ತಾರೆ. ಅವರ ನಿಲುವು ಸರಿ ಇರಬಹುದು. ಆದರೆ 'ಮಡೆ'ಸ್ನಾನ 'ಎಡೆ'ಸ್ನಾನ ಆಗುವ ಒಂದಕ್ಷರ ಪಲ್ಲಟವಾಗುವ ಮೋಡಿಯಿಂದ ಭಾರತೀಯ ಮನೋಧರ್ಮ ಹೀನಾಯಗೊಳ್ಳುತ್ತದಲ್ಲ ಎಂಬ ನೋವು ನನ್ನದು. ಉದಾಹರಣೆಗೆ ರವೀಂದ್ರನಾಥ ಠಾಗೂರರನ್ನೇ ತೆಗೆದುಕೊಳ್ಳಿ. ಎಂತಹ ಸಂವೇದನಾಶೀಲ ಮನಸ್ಸು, ಭಾರತೀಯ ಸಾಹಿತ್ಯ, ಸಂಗೀತ, ರಂಗಭೂಮಿಗೆ ಅವರದು ಅದೆಂತಹ ಕೊಡುಗೆ. ಆದರೆ ಯರವಾಡ ಜೈಲಿನಲ್ಲಿ 'ಪೂನಾ ಒಪ್ಪಂದ'ಕ್ಕೆ ಸಹಿಬಿದ್ದಾಗ ಆ ಮೊದಲು ಅಂಬೇಡ್ಕರ್‌ರು ಒತ್ತಾಯಿಸಿದ್ದಕ್ಕಿಂತ ಎರಡು ಪಟ್ಟು ಹೆಚ್ಚು ಪಾಲಿನ ಮೀಸಲು ಕ್ಷೇತ್ರಗಳು ಬಂಗಾಳ ಪ್ರಾಂತ್ಯದಲ್ಲಿ ದಲಿತರ ಪಾಲಿಗೆ ದಕ್ಕಿಬಂದವು. ಆಗ ಮಾನ್ಯ ಠಾಕೂರ್‌ಜಿ ತಲೆಗೆ ಸುತ್ತಿಕೊಂಡಿದ್ದ ಶಾಲು ಬಿಚ್ಚಿ ಅದರಲ್ಲಿ ಮುಖಮುಚ್ಚಿಕೊಂಡು ಗಾಂಧೀಜಿಯವರ ತೊಡೆಯ ಮೇಲೆ ಬಿದ್ದು ಬಿದ್ದು ಅತ್ತರಂತೆ! ಯಾಕಾಗಿಬಹುದು. ನಾನು ಇಂತಹ ಕ್ಷುದ್ರ ಕ್ಷುಲ್ಲಕ ಸಂಗತಿಗಳಿಂದಲೇ ಇತಿಹಾಸದ ಮರ್ಮ ಅರಿಯುವವನು. ದಲಿತ ಚಳವಳಿಯಾದರೂ ಅಷ್ಟೆ. ರಷ್ಯಾ ಕ್ರಾಂತಿ ಆದರೂ ಅಷ್ಟೆ.

ಈ 'ನಾಂ ಮೂವರ್' ಅಂದರೆ ಧರೆಗೆ ದೊಡ್ಡವರೆಂದೇ ಗೋವಿಂದು ಕರೆಯುತ್ತಿದ್ದ ಕಾಮ್ರೇಡ್ ಸಿದ್ದು, ದೇಮ,ಮತ್ತು ರಾಂ ಅಥವಾ ರಾಮು ಎಂದೇ ಕರೆಯಲಾಗುತ್ತಿದ್ದ ನಾನು .... (ಮಣಿರತ್ನಂ ಸಿನಿಮಾ ಒಂದಿದೆ 'ನಾಂ ಇರುವರ್'... ದ್ರಾವಿಡ ಚಳುವಳಿಯ ಹಿನ್ನೆಲೆಯದು'.) ಅದೇ ರೀತಿ ಈ ಸಂಕಿರಣವೂ ಆಗಬಹುದೆಂದು ಭಾವಿಸಿದ್ದೆ. ಯಾಕೆಂದರೆ 'ಎದೆಗೆ ಬಿದ್ದ ಅಕ್ಷರ'ದಲ್ಲಿ ಸ್ವಯಂ ದೇಮ ಅವರೇ ಇಂತಹ ಧಾರೆಗಳನ್ನು ಗುರುತಿಸಿದ್ದಾರೆ. ಆ ಪ್ರಕಾರ ಅವರದು ಸೋಷಿಯಲಿಸ್ಟ್ ಹಿನ್ನೆಲೆ ಎಂದೂ, ಸಿದ್ದು ಅವರದು ಮಾರ್ಕ್ಸಿಸ್ಟ್ ಬ್ಯಾಕ್‌ಗ್ರೌಂಡ್ ಎಂದೂ ಬಿಂಬಿತವಾಗಿದೆ. ನನ್ನದಂತೂ ದಲಿತ ಚಳವಳಿಯಲ್ಲಿ ಭೂಗತನೆಲೆ. ಭೂಗತ ನೆಲೆ ನಕ್ಸಲೀಯ ಚಳವಳಿಯ ಅಂತರಂಗ ಭಾಗ. ನನಗೆ ಈ ನೆಲೆಯನ್ನು ಕೊಂಚ ಬೇರೆ ರೀತಿಯಲ್ಲಿ ಓದುವ ಕನ್ನಡಕ ಸಿಕ್ಕಿದ್ದರಿಂದ ಹಾಗು ಭೌಗೋಳಿಕವಾಗಿ ಕೋಲಾರ ಸೀಮೆ. ರಾಯಲ ಸೀಮೆಗೆ ಅಂಟಿಕೊಂಡಿರುವುದರಿಂದ ಅದರ ಮಣ್ಣಿನ ಗುಣ ಅರಿಯುವುದು ಸಹಜ ಮತ್ತು ಸುಲಭವಾಗಿತ್ತು. ಅದ್ದ-ರಿಂದ ಈ ಸಂಕಿರಣದ ಫ್ಲ್ಯಾಷ್‌ಬ್ಯಾಕ್ ಸಿನಿಮಾ ರೀಲುಗಳಿಗೆ ಮೇಲಿನಂತೆ ಗಾಢ ಈಸ್ಟ್‌ಮನ್ ಕಲರ್ ಬದಲಿಗೆ ಒಂದು ಸಹಜ ಬಣ್ಣ ಸಿಗಬಹುದಿತ್ತೆನಿಸಿತ್ತು. ಸ್ಪೀಲ್ ಬರ್ಗ್ ಅದೆಷ್ಟೇ ತಂತ್ರಜ್ಞಾನದ ಔನ್ನತ್ಯವಿದ್ದಾಗ್ಯೂ ತನ್ನ "ಸ್ಲಿಂಡ್ಲರ್ಸ್‌ಲಿಸ್ಟ್" ಸಿನಿಮಾವನ್ನು ಬ್ಲಾಕ್ ಅಂಡ್ ವೈಟ್‌ಗೊಳಿಸಲು ಬ್ಲೀಚ್‌ಗೊಳಿಸುವ ಕರ ಕೌಶಲ್ಯ ಅವಲಂಬಿಸಿದ್ದರ ಹಿಂದೆ ಹಾಲಿವುಡ್‌ನ ಯಹೂದಿ ಯಜಮಾನ್ಯ ಲೇಪ ಇರುವುದು ಕೂಡ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ಒಂದು ಬಗೆಯೇ ಆಗಿದೆ.

ಆದರೆ ಈ ಸಂಕಿರಣ ಸಾಹಿತ್ಯದತ್ತ ವಾಲಿದ್ದು ಇದರ ಸ್ವರೂಪ ಹಲವು ಅನುಪಾತಗಳಲ್ಲಿ ಹಂಚಿಕೆಯಾಗಿದ್ದು... ಇದೆಲ್ಲಾ ಅರಿವಾಗಿದ್ದು ಆ ನಂತರವೇ, ಇದಾದ ಮೇಲೆ ನನಗೆ ಈ ಸಂಕಿರಣದಲ್ಲಿ ಭಾಗವಹಿಸುವ ಕಿಂಚಿತ್ ಆಸಕ್ತಿಯಾಗಲಿ, ಆಶಾಭಾವವಾಗಲಿ ಉಳಿಯಲಿಲ್ಲ.

ಆದರೆ ಕೊಟ್ಟ ಮಾತಿಗೆ ತಪ್ಪಬಾರದೆಂಬ ಏಕೈಕ ಕಾರಣಕ್ಕಷ್ಟೆ ನಾನಿಲ್ಲಿ ಬಂದು ಭಾಗವಹಿಸುತ್ತಿರುವುದು.

ಕಳೆದ ಕೆಲವಾರು ವರ್ಷಗಳಿಂದ ದಲಿತ ಚಳುವಳಿ ಕುರಿತಾದ ಪೋಸ್ಟ್‌ಮಾರ್ಟಂ ಮಾದರಿಗಳು, ನನ್ನಲ್ಲಿ ತೀವ್ರ ಜಿಗುಪ್ಸೆಯ ಹೊರತು ಬೇರಾವ ಆಶಾಭಾವನೆಯನ್ನೂ ಹುಟ್ಟಿಸಿಲ್ಲ. ಪ್ರಸಕ್ತ ಅದರ political activismನಂತೆಯೇ. ಅಂತೆಯೇ ಈ ವಲಯಗಳಲ್ಲಿ ನಡೆದಿರುವ ಕಲಾಪಗಳು ಈ ಚಳವಳಿಯ ಸ್ಥಗಿತ ನೆಲೆಯನ್ನು ಜೀವಗೊಳಿಸುವಂತೆಯೂ ಮರುಪೂರಣ ಗೊಳಿಸುವಂತೆಯೂ ತೋರುತ್ತಿಲ್ಲ. ಇತ್ತೀಚಿನ ಇದರ inclusive – exclusive ಅಕ್ಯಾಡೆಮಿಕ್ ಪರಿಭಾಷೆಯ ಕಸರತ್ತುಗಳಿಂದ ಕೂಡ ಅದರ ಸಾಯುತ್ತಿರುವ ಬೇರನ್ನು ಚಿಗುರಿಸುವುದಕ್ಕೆ ತಕ್ಕ ಜೀವ ದ್ರವ್ಯ ಯಾನೆ ಒಳನೋಟಗಳ ಗ್ಲೂಕೋಸ್ ಬಾಟಲೊಂದನ್ನೂ ಬಳುವಳಿಯಾಗಿ ನೀಡುತ್ತಿಲ್ಲ. ಬದಲಿಗೆ ಈ ಹೊತ್ತಿನ ಸಮುದಾಯ ವಿಘಟನೆಯ



ಆತ್ಮ ದ್ರೋಹಕ್ಕೆ ಹಾಗೂ ವಯಕ್ತಿಕ ನೆಲೆಗಳ 'ಕೆರಿಯರಿಸಂ'ಗೆ ತಕ್ಕ ಮೆಟ್ಟಿಲುಗಳನ್ನು ಕಟ್ಟುತ್ತಾ 'ಕಂಫರ್ಟ್‌ಜೋನ್'ಗೆ ಬೇಕಾದ ಕಿರುಕಿಂಡಿಗಳನ್ನಷ್ಟೇ ನಿರ್ಮಿಸಿಕೊಳ್ಳುವ ಪೈಪೋಟಿಗಷ್ಟೇ ದಾರಿಯಾಗಿರುವುದು ಯಾವ ತೆರೆದ ಕಣ್ಣಿಗೂ ಕಾಣಬಹುದು. ಮತ್ತೂ ಹೇಳುವುದಾದರೆ ಈಗ ನಡೆದಿರುವ 'ಎದೆಗೆ ಬಿದ್ದ ಅಕ್ಷರ'ದ ಬೇಸಾಯವೂ ಕೂಡ ಇದಕ್ಕಿಂತ ಹೊರತಲ್ಲ. ಅಕ್ಷರ ಯಜಮಾನ್ಯದ ಗುತ್ತಿಗೆದಾರರು ಸಾಹಿತ್ಯ ಪೌರೋಹಿತ್ಯ ವಹಿಸುತ್ತಾ ಮುಂಬರುವ ಸಾಂಸ್ಕೃತಿಕ ಕ್ರಾಂತಿಯ ಹೊಸ ಬೇಸಾಯವೆಂದು ಇದನ್ನು ಬಿಂಬಿಸುತ್ತಿರುವುದಂತೂ ಸಮಕಾಲೀನ ರಾಜಕಾರಣದ ಹಾಸ್ಯಾಸ್ಪದ ಅಧ್ಯಾಯವಾಗಿಯೇ ನನಗೆ ತೋರುತ್ತಿರುವುದು. ಚುನಾವಣೆ ಕಾಲಕ್ಕೆ ಸಂತೆಯ ಹೊತ್ತಿಗೆ ಮೂರು ಮೊಳ ನೇಯುವ ಬಣ ಬಣಗಳೂ, ದಳ ದಳಗಳೂ ಒಕ್ಕೂಟ ಕಟ್ಟಿಕೊಳ್ಳುತ್ತಿರುವುದಂತೂ ವರ್ತಮಾನದ ದುರಂತವೇ ಆಗಿದೆ.

ಆದ್ದರಿಂದ ತನ್ನ ಬೇರನ್ನು ಎಂದೋ ಮರೆತಿರುವ ಇಂಥ 'ಚಿಂತನ ಮಂಥನಗಳು' ಯಾವ ನಿರೀಕ್ಷಿತ ನೆರಳನ್ನೂ ನೀಡಲಾರವು. ಬೆಳದಿಂಗಳನ್ನೂ ಉಕ್ಕಿಸಲಾರವು. ಯಾರೋ ಮೈಸೂರಿನ ನೆರಳು ತಜ್ಞರೊಬ್ಬರು ಹೊರಗೆ ರೆಂಬೆಗಳನ್ನು ಹೆಣೆದು ನೆರಳಿನ ಚಪ್ಪರ ಮಾಡುವುದರಲ್ಲಿ ಪರಿಣಿತರಂತೆ. ಒಮ್ಮೆ ಆದಿಮಕ್ಕೆ ಅವರನ್ನು ಕರೆಸಿಕೊಳ್ಳುವ ಇರಾದೆ ಇತ್ತು. ಆದರೆ ನೆಟ್ಟ ಹೊಂಗೆ ಸಸಿಗಳು ನೆರಳಾಗುವಷ್ಟು ಬೆಳೆದಿರಲಿಲ್ಲವಾಗಿ ಆ ಬ್ರಿಲಿಯಂಟ್ ಐಡಿಯಾನ ಕೈಬಿಡಬೇಕಾಯಿತು. ಚಳವಳಿಯ ಈ ಹೊತ್ತಿನ ವಿದ್ಯಮಾನಗಳು ನನಗೆ ಅಂತಹ ಒಂದು ಪ್ರಯೋಗವನ್ನಷ್ಟೇ ನೆನಪಿಸುವುದು. ಇದು ಬಹುಶಃ ನನ್ನ ದೃಷ್ಟಿದೋಷದ ಕಾರಣವಾಗಿಯೂ ಇರಬಹುದು.



"ದಲಿತ ಸಾಹಿತ್ಯ" ವೆಂಬ ಪ್ರಭೇಧವು ಒಟ್ಟು ದಲಿತ ಅಸ್ತಿತ್ವ ರಾಜ-ಕಾರಣದ ಒಂದು ಶಾಖೆಯಾಗಿಯಷ್ಟೆ ಹುಟ್ಟು ಪಡೆದಿರುವುದು ಎಂಬುದು ನನ್ನ ಗ್ರಹಿಕೆ, ಅದನ್ನೇ ಒಂದು 'ಕಳಸ' ದಂತೆ ನೋಡುವವರಿಗೆ 'ರಾಜಕಾರಣ ಮತ್ತು ಸೌಂದರ್ಯ'ಗಳ ಬೆಸುಗೆಯ ವ್ಯಾಖ್ಯಾನ-ಸಮೀಕರಣದ ಸೊಗಸು ದಕ್ಕಿರಬೇಕಷ್ಟೆ. ಬೇರು ಮರೆತು ಮರದ ಕಾಯಿಗಳನ್ನಷ್ಟೇ ಕಣ್ಣಿಗೆ ತುಂಬಿಕೊಂಡವರು ಹಣ್ಣು, ಕಾಯಿ ಮಾರಿಕೊಳ್ಳುವ ದಲ್ಲಾಳಿಗಳಾಗಬಹುದಷ್ಟೇ ಹೊರತು ಈ ನೆಲೆಯ ತುರ್ತಿನ ಬೇಡಿಕೆಯಾಗಿರುವ ಪ್ರಜಾ ತಾಂತ್ರಿಕ - ಸಾಂಸ್ಕೃತಿಕ ಕ್ರಾಂತಿಯ ನೊಗ ಹೊರುವ ಬೇಸಾಯಗಾರರಾಗುವುದು ಕಷ್ಟ. ಈ ನೆಲದ ಸಾಂಸ್ಕೃತಿಕ ಯಜಮಾನ್ಯ ನವೋತ್ತರ, -ಆಧುನಿಕೋತ್ತರ ಹರಿಕಾರಿಕೆಯ ರೂಪದಲ್ಲೂ ಸೂಕ್ಷ್ಮ ರಕ್ತನಾಳಗಳಿಗೂ ವ್ಯಾಪಿಸಬಲ್ಲದು ಎಂಬ ಎಚ್ಚರದವರೆಗೆ ಇಂದು ದಲಿತ ಪ್ರಜ್ಞೆ ವಿಸ್ತಾರಗೊಳ್ಳುವ ಅಗತ್ಯವಿದೆ.

ಇನ್ನು ಚಳವಳಿಯ ಬೇರಿನಿಂದ ನೇರ ಸಾರ ಹೀರುವ ಚಾರಿತ್ರಿಕ ಅವಕಾಶಗಳಿಂದ ವಂಚಿತವಾಗಿರುವ ತದನಂತರದ ತಲೆಮಾರಿನ ಸೃಜನಶೀಲ ತಳಿ ಬೆಳೆ ಕೂಳೆ ಬೆಳೆಯಾಗಿರುವುದು ಅದರ ಅಭಿವ್ಯಕ್ತಿಯಲ್ಲೇ ಎದ್ದು ಕಾಣುತ್ತಿದೆ. ನೆನಪುಗಳ ಹಂಗಿನ ಹವಾಮಹಲುಗಳು, ಚಿಗುರು ಮೀಸೆಯವರಲ್ಲೂ "ಬುದ್ಧ, ಬಸವ, ಅಂಬೇಡ್ಕರ್" ಮಂತ್ರ ಘೋಷವನ್ನಷ್ಟೇ ಮೊಳಗಿಸಬಲ್ಲುದೇ ಹೊರತು ಈ ಹೊತ್ತಿಗೆ ಬೇಕಾದ 'ನುಡಿ ಕಟ್ಟು' ಕಟ್ಟುವ ಹೆಗಲ ನೊಗ ಹೊರುವುದಕ್ಕೆ ಅಣಿಗೊಳಿಸುವುದಿಲ್ಲ. ಬದಲಿಗೆ ಆಧುನಿಕೋತ್ತರ ಯಜಮಾನ್ಯದ 'ಬೆಂಬಲ ಬೆಲೆ'ಗಳಿಗೆ ಇಲ್ಲವೇ ಸ್ವೀಕೃತಿ ಮುದ್ರೆಗಳಿಗೆ ದೈನೇಸಿ ಪಡುವ ದುಸ್ಥಿತಿ ಈ ಹೊತ್ತಿನ ಸಾಹಿತ್ಯ ಸಂಸ್ಕೃತಿ, ರಂಗಭೂಮಿ ವಲಯಗಳ ಇವತ್ತಿನ ಸಂವೇದನಾಶೀಲ ಮಾರುಕಟ್ಟೆಯಲ್ಲಿ ಎದ್ದು ಕಾಣುತ್ತಿರುವ ನಿತ್ಯ ವಿದ್ಯಮಾನವೇ ಆಗಿದೆ. ಇದು ಈ ಪೀಳಿಗೆಯ ಅಜೀರ್ಣ ರೋಗ ಚಿಹ್ನೆಯಾದರೆ, ಇನ್ನು ಇದರ ಹಳೆ ತಲೆಮಾರಿನ ವೃದ್ಧ ಭೀಷ್ಮ ನೆರೆಗೂದಲ ಒಂದೊಂದೆ ಎಳೆಯೂ ಅಲ್ಲಮನಲ್ಲಿಗೆ ಸಂಗಮಿಸಿ 'ಕೂಡಲ ಸಂಗಮ'ದ ಗ್ರೇನೇಟು ನೀರಿನಲ್ಲಿ ಈಜ ಬಯಸುತ್ತವೆ. ಈ ದಿಕ್ಕಿನಲ್ಲಿ ಚರಿತ್ರೆಯನ್ನು ಅದರ ಮರೆತ ಯಾ ಮುಚ್ಚಿಟ್ಟ ನೆಲೆಗಳಿಂದ ನೋಡುವ ನೋಟವೊಂದನ್ನು ಹಾಗೂ ಅಭಿವ್ಯಕ್ತಿಯಲ್ಲಿ ಈ ಹೊತ್ತಿಗೆ ಬೇಕಾದಂತಹ ನುಡಿಕಟ್ಟನ್ನು ಒಡೆದು ಕಟ್ಟುವ ಅಥವಾ ಮುರಿದು ಕಟ್ಟುವ ಪ್ರಯತ್ನ ಆದ್ಯತೆಯದಾಗಬೇಕೆನ್ನುವುದು ನನ್ನ ಅಳಲು.

ಕೊನೆಯದಾಗಿ ಈ ದಲಿತ ಸಾಹಿತ್ಯ ಪ್ರಭೇಧದಾಚೆ ದಲಿತ ಅಸ್ತಿತ್ವ ರಾಜಕಾರಣವನ್ನೇ ಪ್ರಧಾನ ಭಿತ್ತಿಯಾಗಿಸಿಕೊಂಡಿದ್ದ ದಲಿತ ಚಳವಳಿ . . . ಹಲವು ಬಣ್ಣಗಳ, ಹಲವು ಎಳೆಗಳ ನೇಯ್ಗೆಯಿಂದ

ಕಂಗೊಳಿಸುತ್ತಿದ್ದ ಒಂದು ವಸ್ತ್ರವಾಗಿತ್ತು. ಅನನ್ಯತೆಯ ಆ ಕೂಡು ನೇಯ್ಗೆ ಇಂದು ಒಂದೊಂದು ಎಳೆಯೂ ತಂತಾನೆ ಕಿತ್ತು-ಕೊಂಡು ತನ್ನದೇ ಕೂಡು ಬಿಂದುಗಳನ್ನು ಕಟ್ಟಿಕೊಳ್ಳುತ್ತಿರುವುದು ಈ ಹೊತ್ತಿನ ಪ್ರಕ್ರಿಯೆಯಾಗಿದೆ. ಹೀಗಾಗಿ 'ದಲಿತ ರಾಜಕಾರಣ' ವಿನ್ಯಾಸ ಕಳೆದುಕೊಂಡು ತನ್ನ ಜೀವ ಕಳೆಯ ಚೆಲುವು ಮಾಸಿ ಬಣ್ಣಗೆಟ್ಟ ಚಿಂದಿ ವಸ್ತವಾಗಿದೆ. ಒಟ್ಟಾರೆ ಈ ಹೊತ್ತಿನ ಸ್ಥಿತಿ. . .

ಶುಚಿಗೊಳಿಸುವವರು ಯಾರು ?

ಚಳವಳಿಯ ಚರಿತ್ರೆಯನ್ನು ವ್ಯಕ್ತಿ ನೆಲೆಗೆ ಮಿತಿಗೊಳಿಸಿ ಕಟ್ಟಿರುವ ರೀತಿಗಳಿಂದಾಗಿ ಅದು ಬಿ.ಕೃಷ್ಣಪ್ಪ ಮತ್ತು ದೇವನೂರ ಮಹಾದೇವರ ಎರಡು ಕಾಲಿನ ನಡಿಗೆಯ ರೂಪದಲ್ಲಿ ಮಂಡಿತವಾಗಿದೆ. ಈ ಎರಡು ಕಾಲುಗಳೂ ಒಂದೊಂದು ದಿಕ್ಕಿಗೆ ನಡೆಯಲು ಆರಂಭಿಸಿದ್ದು, 'ಜನಕಲಾ ಮೇಳ' ಸಮಾವೇಶದ ಫಲವಾಗಿ. ಬಿ.ಕೆ. ಯವರ ತಪ್ಪು ನಡಿಗೆ ಕೋಲಾರ ಲೋಕಸಭಾ ಮೀಸಲು ಕ್ಷೇತ್ರಕ್ಕೆ ಒಯ್ದರೆ ಮುಂದೆ ದೇವನೂರ ಮಹಾದೇವರ ಇನ್ನೊಂದು ದಿಕ್ಕಿನ ತಪ್ಪು ನಡೆ ಇಂಕ್ಯುಬೇಟರ್ ಕೂಸಾದ 'ಸರ್ವೋದಯ'ಕ್ಕೆ ತಂದು ನಿಲ್ಲಿಸಿದೆ. ಇನ್ನು ಕಾ॥ ಸಿದ್ದು ರವರ ಬಗ್ಗೆ ನನ್ನದೇನೂ ತಕರಾರಿಲ್ಲ. ಅವರನ್ನು ಚಳವಳಿ ಚರ್ಚಾಪಟುವಿನಂತೆ ಭಾಷಣಕಾರರಂತೆ ನೋಡಿತೇ ಹೊರತು ಬಿ.ಕೆ, ದೇಮರಂತೆ ನಾಯಕ ನಡೆಯ ನೆಲೆಯಲ್ಲಿ ಕಾಣಲೇ ಇಲ್ಲ. ಅವರೂ ಕೂಡ, ಚರ್ಚಾ ಸ್ಪರ್ಧೆಯಲ್ಲಿ 'ಸಿಕ್ಕ' ಟ್ರೋಫಿ' ಹಂತದ ರಾಜಕೀಯ ಲಾಭಗಳಲ್ಲೇ ತೃಪ್ತರಾದರು.

ಈಗ ಆ ಜೀವನದಿ ಎಷ್ಟೋ ಕವಲುಗಳಾಗಿ ಪಾತ್ರವಿಲ್ಲದೆ ಎತ್ತತ್ತಲೋ ಹರಿದು ಹಿಂಗಿ ಕಣ್ಮರೆಯಾಗಿದೆ. ಇದೆಲ್ಲಕ್ಕೂ ಬಹುಪಾಲು ಹೊಣೆ 'ದಲಿತ ಮಧ್ಯಮ ವರ್ಗ'ದ ನಾಯಕತ್ವ ಜೀವನ ಶೈಲಿ ಮತ್ತು ರಾಜಕೀಯ ತಿಳುವಳಿಕೆಗಳೇ ಕಾರಣವಾಗಿವೆ. ಕೊನೆಯದಾಗಿ ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧನವೆಂದು ನನಗೆ ನಾನೇ ಓದಿಕೊಳ್ಳುವ ನನ್ನ ಪದ್ಯದೊಂದಿಗೆ ನನ್ನ ಮಾತನ್ನು ಕೊನೆಗೊಳಿಸುವೆ.

ಭಾರತೀಯ ಮನೋಧರ್ಮ ಅದೆಷ್ಟೇ ಉದಾರವಾಗಬಹುದಾದರೂ ದಲಿತ ಅಸ್ತಿತ್ವವನ್ನು 'ಮಲ'ಕ್ಕೆ ಮೀರಿ ನೋಡುವ ಸಹಜ ಭಾವದಿಂದ ಅದು ಯಾವತ್ತೂ ಬಿಡಿಸಿಕೊಳ್ಳಲಾರದು. ಅಂತಹ 'ಮೋಕ್ಷ' ಮೊಟ್ಟಮೊದಲ ಆದ್ಯತೆ ಎಂಬುದನ್ನು ಅದರ ಯಜಮಾನ ನೆಲೆ ಮನಗಾಣುವುದಕ್ಕೆ ಬಿಡುವುದೇ ಇಲ್ಲ. ಬರಿಗೈಲಿ ಮಲಬಾಚುವುದನ್ನು ತಪ್ಪಿಸಲು ಅದು ಒಂದು ತಗಡು ತುಂಡನ್ನು ದಯಪಾಲಿಸ ಬಹುದಷ್ಟೇ. ಹೀಗಾಗಿ ದಲಿತ ಅಸ್ತಿತ್ವ ರಾಜಕಾರಣಕ್ಕೆ ಸಂಬಂಧಿಸಿದಂತೆ, ಸಾಹಿತ್ಯವೆಂಬುದು ಇದಕ್ಕಿಂತ ಬೇರೆ ಅಲ್ಲ. ಅದನ್ನೇ ಕೆಲವರು ಚಿನ್ನದ ತಗಡು ಮಾಡಿ ಅದಕ್ಕೆ ಚೌಕಟ್ಟು ಕಟ್ಟುವುದು ಮುಖ್ಯವೆಂದು ಭಾವಿಸುವುದಾದರೆ ನನ್ನಂಥವರಿಗೆ ಬರಿಗೈಲಿ ಮಲಬಾಚುವುದಷ್ಟೇ ಉಳಿದಿರುವುದು. ಧನ್ಯವಾದಗಳು.

□ (ಫೆಬ್ರವರಿ 4,5,6 ರಂದು ನಾಶನಲ್ ಲಾ ಕಾಲೇಜಿನಲ್ಲಿ ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆ ನೀತಿಯ ಅಧ್ಯಯನ ಕೇಂದ್ರವು ಆಯೋಜಿಸಿದ್ದ 'ದಲಿತ ಚಳುವಳಿ ಮತ್ತು ಸಾಹಿತ್ಯ ಒಂದು ಮರು ಅವಲೋಕನ' ಸೆಮಿನಾರ್‌ನಲ್ಲಿ ಮಾಡಿದ ಭಾಷಣ)

ವಿರಾಮಕಾಲ ಆರಾಮಕಾಲ

ಈಗ ವಿರಾಮಕಾಲ ಆರಾಮಾಗಿರುವ ಕಾಲ
ಹೊಚ್ಚೆ ಸಾಕಷ್ಟು ಭರ್ತಿ; ಗಾಳಿಗೆ ಬಿಟ್ಟಾಗಿದೆ ಉಳಿ ತೇಗು, ಹೂಸು, ಚರಿತ್ರೆ
ಹೊಟ್ಟೆಗಿಲ್ಲದವರಿಗೆ ಹೊಟ್ಟೆಗೆ ಬಟ್ಟೆಗೆ ಆಗುವಷ್ಟು
ಸಿಕ್ಕುತ್ತಿರುವುದೇ ಅಪರೂಪದ ಪುಟ; ಹೊಸ ಸೇರ್ಪಡೆ
ಸಂವಿದಾನ ದಾನದತ್ತ
ಆದ್ದರಿಂದ ಒಂದೊಂದ ಮೈಬೆವರ ಹನಿ ಕಾಳಾಗಿಸಿ ತಿಂದ
ಆ ಅರೆಹೊಟ್ಟೆ ಕೊರೆ ಕನಸು ಮಾಸುವುದು ಸಹಜ
ಮತ್ತೂ ಮರಳಿಗೆ.
ಆಗ ಏನಾದರೂ ಮಾಡತಿರಬೇಕಲ್ಲ ಅಡಿಗರು ಬರೆದಂತೆ
'ಏನಾದರೂ ಮಾಡುತಿರು ತಮ್ಮ ಕೊನೆಗೆ....'
ಸ್ವಾಮಿ ಎಲೆಗಳ ಕತೆ ಏನಾಗಬೇಡ?
ಎಲೆ, ಚಿಗುರೆಲೆ, ಹಣ್ಣೆಲೆ.....ಅಯ್ಯೋ ಆ
ಅನಾದಿ ತರಗೆಲೆ?
ನಾಕೇ ನಾಕು ಇರುವೆ ಕೂಡ ಬೆನ್ನಲ್ಲೊಲೊತ್ತು
ಸರಸರನೆ ಸರಿದು ಕಣ್ಮರೆಯಾಗಿ ಬಿಡುವ
ಸೌಭಾಗ್ಯ ದೌರ್ಭಾಗ್ಯ ಮಿಲನ ಮಂಚ;
ಒಟ್ಟಿನಲಿ ಒಟ್ಟಿಗೆ ಒಂದು ಅಂದವಿದೆಯೆಂದು ಅದೇ ಚಂದವೆಂದು
ತೋರಲಾದರೂ ಕೊಂಚ.
ಚರಿತ್ರೆಯ ದಿಗ್ವಿಜಯ ಯಾತ್ರೆಗಳು,
ರಥಯಾತ್ರೆಗಳು, ಶವಯಾತ್ರೆಗಳು
ಪುರಾಣ ಗೋರಿಗಳ
ಗಾಳಿ ಬಿರುಗಾಳಿ ದಾಳಿಗಳು;
ಪಾಳಿ ಪಾಳಿ ಹಾಳೆ ಹಾಳೆ
ಬಡ್ಡಿ ಲೆಕ್ಕ ಇಡುವ ಮಾರ್ವಾಡಿಗಳಂತೆ
ಕರಾರುವಾಕ್ಕಾಗಿ ಬಂದೆರಗಿದರೆ ಎರಗಿದಂತೆ ಬರಸಿಡಿಲು-
ಏನಾಗಬೇಡ ಸ್ವಾಮಿ ಆ ಅನಾದಿಗೋರಿ ತರಗೆಲೆ ಎದೆ
ಭೂಮಿ....?
ಅದು ಗೋಪಾದವಾದರೂ ಅಷ್ಟೆ
ಶ್ರೀಪಾದವಾದರೂ ಶ್ರೀ ಶ್ರೀಪಾದವಾದರೂ.......
ಪಾದಗಳಿಗಷ್ಟೆ, ಪಾದಗಳನ್ನಷ್ಟೇ ಪೂಜಿಸುವ ಕಾಲ ಇದು.
ಕನ್‌ಫ್ಯೂಷನ್ನಿನಲ್ಲಿ ನಮ್ಮ ಪಾದಗಳನ್ನು ಹೆರರದೆಂದೂ
ಹೆರರದನ್ನು ನಮ್ಮದೆಂದೂ ಮೋಸ ಹೋಗುವ ಛಾನ್ಸು,
ಟೆಕ್ನಿಕಲ್ ಎರ್ರರ್ರೂ ಇದ್ದೇ ಇರುತ್ತದೆ ಸಹಜ.
ಗೊತ್ತಿರಬೇಕು ನಾವೆಲ್ಲಾ ಬದುಕುತ್ತಿರುವುದು ನವ್ಯೋತ್ತರ
ಆಧುನಿಕತೆಯ
ನಾಗರಹೆಡೆ ನೆರಳಿನಲ್ಲಿ....
ಅದಕ್ಕೆ ಅನಿವಾರ್ಯ
ಕಚ್ಚಿದಾಗ ನಾಗರ ಕೋರೆ
ಇಳಿಸಿದಾಗ ಕಲೋನಿಯಲ್ ಆಲೋಪತಿ ಇಂಜೆಕ್ಷನ್ ನೊರೆ......
ಬುರುಗು ಬುರುಗೂ ಬೆರಗು
ಆ ಬುರುಗ ನೊರೆಕಿರು ಗುಳ್ಳೆಯೊಂದು
ಟಪಕ್ಕೆಂದು ಹೊಡೆದು ಚೆಲ್ಲಿ ಪರಮಾಣು ಪಟಾಕಿ

ಅರಳು ನಾಯಿ ಕೊಡೆ ಹರಡಿ ಹಾಯಿಪಟ
ತಿಳಿಮುಗಿಲ ನೀಲಾಕಾಶದಲ್ಲಿ
ಇಳಿಇಳಿಯುತ್ತಾ...ಹಿರೋಶಿಮಾ, ನಾಗಸಾಕಿ, ಚರ್ನೋಬಿಲ್
ದುಃಸ್ವಪ್ನ ಪಥ್ಯ ಪಥ್ಯಾಂತರಗಳ ಚಿಗುರು ಬುರುಗಿನ ಕಿರು
ತುಂತುರೊಂದು
ತೆರೆದ ಬಾಯಿಗೆ ಬಂದು ಬೀಳುತ್ತದೆ
ಘನಘೋರ ಸಯನೈಡು....
ಕೊನೆಯೊಂದೇ ಸೂಯಿಸೈಡು....
ಆದರೂ....
ಎಲ್ಲರೂ...ಯಜಮಾನರೂ ತೊತ್ತುಗಳಾದಿಯಾಗಿ,
ಕಾಯುವವರು ಕಾವಲಿರುವವರು ಕೂಡ
ರಾಮಗಿರಬೇಕೆಂದುಕೊಂಡಿದ್ದಾರೆ.
ಇರಲಿ ಬಿಡಿ ಅವರವರ ಕನಸಿನ ಹಾಯಿ ದೋಣಿಗಳಲ್ಲಿ;
ಜಹಜಿನ ಗೊಡವೆಯಿಲ್ಲ..ಮುಖದರಶುನ
ಸೋಂಕಿಲ್ಲ
ತಕರಾರಿಲ್ಲ ಅವರಂತೆ ಅವರಿರಲು
ಆದರೆ ಆ ಆರಾಮ ವಿರಾಮಗಳ
ಮೆನುಕಾರ್ಡಿನಲ್ಲಿ ಕಂಪಲ್ಸರಿ
ಇದ್ದಾರಲ್ಲ ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ
ಕೊಂಚ ದ್ರಾವಿಡತನದ ಕಪ್ಪು ಸಾದಬಟ್ಟಿಗೆ
ಸ್ವಾದ ಸೊಗಸಿಗೆ ಕಳಗಂ ಪೆರಿಯಾರು ದ್ರಾವಿಡ
ಇನ್ನುಳಿದಂತೆ ಜೆಂಡರ್ ಸೆನ್ಸಿಟಿವಿಟಿ ಇಫ್
ಬಿಕಮ್ಸ್ ಇನ್‌ವಿಟಬಲ್; ಲೆಟ್ ಅಕ್ಕಾ
ಟೇಕ್ ಅರ್ ಪ್ಲೇಸ್.....ಸೋ ವ್ಹಾಟ್?
ಅವರವರ ಭಾವ ಭಕುತಿಗೆ–ಮಕುತಿಗೆ ಚಾತಿ, ಜಾತಿ,
ಮೀಸಲಾತಿಗೆ
ಬೇಡ ನಮಗದರ ಒಡವೆಗೊಡವೆ.
ಇಂಥ ಆರಾಮಕಾಲದ ಅಗತ್ಯವೊ
ವಿರಾಮಕಾಲದ ಮತ್ತೋ
ನಂಗಾ ನಾಚಿಗೆ ಸ್ಪ್ರಿಂಗ್ ಬೋರ್ಡ್ ಆಗುತ್ತದೆ.
ಅಂಥ 'ಸ್ಪ್ರಿಂಗ್' ಸೀಜನ್ನಿನಲ್ಲಿ ಮರಳುತ್ತವೆ
ಮಿಡ್ ಸಮ್ಮರ್‌ನ ಮರುಳಿರಳ ಕನಸುಗಳ ತೇರು
ಆಗ ತರಗೆಲೆಗಳ ಮೇಲೆ ಶಿವತಾಂಡವ
ತಡೆಯಬಹುದೇ ಸ್ವಾಮೀ ತರಗೆಲೆ ಎದೆ ಭೂಮೀ....?
ಇದ್ದರೂ ರಕ್ತ ಕುಡಿದ ಕುರುಕ್ಷೇತ್ರದ ನೆನಪು ಮಣ್ಣು
ಕಣಕಣದಲ್ಲೂ......
ವಿಭಜನೆಯ ಪಂಚನದಿ ನಾಡ ನದಿಗಳು ಹುಚ್ಚೆದ್ದು
ರಕ್ತ, ಹೆಣಗಳ ರುದ್ರನಾಟ್ಯವಾಡಿದ್ದರೂ....
ತಾಯಿ ಬೇರಾಗಿ ಹೀರಿದ್ದಿನ್ನೂ ಎದೆ ಕಲಶ ತುಂಬಿ
ತುಳುಕಿ ಬಳುಕಿ ವಾಲಾಡುತ್ತಿರುವಾಗ...
ಮೆನುಗಳ ಬಗ್ಗೆ, ಚರಿತ್ರೆಯ ಮೆನುಗಳ ಬಗ್ಗೆ
ಎಚ್ಚರವಿರಬೇಕಾದ ಕಾಲ ಅಕಾಲ ಇದಲ್ಲವೇನು?
ಇಂಥ ಎಚ್ಚರವನ್ನು, ಆರಾಮಕಾಲ ವಿರಾಮಕಾಲಗಳು
ಅಪಹರಿಸಿ ಪ್ರಾಣಗಿಣಿಯಾಗಿಸಿ ಸಪ್ತ ಸಮುದ್ರಗಳಾಚೆಗಿನ
ಯಾವ್ಯಾವುದೋ ಮಾಯಾ ದ್ವೀಪ ಮಧ್ಯೆ ಸೆರೆಯಾಗಿಸಿ
ಬಿಡುವವಂತೆ
ಆಗ ಬಿಡುವಿನ ವೇಳೆ ಕಾಲೇಜು ಮೇಸ್ಟ್ರುಗಳು,
ಯುಜಿಸಿ ನ್ಯಾಕುಗಳ ರೇಖಿ ರೇಖಿನ ರೇಖಾಶಾಸ್ತ್ರ ಪರಿಣತರು...
ಚಳುವಳಿಯ ಕುಸ್ತಿ ಅಖಾಡಗಳಿಗೆ ದುಮುಕುತ್ತಾರೆ...
ಭರ್ತಿ ಹೊಟ್ಟೆ; ಸರ್ತಿ ಕನಸು
ಬುದ್ಧ, ಸಿದ್ಧ, ಬಸವ, ಗಾಂಧಿ, ಕಲ್ಯಾಣ ಕಸ
ಭಟ್ಟಿ ಸಾರಾಯಿ ರಸರಸಾಯನ
ಅಯ್ಯಯ್ಯೋ ಅಮಲಿನ ಕೂಗಾಗಿದೆ
ಹೊಟ್ಟೆ ಭರ್ತಿಯಾದವರ
'ಬುದ್ಧ ಶರಣಂ ಗಚ್ಛಾಮೀ'
'ಮರಳಿ ಮನೆಗೆ ಬುದ್ಧನೆಡೆಗೆ'
ಘೋಷಣೆಗಳ ಸಾಲು ಮೆರವಣಿಗೆ.
ಬುದ್ಧರಾಗುವುದೆಂದರೇನು?
ಅದ್ಯಾವ ಅಮಲಿನ ಪಡಿಪದಾರ್ಥ?
ಸೇರಿ ಸೋರುವ ಸೋನೆ ಬೆಲ್ಲದ ಅದ್ಯಾವ ಮಧುರ ಪಾಕ?
ಹುಡುಕಿ ಹೊರಟವರಿಗೆಲ್ಲ ಬುದ್ಧ ಅಲ್ಲಿಲ್ಲ; ಇಲ್ಲೂ ಇಲ್ಲ;
ಎಲ್ಲೂ ಇಲ್ಲ. ಇಲ್ಲವೇ ಇಲ್ಲ; ಬೇಕೇ ಬೇಕಿದ್ದಲ್ಲಿ ಬುದ್ಧನೆಂಬ
ಪಡಿಪದಾರ್ಥ ಪಾಕ
ಕಣ್ಣು ಕಂಡಷ್ಟು ಕೇಡು
ಚಿಗುರೋ ಸೇಡು
ಕುಡಿ ಮುರಿ ಮುರಿಯುತ್ತಲೇ ನಡೆನಡೆಯುತ್ತಲೇ ಇದ್ದಲ್ಲಿ
ಬುದ್ಧ ಬರುವನು ಅಲ್ಲೇ ಇದ್ದೇ ಇರುವಲ್ಲಿಗೇ
ನಮ್ಮ ಪೂರ್ವಿಕ ನೆಲೆಗದ್ದುಗೆಗಳಿಗೆ
ಸಿದ್ದಿಗೊಳಿಸುವ ಶುದ್ಧ ಹಂಬಲವೊಂದಿದ್ದರೆ
ಹೇಳುವವರ್‍ಯಾರು? ಹೇಳಿದರೂ ಬೋಧವಾಗುವುದೇನು
ಈ ಆರಾಮ ವಿರಾಮ ಕಾಲದಲಿ ವಿರಮಿಸುತ್ತಿರುವ
ಸುಖಬೋಧ ನವಬೋಧ ಬುದ್ಧರಿಗೆ?




ಸಂಸ್ಕೃತಿ ಅಧ್ಯಯನದ ಕಣ್ಕಟ್ಟು

• ಡಾ.ಡೊಮಿನಿಕ್.ಡಿ

ಈ ಲೇಖನದ ಹೆಸರೇ ಕುತೂಹಲಕಾರಿಯಾಗಿ ಅನೇಕರನ್ನು ಕಾಡಬಹುದು. ಪ್ರಗತಿಪರರೆನಿಸಿಕೊಂಡವರು 'ಸೆಕ್ಯುಲರ್' ಚಿಂತನೆಯಲ್ಲಿ ಹೂತುಹೋಗಿರುವಾಗ, ಬಲಪಂಥೀಯರು ಅಂಥವರೆನ್ನೆಲ್ಲಾ ಗುರುತಿಸಿ, 'ಸಂಸ್ಕೃತಿ' ಎಂಬ ಸನಾತನಿ ಟವೆಲ್‌ನಿಂದ ಸುತ್ತಿಕೊಂಡು ಬೆವರಿಳಿಸಿ, ಬಡಿಯುತ್ತಿದ್ದಾರೆ, ಆದ್ದರಿಂದ ಸಹಜವಾಗಿಯೇ 'ಸಂಸ್ಕೃತಿ' ಬಗ್ಗೆ ಸಂದೇಹ ಮೂಡುತ್ತದೆ. ಅದರಲ್ಲೂ ದಿನ ಬೆಳಗಾದರೆ ಮಾಧ್ಯಮ, ಸಭೆ-ಸಮಾರಂಭಗಳಲ್ಲಿ ಪಬ್ ಸಂಸ್ಕೃತಿ, ಗ್ರಾಹಕ ಸಂಸ್ಕೃತಿ, ಯುವ ಸಂಸ್ಕೃತಿ, ಮಹಿಳಾ ಸಂಸ್ಕೃತಿ, ಕುಲ ಸಂಸ್ಕೃತಿ, ಮಾರುಕಟ್ಟೆ ಸಂಸ್ಕೃತಿ, ದಲಿತ ಸಂಸ್ಕೃತಿ, ಒಕ್ಕಲಿಗ ಸಂಸ್ಕೃತಿ, ಲಿಂಗಾಯಿತ ಸಂಸ್ಕೃತಿ, ಭಾರತೀಯ ಸಂಸ್ಕೃತಿ, ಪಾಶ್ಚಾತ್ಯ ಸಂಸ್ಕೃತಿ... ಹೀಗೆ ಇನ್ನೂ ಅನೇಕ ಸಂಸ್ಕೃತಿಗಳ ಹಾವಳಿಗಳು ಅರಿವನ್ನು ಕಲಕುತ್ತಿರುವಾಗ 'ಸಂಸ್ಕೃತಿ ಅಧ್ಯಯನದ ಕಣ್ಕಟ್ಟು' ಎನ್ನುವ ಚರ್ಚೆ ಮಾಡಲೇಕಾಗಿದೆಯಲ್ಲವೇ! ನನ್ನ ಇತ್ತೀಚಿನ ಅಲೋಚನೆಗಳೆಲ್ಲವೂ ಸಹ 'ಸೆಕ್ಯುಲರ್' ನೆಲೆಯಿಂದ ಬಿಡಿಸಿಕೊಂಡು 'ಸಂಸ್ಕೃತಿ'ನಿಷ್ಠ ನೆಲೆಗಳನ್ನು ಪರಿಶೀಲಿಸಲು ತೊಡಗಿದ್ದವು. ಆದ್ದರಿಂದ, 'ಸಂಸ್ಕೃತಿ ಅಧ್ಯಯನದ ಕಣ್ಕಟ್ಟು' ಎನ್ನುವ ವಿಷಯ ಮರುವಿವೇಚನೆಗೆ ಒಳಪಡಿಸಿ ಅದನ್ನು ನಿಭಾಯಿಸಿಕೊಳ್ಳುವ ಪ್ರಯತ್ನವನ್ನು ಪ್ರಸ್ತುತ ಲೇಖನ ಮಾಡುತ್ತಿದೆ. ಇದೆಲ್ಲಾ 'ತಲ್ಕಿಂದ್ಲು' ಕೆಲಸ ಅಂತನೇ ಅನೇಕರು ಭಾವಿಸಬಹುದು. ಕೆಲವು ವರ್ಷಗಳಿಂದೀಚೆಗೆ 'ಸಾಂಸ್ಕೃತಿಕ ಅಧ್ಯಯನ'ದ ಚರ್ಚೆಯಲ್ಲಿ ತೊಡಗಿಕೊಂಡಿರುವುದರಿಂದ 'ಸಂಸ್ಕೃತಿ ಅಧ್ಯಯನದ ಕಣ್ಕಟ್ಟು' ಬೆತ್ತಲೆಯಾಗಿ, ಅದಕ್ಕೆ ಉಡುಗೆ ತೊಡಗಿಸಲು ಹೆಣಗುವವರ ಬಗ್ಗೆ ಅತೀಯಾದ ಅಣಕ ಮತ್ತು ಅಸಹನೆಯೂ ನನಗೆ ಶುರುವಾಗಿದೆ. ಇದಕ್ಕೆ ತಕ್ಷಣದ ಕಾರಣಗಳನ್ನು ಗುರುತಿಸಲು ಮುಂದಾದರೆ, ಎರಡು ಮುಖ್ಯ ಕಾರಣಗಳು ಗೋಚರಿಸುತ್ತವೆ: ಒಂದು ▯ ಅಕಾಡೆಮಿಕ್ ವಲಯಗಳಲ್ಲಿ ಬೇರೂರಿರುವ ಪಾಳೆಗಾರಿಕೆಯ ಡಿಪಾರ್ಟ್‌ಮೆಂಟುಗಳು ಹಾಗೂ ಮತ್ತವುಗಳ ಅಧಿಕಾರದ ವರಸೆಗಳು; ಎರಡು ▯ ಇಂಥ ಅಕಾಡೆಮಿಕ್ ವಲಯಗಳಲ್ಲಿ ಪ್ರವೇಶ ಗಿಟ್ಟಿಸಿಕೊಳ್ಳುವ 'ಮೊದಲನೇ ತಲೆಮಾರಿನ' (ಅಂದರೆ ಈ ಮೊದಲನೇ ತಲೆಮಾರಿನ ಹಿಂದಿನವರು ಯಾರೂ ಸಹ ಅಕಾಡೆಮಿಕ್ ವಲಯಗಳನ್ನು ಪ್ರವೇಶಿಸಿಲ್ಲ) ಯುವಕ-ಯುವತಿಯರು ಅರಿವನ್ನು ರೂಡಿಸಿಕೊಳ್ಳುವ ಆತುರದಲ್ಲಿ, ತಮ್ಮ ಸುತ್ತಲಿನ ಕೌಶಲ್ಯ ಮತ್ತು ಆ ಕೌಶಲ್ಯಗಳ ಹಿಂದಿನ 'ಅರಿವಿನ ಕ್ರಮ'ಗಳ ಬಗ್ಗೆ ಬೆಳೆಸಿಕೊಂಡಿರುವ 'ಮರೆಗುಳಿತನ' ಮತ್ತು ಅದರಿಂದ ಅವರು ಅನುಭವಿಸುವ 'ಅಧಿಕಾರ-ಹೀನತೆ' ಅಥವಾ 'ಶಕ್ತಿ-ಹೀನತೆ' ಇನ್ನೊಂದು ಕಾರಣವಾಗುತ್ತದೆ. ಇದನ್ನು ಮೀರಲು ಅವರು ಇನ್ನಿಲ್ಲದ ಸಾಹಸ-ಸರ್ಕಸ್‌ಗಳಲ್ಲಿ ತೊಡಗಿ, ಇಲ್ಲದ 'ಸಂಸ್ಕೃತಿ' ಎನ್ನುವ ಉರುಳಿನಲ್ಲಿ ಸಿಲುಕಿಕೊಳ್ಳುವುದನ್ನು ಇತ್ತೀಚೆಗೆ ಗಮನಿಸಬಹುದಾಗಿದೆ ಮತ್ತು ನಾನು ಗಮನಿಸುತ್ತಿದ್ದೇನೆ. ಆದ್ದರಿಂದ ಪ್ರಸ್ತುತ ಲೇಖನ ಮೇಲಿನ ಸನ್ನಿವೇಶಗಳ ಹಿಂದಿನ ಗ್ರಹೀತಗಳನ್ನು ಕಟ್ಟುತ್ತಿರುವ 'ತಿಳುವು'ಗಳ ಬಗ್ಗೆ, ಹಾಗೂ ಅವುಗಳ ಚಾರಿತ್ರಿಕ ಸಂದರ್ಭಗಳನ್ನು ವಿವರಿಸಿಕೊಳ್ಳಲು ಪ್ರಯತ್ನಿಸುತ್ತದೆ. ಹೀಗೆ ಮಾಡುವಾಗ 'ಸಂಸ್ಕೃತಿ' ಎನ್ನುವ ಅಪಾಯಕಾರಿ, ಜನಪ್ರಿಯ ಪದದ ತಿರುಳನ್ನು ಅರಿಯಬಹುದು ಎಂಬುದು ನನ್ನ ಅನಿಸಿಕೆ.

ಇಲ್ಲಿಯವರೆಗಿನ ಕಥನ:


"ಭಾರತದಂಥ, ಬಹುಭಾಷೆಯ, ವಸಾಹತುಶಾಹಿಯ ಪ್ರಭಾವಕ್ಕೆ ಒಳಗಾದ ರಾಷ್ಟ್ರಗಳಲ್ಲಿ ಸಂಸ್ಕೃತಿಯ ಸ್ವರೂಪವು ಹೇರಲ್ಪಡುವಂಥ ವಿನ್ಯಾಸದ್ದೇ ಹೊರತು ಸೃಜನಕ್ರಿಯೆಯಂತೆ ಅರಳುವಂಥದ್ದಾಗಿರುವುದಿಲ್ಲ. ಭಾಷೆ, ಧರ್ಮ, ರಾಜಕಾರಣ, ಜೀವನ ವಿಧಾನ, ಆರ್ಥಿಕ ವಿನ್ಯಾಗಳು - ಹೀಗೆ ಸಾಮಾಜಿಕ ಚಟುವಟಿಕೆಯ ವಿನ್ಯಾಸವು ಮಾರ್ಗ ಸಂಸ್ಕೃತಿಯ ಏಕಮುಖೀ ಆಕೃತಿಯ ಪ್ರಭಾವದಿಂದ ಪ್ರೇರಿತವಾಗಿದ್ದು ಮತ್ತೆ, ಮತ್ತೆ ಹೊಸ ಸಂಘರ್ಷಗಳಿಗೆ ಕಾರಣವಾಗಿದೆ. ಶಕ್ತಿರಾಜಕಾರಣ, ಹಣದ ಶಕ್ತಿ ಮತ್ತು ಸಾಂಪ್ರದಾಯಿಕ ಧಾರ್ಮಿಕ ಸನಾತನತೆ - ಹಾಗೂ ಭಾಷೆ ▯ ಇವೆಲ್ಲ ಮುಖ್ಯ 'ವ್ಯವಹಾರ'ವಾಗಿರುವ ಸಂದರ್ಭದಲ್ಲಿ ಸಂಸ್ಕೃತಿಯ ಸತ್ಯತೆಯನ್ನು ಮನಶ್ಚೇತನಗೊಳಿಸಬೇಕಾದ ಅನಿವಾರ್ಯತೆ ಎಂದಿಗಿಂತಲೂ ಮುಖ್ಯವಾಗಿದೆ. ಬಹಳ ಪ್ರಬಲವಾಗಿರುವ ಸಾಮಾಜಿಕ ವಹಿವಾಟಿನ ಸ್ವರೂಪವು ಏಕಮುಖೀ ಆಕೃತಿಯನ್ನು ಕಟ್ಟುವಲ್ಲಿ ತೊಡಗಿದ್ದು, ಸಂಸ್ಕೃತಿಯ ಬಹುರೂಪಿ ಆಕೃತಿಗಳ ಹೊರಬರುವಿಕೆಗೆ ಸ್ಥಾನವೇ ಇಲ್ಲದಿರುವ ವಾತಾವರಣವು ಈಗ ಉಂಟಾಗಿದೆ... ಸಂಸ್ಕೃತಿ ಎನ್ನುವ ಪರಿಕಲ್ಪನೆಯಲ್ಲಿ ಏಕಮುಖೀ ಆಕೃತಿಯ ಕಡೆಗಿನ ಒಲವಿನಿಂದ ಅದನ್ನು 'ಒಂದೇ' ಎನ್ನುವ ನೆಲೆಯಿಂದಲೇ ವಿವರಿಸಿರುವುದನ್ನು ನಾವು ತಿರಸ್ಕರಿಸಬೇಕಾಗಿದೆ. 'ಕನ್ನಡ ಸಂಸ್ಕೃತಿ'ಯನ್ನು ಒಂದೇ ಲಕ್ಷಣದಿಂದ ವಿವರಿಸುವುದು, ಈ ಸಂಸ್ಕೃತಿಯನ್ನು ಜೀವಂತವಾಗಿಸಿಟ್ಟ ಅಸಂಖ್ಯಾತ ವಿನ್ಯಾಸಗಳು, ಅಭಿವ್ಯಕ್ತಿಯ ಹಲವಾರು ವಲಯಗಳನ್ನು ನಿರಾಕರಿಸಿದಂತಾಗುತ್ತದೆ. ಸಂಸ್ಕೃತಿಯಲ್ಲಿ ಅರಿವಿನ ವಿಸ್ತಾರಗಳು ಬೆಳೆಯುವುದು ಹಾಗೂ ಹೊಸ ಸ್ವರೂಪಕ್ಕೆ ಕಾರಣವಾಗುವುದು ಈ ಹತ್ತು ಹಲವು ದಿಕ್ಕುಗಳ ಸಂಗಮದಿಂದಲೇ... ಮಾರ್ಗ ಪ್ರವೃತ್ತಿಯ ಸಾಂಸ್ಕೃತಿಕ ವಿಶ್ಲೇಷಕರಿಗೆ ರಾಜಸಂಸ್ಥೆಯ ಪರವಾದ ಆಲೋಚನೆಯಷ್ಟೇ, ವಸಾಹಾತುಶಾಹೀ ಪ್ರಭಾವದ ಮತ್ತು ಪರವಾದ ಆಲೋಚನೆಗಳು ಅಷ್ಟೇ ಸ್ವಾಭಾವಿಕ ಮತ್ತು ಸಹಜ. ಇವೆರಡೂ ಚಾರಿತ್ರಿಕ ಘಟನಾವಳಿಗಳಾಗಿ ಇಂದಕ್ಕೊಂದು ವಿರುದ್ಧವೆಂದು ತೋರಿದರೂ ಇವೆರಡೂ ತಮ್ಮನ್ನು ಪ್ರಬಲಗೊಳಿಸಿಕೊಂಡ ಗಣಸ್ವಭಾವವು ಒಂದೇ ಆಗಿದೆ." (ಬಸವರಾಜ



ಕಲ್ಗುಡಿ, ಕರ್ನಾಟಕ ಸಂಸ್ಕೃತಿ ಅಧ್ಯಯನದ ಸಮಸ್ಯೆಗಳು, ಸಿರಿಗನ್ನಡ, ಹಂಪಿ, 1984, ಪು.) ಈ ಮೇಲಿನ ವಿಶ್ಲೇಷಣೆಯಲ್ಲಿ ಸಂಸ್ಕೃತಿ ಎನ್ನುವುದರ ಕುರಿತಂತೆ ಸೂಕ್ಷ್ಮ ಒಳಹುಗಳು ಇವೆಯಾದರೂ ಅದು ಮತ್ತದೇ ಪದವನ್ನು ವಿಭಿನ್ನವಾಗಿ ವಿವರಿಸಿಕೊಳ್ಳುತ್ತದೆ. ಇಂಥ ಹಲವಾರು ಪ್ರಯತ್ನಗಳನ್ನು ನಾವು ಈಗಾಗಲೇ ಆಧುನಿಕ ಕನ್ನಡ ಬರವಣಿಗೆಯ ಸಂದರ್ಭದಲ್ಲಿ ಗುರುತಿಸಬಹುದು. ಎಂ.ಎಂ. ಕಲಬುರ್ಗಿಯವರು ಸಂಸ್ಕೃತಿ ಎನ್ನುವುದರೊಳಗೇ 'ವಿಕೃತಿ' ಎನ್ನುವುದು ಒಳಗೊಂಡಿದೆ ಎನ್ನುತ್ತಾರೆ 'ಸಂಸ್ಕೃತಿ-ವಿಕೃತಿ' ಎನ್ನುವ ಕೃತಿಯಲ್ಲಿ. ಹಾಗೆಯೇ 'ಅಪಸಂಸ್ಕೃತಿ' ಮತ್ತು ಪ್ರತಿಸಂಸ್ಕೃತಿ ಎನ್ನುವ ಪದಗಳ ಬಳಕೆಯೂ ಸಹ ಬಂದಿವೆ. ಈ ಪದಗಳ ಚಾರಿತ್ರಿಕ ಚಲನೆಗಳನ್ನು ಮತ್ತವುಗಳ ಅರಿಮೆ(ಎಪಿಸ್ಟಮಿ)ಗಳನ್ನು ವಿವರಿಸಿಕೊಳ್ಳುವಾಗ, ಅವುಗಳ ಸೈದ್ಧಾಂತಿಕ/ಐಡಿಯಲಾಜಿಕಲ್ ಹುನ್ನಾರಗಳನ್ನು ನಾವು ಗಮನಿಸಲೇ ಬೇಕಾಗುತ್ತದೆ. ಇಲ್ಲವಾದರೆ ಎಲ್ಲಾ ಹುನ್ನಾರಗಳನ್ನು 'ವಸ್ತುನಿಷ್ಠ' ಎನ್ನುವ ಹೆಸರಿನಲ್ಲಿ ಗುರುತಿಸುವ/ಮಾನ್ಯಮಾಡುವ ಜಾಣತನವನ್ನು ಪ್ರದರ್ಶಿಸುತ್ತೇವೆ. ಅದರಲ್ಲೂ ಇವತ್ತಿನ ಸಂಸ್ಕೃತಿ ಚರ್ಚೆಗಳಲ್ಲಿ ಎಲ್ಲವನ್ನೂ ಮುಚ್ಚಿಹಾಕುವ ಒಳವಿನ್ಯಾಸಗಳನ್ನು ಪ್ರಶ್ನೆ ಇಲ್ಲದೆ ಸ್ವೀಕರಿಸಿಬಿಡುತ್ತೇವೆ. ಈ ಅಪಾಯವನ್ನು ಅರಿತು ಮುಂದೆ ಸಾಗುವುದು ಅನಿಸುತ್ತದೆ.

ಕಥನ ಸಾಗಿ ಬಂದಿರುವ ದಾರಿ:

ಸಂಸ್ಕೃತಿ ಎನ್ನುವ ಪದ ಅದರದ್ದೇ ಆದ ಚಾರಿತ್ರಿಕ ನಡಿಗೆಯನ್ನು ಹೊಂದಿದೆ. ಈ ನಡಿಗೆಯನ್ನು ನಾವು ವಸಾಹತುಶಾಹಿ ಆಧುನಿಕತೆಯಲ್ಲೇ ಗುರುತಿಸಿಕೊಳ್ಳಬಹುದಾಗಿದೆ. ಅಂದರೆ ನಿಯಂತ್ರಣದ ಮೊದಲ ನಿರೂಪಣೆ ನಮಗೆ ದೊರೆಯುವುದೇ ಈ ವಸಾಹತುಶಾಹಿ ಆಧುನಿಕತೆಯಲ್ಲೇ. ಪಶ್ಚಿಮದ ಓರ್ವ ಚಿಂತಕ ರೈಮಂಡ್ ವಿಲ್ಲಿಯಮ್ಸ್ ತನ್ನ ಕೃತಿ 'ಸಂಸ್ಕೃತಿ ಮತ್ತು ಸಮಾಜ' ಎನ್ನುವುದರಲ್ಲಿ ಈ ವಸಾಹತುಶಾಹಿ ಆಧುನಿಕತೆಯ ಸ್ವರೂಪವನ್ನು ವಿವರಿಸಿಕೊಳ್ಳುತ್ತಾ, ಪಶ್ಚಿಮದಲ್ಲಿ 17ನೇ ಶತಮಾನದಲ್ಲಿ ಆರಂಭವಾದ ಕೈಗಾರಿಕಾ ಕ್ರಾಂತಿಯು ಹೇಗೆ ಜನಮಾನಸದಲ್ಲಿ ಸಮ್ಮತಿಯನ್ನು ಪಡೆಯಿತು ಎನ್ನುವಾಗ, ಅದರ ಭಾಷಿಕ ಸ್ವರೂಪವನ್ನು ಗುರುತಿಸಿಕೊಳ್ಳುತ್ತಾರೆ. ಅಂದರೆ ಅಂದಿನ ಇಂಗ್ಲಿಷ್ ಭಾಷೆ ವಸಾಹತುಶಾಹಿ ಆಧುನಿಕತೆ ಜಾರಿಯಾಗಿಸಿದ ಕೈಗಾರಿಕಾ ಕ್ರಾಂತಿಗೆ ಪೂರಕವಾಗಿ ಸಂಘಟನೆಗೊಂಡಾಗ, ಆ ಭಾಷೆಯಲ್ಲಿ ದಿಟವಾಗಿ ಅರ್ಥ ವ್ಯತ್ಯಾಸ ಪದಗಳಲ್ಲಿ ಕಾಣಿಸಿಕೊಳ್ಳುತ್ತದೆ ಎನ್ನುತ್ತಾನೆ ರೈಮಂಡ್ ವಿಲ್ಲಿಯಮ್ಸ್. ಇಂಥ ಪಲ್ಲಟ ಪ್ರಮುಖವಾಗಿ ಐದು ಪದಗಳಲ್ಲಿ ಗುರುತಿಸಿಕೊಳ್ಳುತ್ತಾನೆ:



1. ಇಂಡಸ್ಟ್ರಿ
2. ಡೆಮೊಕ್ರಸಿ
3. ಕ್ಲಾಸ್
4. ಆರ್ಟ್
5. ಕಲ್ಚರ್

ಈ ಪದಗಳ ಸಾಂಸ್ಕೃತಿಕ ರಾಜಕಾರಣದ ಚಾರಿತ್ರಿಕ ನಡೆಯನ್ನು ಗುರುತಿಸಿಕೊಳ್ಳುವಾಗ ಅವುಗಳಲ್ಲಿ ಆಧುನಿಕವಾದ ಅರ್ಥ ಹೇಗೆ ಘಟಿಸುತ್ತದೆ ಎನ್ನುವ ಸಂಗತಿಗಳು ಬಹಳ ಕುತೂಹಲಕಾರಿಯಾಗಿವೆ. ಇಂಡಸ್ಟ್ರಿ ಎನ್ನುವ ಪದ, ಇಂದು ಕನ್ನಡದಲ್ಲಿ ಕಾರ್ಖಾನೆ ಅಥವಾ ಫ್ಯಾಕ್ಟರಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಒಳಗೊಂಡಂತೆ ಕೈಗಾರಿಕೆ ಎನ್ನುವ ಪದವನ್ನು ಸೂಚಿಸುತ್ತದೆ. ಆದರೆ ಈ ಪದಗಳು ಕನ್ನಡದ ಸಂದರ್ಭದಲ್ಲಿ ನಿಜವಾಗಿಯೂ ಹೀಗಿರುವಂತೆ ಅರ್ಥಗಳನ್ನು ಒಳಗೊಂಡಿತ್ತೆ ಎಂದು ನೋಡಿದಲ್ಲಿ ನಮಗೆ ಖಂಡಿತವಾಗಿಯೂ ಇರಲಿಲ್ಲ ಎಂಬುದು ದಿಟವಾಗುತ್ತದೆ. ಹಾಗೆಯೇ ಇಂಗ್ಲಿಷ್‌ನಲ್ಲಿಯೂ ಸಹ 'ಇಂಡಸ್ಟ್ರಿ' ಎನ್ನುವ ಪದಕ್ಕೆ ಈಗಿರುವಂಥ ಅರ್ಥ ಇರಲಿಲ್ಲ. ಆದರೆ, ಯಾವಾಗ ಕೈಗಾರಿಕಾ ಕ್ರಾಂತಿ ವಸಾಹತು ದೇಶಗಳಿಂದ ಹೇರಳವಾದ ಸಂಪತ್ತನ್ನು ದೋಚಿದ ಪರಿಣಾಮವಾಗಿ ಉನ್ನತಿಗೆ ಬಂತೋ, ಆಗ 'ಇಂಡಸ್ಟ್ರಿ' ಎನ್ನುವ ಪದ ಹೊಸದಾದ ಅರ್ಥಗಳನ್ನು ಪಡೆದುಕೊಳ್ಳುತ್ತದೆ. ಆದರೆ ಕೈಗಾರಿಕ ಕಾಂತಿಯ ಪೂರ್ವದಲ್ಲಿ ಈ ಪದದ ಅರ್ಥ ವ್ಯಕ್ತಿಯೋರ್ವಳ/ನ ಸಾಮರ್ಥ್ಯ ಅಥವಾ ವಿಶಿಷ್ಟವಾದ ಕೌಶಲ್ಯವನ್ನು ಸೂಚಿಸುತ್ತಿತ್ತು. ಆದರೆ, 18ನೇ ಶತಮಾನದ ಹೊತ್ತಿಗೆ ಈ ಪದ ಯಾಂತ್ರ-ಕೇಂದ್ರಿತವಾದ ತಯಾರಿಕ ಮತ್ತು ಉತ್ಪಾದನಾ ಸಂಸ್ಥೆಗಳ ವಿವಿಧ ಚಟುವಟಿಗಳನ್ನು ಸೂಚಿಸುತ್ತದೆ. ಆಡಂ ಸ್ಮಿತ್ ತನ್ನ ಕೃತಿ 'ವೆಲ್ತ್ ಆಫ್ ನೇಷನ್ಸ್' (1789) ನಲ್ಲಿ ಮೊದಲನೇ ಸಲ ಈ 'ಇಂಡಸ್ಟ್ರಿ' ಪದವನ್ನು ಬಳಸುತ್ತಾನೆ. ಇಲ್ಲಿಂದ್ಲದಾಚೆಗೆ ಈ 'ಇಂಡಸ್ಟ್ರಿ' ಎನ್ನುವ ಪದ ತನ್ನ ಹಿಂದಿನ ಅರ್ಥಗಳನ್ನು ಕಳೆದುಕೊಳ್ಳುತ್ತದೆ. ಮುಂದೆ, ಅದು ಕೈಗಾರಿಕಾವಲಯಗಳನ್ನು ಒಳಗೊಂಡಂತೆ ಹೊಸ ಸಾಮಾಜಿಕ-ಯಾಂತ್ರಿಕ, ಉತ್ಪನ್ನ ಮತ್ತು ಹಣಕಾಸಿನ ಸಾಂಸ್ಥಿಕ ಸಂಬಂಧಗಳನ್ನು ಸೂಚಿಸುತ್ತದೆ. ಹೀಗೆ ಅದು ಕೈಗಾರಿಕೋದ್ಯಮವಾಗಿ ಬೆಳವಣಿಗೆಯನ್ನು ಪಡೆದು, ಇಂಗ್ಲೆಂಡ್‌ನ ತೀವ್ರವಾದ ಸಾಮಾಜಿಕ ಪಲ್ಲಟಗಳಿಗೆ ಕಾರಣವಾಗುತ್ತದೆ. ಆದರಿದು ವಸಾಹತು ದೇಶಗಳಲ್ಲಿ ಬರೀ ಕಚ್ಚಾವಸ್ತುಗಳನ್ನೊದಗಿಸುವ ಮತ್ತು ಅಣಕಿಸುವ ಪದವಾಗಿ, ತಾನೂ ಸಹ ಕೈಗಾರಿಕ ನೆಲೆಯಾಗಬೇಕೆನ್ನುವ ಆಸೆಬುರುಕತನವನ್ನು ಹುಟ್ಟುಹಾಕುತ್ತದೆ. ಹೀಗೆ ಅದು ವ್ಯಕ್ತಿಯ ಸಾಮಾಜಿಕ ಕೌಶಲ್ಯ-ಹೀನತೆಯನ್ನು ಸಂಕೇತಿಸುತ್ತದೆ.

ಎರಡನೇ ಪದ 'ಡೆಮೊಕ್ರಸಿ' – ಪ್ರಜಾಪ್ರಭುತ್ವ ಎನ್ನುವುದೂ ಸಹ, ಹಿಂದೆ ಗ್ರೀಕ್ ಭಾಷೆಯಲ್ಲಿ ಬಳಕೆ ಇದ್ದಿತ್ತಾದರೂ, ಅದು ಫ್ರೆಂಚ್ ಮತ್ತು ಅಮೇರಿಕಾ ಕ್ರಾಂತಿಗಳ ನಂತರ ಸಾಮಾನ್ಯ ಪದವಾಗಿ ಇಂಗ್ಲಿಷ್‌ನಲ್ಲಿ ಕಾಣಿಸಿಕೊಂಡು, ಅದೊಂದು ರಾಜಕೀಯ ಪದಬಂಡಾರವಾಗಿ ಕಾಣಿಸಿಕೊಳ್ಳುತ್ತದೆ. ಇದು ಜನಸಾಮಾನ್ಯರಿಗೆ ಮಾಂತ್ರಿಕ ಶಕ್ತಿಯ ಪದವಾಗಿ ಕಂಡರೂ ಸಹ, ಅದರ ಅಂತರ್ಯದಲ್ಲಿ ಅದು ಬಂಡವಾಳವುಳ್ಳ ವ್ಯಕ್ತಿಯ ಶಕ್ತಿಯ ಸಂಕೇತವಾಗಿ ಬದಲಾಗುತ್ತದೆ. ಅಂದರೆ ಇಂಡಸ್ಟ್ರಿಯ ಮಾಲೀಕ ಮತ್ತು ಕಾರ್ಮಿಕ ವ್ಯಕ್ತಿಗಳ ನಡುವಿನ ರಾಜಕೀಯ ಸಂಬಂಧವಾಗಿ ಚಲಾವಣೆಯನ್ನು ಪಡೆಯುತ್ತದೆ.

ಮೂರನೇ ಪದ ಕ್ಲಾಸ್/ವರ್ಗ ಎನ್ನುವುದು. ಈ ಪದ 1772ರ ವೇಳೆಗೆ ತನ್ನ ಆಧುನಿಕ ಅರ್ಥವನ್ನು ಪಡೆದುಕೊಳ್ಳುತ್ತದೆ. ಅದಕ್ಕೆ ಮೊದಲು ಅದು ಶಾಲಾ ವಿದ್ಯಾರ್ಥಿಗಳ ಗುಂಪನ್ನು ಸೂಚಿಸಲು ಬಳಕೆಯಾಗುತ್ತಿತ್ತಷ್ಟೆ. ಆದರೆ, 18ನೇ ಶತಮಾನದ ಕೊನೆಗೆ ಅದು ಜನಗಳನ್ನು ಸಾಮಾಜಿಕವಾಗಿ ವರ್ಗೀಕರಿಸುವ ಪದವಾಗಿ ಬದಲಾಗುತ್ತದೆ. ಮೊದಮೊದಲು ಇದು 'ಕೆಳ ವರ್ಗ'ದ ಜನಗಳನ್ನು ಮತ್ತು ಕೈಗಾರಿಕಾ ಕ್ರಾಂತಿಯಿಂದಾಗಿ ತಮ್ಮ ಪಾರಂಪರಿಕ ಕೌಶಲ್ಯಗಳನ್ನು ಕಳೆದುಕೊಂಡು ಕೌಶಲ್ಯ-ಹೀನರಾದ ಗುಂಪುಗಳನ್ನು ಸೂಚಿಸಲು ಬಳಕೆಯಾಯಿತು. ತದನಂತರದಲ್ಲಿ ಮಾಲೀಕ-ಕಾರ್ಮಿಕ ಎನ್ನುವ



ವರ್ಗೀಕರಣದ ಸೂಚಕವಾಗಿ, ತದನಂತರದಲ್ಲಿ ಮಧ್ಯಮವರ್ಗವನ್ನೊಳಗೊಂಡಂತೆ ವರ್ಗ ಬೇಧವನ್ನು ಸೂಚಿಸುವ ಗುಣವಾಚಕವಾಗಿ ಪಲ್ಲಟವಾಗುತ್ತದೆ. ಇಂದು ಅದು ಖಚಿತವಾದ 'ವರ್ಗ ಪ್ರಜ್ಞೆ'ಯನ್ನು ಸೂಚಿಸುವ ಪದವಾಗಿಬಿಟ್ಟಿದೆ. ಆದರೆ, ಇಂದಿಗೂ ಕನ್ನಡದಲ್ಲಿ ಬಡವ-ಶ್ರೀಮಂತ ಎನ್ನುವ ಪದವೇ ಹೆಚ್ಚು ಬಳಕೆಯಲ್ಲಿದ್ದು, ಮಧ್ಯಮವರ್ಗ ಎನ್ನುವ ಸಾಮಾಜಿಕ ಘಟಕ ಇನ್ನೂ ತನ್ನ ಅಸ್ತಿತ್ವವನ್ನು ಪಡೆಯಲು ಹೆಣಗುತ್ತಿರುವುದನ್ನು ನಾವಿಲ್ಲಿ ಗಮನಿಸಬಹುದು.

ನಾಲ್ಕನೆಯದಾಗಿ ಆರ್ಟ್ ಅಥವಾ 'ಕಲೆ' ಎನ್ನುವ ಪದವನ್ನು ಗಮನಿಸೋಣ. ಈ ಪದದ ಹಿಂದಿನ ಅರ್ಥ ವ್ಯಕ್ತಿಯ ಕೌಶಲ್ಯ ಅಥವಾ ಜೀವನ ಕ್ರಮವೊಂದನ್ನು ಮಾತ್ರ ಸೂಚಿಸುತ್ತಿತ್ತು. ಆದರೆ ಕೈಗಾರಿಕಾ ಕ್ರಾಂತಿಯ ನಂತರ ಅದು ನಿರ್ದಿಷ್ಟ ಬಗೆಯ ಅಂದರೆ ಕಲ್ಪಿತ ಪ್ರತಿಭೆ ಅಥವಾ ಸೃಜನಶೀಲವಾದ ಕಲ್ಪನಾ ಕೌಶಲ್ಯವನ್ನು ಸೂಚಿಸಲಾರಂಭಿಸುತ್ತದೆ. ತದನಂತರದಲ್ಲಿ 1840 ವೇಳೆಗೆ ಅದೊಂದು ವಿಶಿಷ್ಟ ಗುಣವುಳ್ಳ ಸೌಂದರ್ಯ ಪ್ರಜ್ಞೆಯ ಸಾಂಕೇತಿಕತೆಯನ್ನು ಪಡೆಯುತ್ತದೆ. ಇಂಥ ಕಲೆಯಡಿ ಬರವಣಿಗೆ, ಸಂಗೀತ, ಚಿತ್ರಕಲೆ, ಮೂರ್ತಿ ಕೆತ್ತನೆ, ನಾಟಕ ಮುಂತಾದುವುಗಳು ಸೇರಿ 'ಕಲೆ' ಎನಿಸಿಕೊಳ್ಳುತ್ತದೆ. ಇದು ಜನಸಾಮಾನ್ಯರಿಂದ ದೂರವಾಗಿ, ವಿಶಿಷ್ಟ ಬಗೆಯ ವ್ಯಕ್ತಿಯ ಕಲ್ಪನಾ ನಿರ್ಮಿತಿಯಾಗಿ ಪರಿಣಮಿಸುತ್ತದೆ. ಇಂಥ ವ್ಯಕ್ತಿಯಲ್ಲಿ ವಿಶಿಷ್ಟ ಪ್ರತಿಭೆಯೊಂದಿದ್ದು ಅದು ಪಡೆದುಕೊಳ್ಳುವ ಅಭಿವ್ಯಕ್ತಿಯೇ 'ಕಲೆ' ಎಂದಾಗುತ್ತದೆ. ಇಂಥದನ್ನು ವಿವರಿಸಿಕೊಳ್ಳುವದೇ ಸೌಂದರ್ಯ ಮೀಮಾಂಸೆಯಾಗಿ ರೂಪ ಪಡೆಯುತ್ತದೆ. ಆದರೆ ಇದಕ್ಕೆ ಕಾರಣೀಭೂತವಾದ ಭೌತಿಕ ಸಂಗತಿಗಳನ್ನು ನಾವು ಗಮನಿಸಬೇಕಾಗುತ್ತದೆ. ವಸಾಹತುಶಾಹಿ ನೀತಿಯ ಫಲವಾಗಿ ಯೂರೋಪು ವಸಾಹತು-ನಾಡುಗಳಿಂದ ಹೇರಳವಾದ ಸಂಪತ್ತನ್ನು ಅಕ್ರಮವಾಗಿ ದೋಚಿ, ಅದನ್ನು ಸಮರ್ಥವಾಗಿ ಸಮರ್ಥಿಸಿಕೊಳ್ಳಲು ಹೊಸದಾಗಿ ವ್ಯಾಖ್ಯಾಣಿತವಾದುದು ಈ 'ಕಲ್ಪಿತ ಪ್ರತಿಭೆ' ಅಥವಾ ಕಲೆ ಎಂದು ಸಾರಿದ್ದು ಮಾತ್ರವಲ್ಲದೆ, ಅದನನು ದೈಹಿಕ ಶ್ರಮದಿಂದ ಬೇರ್ಪಡಿಸಿ ವ್ಯಾಖ್ಯಾನಿಸಿ, ನಿರೂಪಿಸಿರುವುದನ್ನು ಕಾಣುತ್ತೇವೆ. ಇಲ್ಲೆ ಬರವಣಿಗೆಯನ್ನು ವಿಶಿಷ್ಟ ಬಗೆಯ ಸಾಹಿತ್ಯ ಎಂದು ಕರೆದದ್ದು ಮತ್ತು ವಸಾಹತಿಗೆ ಒಳಪಟ್ಟಂಥ ಜನರನ್ನು ಅದರ ಮೂಲಕ ವರ್ಗೀಕರಿಸಿದ್ದು. ಇದನ್ನೇ ಕಲಿತ ಮನಸ್ಸಿನ ಕೃಷಿ/ಕಲ್ಪಿತ ಭಾಷಿಕ ರಚನೆ ಎಂದು ಕರೆದು ಮಧ್ಯಮವರ್ಗದ ಕಲಾಚಾರವಾಗಿಸಿದ್ದು.

ಇನ್ನು ಐದನೇಯ ಪದವೇ 'ಕಲ್ಚರ್' ಅಥವಾ 'ಸಂಸ್ಕೃತಿ'. ಈ ಪದ ವಸಾಹತುಶಾಹಿ ಆಳ್ವಿಕೆಯ ಎಲ್ಲರನ್ನು ಮತ್ತು ಎಲ್ಲವನ್ನು ಆವರಿಸಿಕೊಳ್ಳುತ್ತದೆ. ಮೇಲಿನ ಪದಗಳಂತೆ ಈ ಪದವೂ ಸಹ ಹೊಸ ವಿನ್ಯಾಸದಲ್ಲಿ ಆಧುನಿಕವಾಗುತ್ತಾ, ಉದಯೀಮಾನದಲ್ಲಿದ್ದ ಬೂರ್ಶ್ವಾ ಮತ್ತು ಮಧ್ಯಮವರ್ಗದ ಗಂಡಸರ ಅಧಿಕಾರದ ಶಕ್ತಿಯಾಗಿ ಮಾರ್ಪಡುತ್ತದೆ. ಆದರೆ ಈ ಹಿಂದೆ ಅದಕ್ಕೆ 'ಸಹಜವಾದ ಬೆಳವಣಿಗೆಯನ್ನು ಪೋಷಿಸುವುದು' ಎಂದಷ್ಟೆ ಅರ್ಥವಿತ್ತು. ಅಂದರೆ ಅದು ಯಾವತ್ತೂ ಸಾಮಾಜಿಕ ಬದುಕಿನಲ್ಲೇ ರೂಢಿಸಿಕೊಂಡಂಥ ವ್ಯವಸಾಯ ಬದುಕಿನ ಸಂಬಂಧಿಯಾಗಿಯೇ ಬಳಕೆಯಲ್ಲಿ ಇತ್ತು. ಆದರೆ, 19ನೇ ಶತಮಾನದ ಹೊತ್ತಿಗೆ ಅದು ಸ್ವತಂತ್ರವಾದ ಮತ್ತು ಬೌದ್ಧಿಕವಾಗಿ ರೂಢಿಸಿಕೊಳ್ಳಬೇಕಾದ ಗುಣವಾಗಿ ಬದಲಾಗುತ್ತದೆ. ಹಾಗಾಗಿ, ಅದು 'ಮಾನಸಿಕ ಸ್ಥಿತಿ' ಅಥವಾ ಗುಣ' ಎಂದಾಗಿ, ಭೌದ್ಧಿಕವಾದ ಬೆಳವಣಿಗೆಗೆ ಸಂಬಂಧಿಸಿದ್ದು ಎಂದೂ, ತದನಂತರದಲ್ಲಿ ಅದು ಎಲ್ಲಾ ರೀತಿಯ ಕಲಾತ್ಮಕ ಗುಣಗಳಾಗಿ, ಅದನ್ನು ನಾವೆಲ್ಲಾ ಶ್ರದ್ಧೆಯಿಂದ ಕಲಿಯಬೇಕಾದ ಅಥವಾ ರೂಢಿಸಿಕೊಳ್ಳಬೇಕಾದ ಮೌಲ್ಯವಾಗುತ್ತದೆ. ಹೀಗೆ ಕಲ್ಚರ್ ಎನ್ನುವ ಪದ ಮೇಲಿನ ಎಲ್ಲಾ ಪದಗಳಿಗಿಂತಲೂ ವಿಶಿಷ್ಟವಾದ ಅರ್ಥವನ್ನು ಪಡೆಗು, ಮೊದಲಿನ ನಾಲ್ಕು ಪದಗಳಿಗೂ ಸಂಬಂಧಿಸಿದಂತೆ ಅವೆಲ್ಲವನ್ನು ಸಹಜವಾಗಿ ಪಳಗಿಸುವ, ನಿಯಂತ್ರಿಸುವ ಮತ್ತು ನಿರ್ದೇಶಿಸುವ ಪದವಾಗಿ ಹೊರಹೊಮ್ಮುತ್ತದೆ. ಇದಿಲ್ಲದೆ ವ್ಯಕ್ತಿತ್ವ ಇಲ್ಲವಾಗಿ, ಒಂದು ಸಮಾಜದ

ನಾಗರಿಕತೆಯನ್ನು ನಿರ್ಧರಿಸುವ ಮಾನದಂಡವಾಗಿ ಮಾನ್ಯತೆಯನ್ನು ಪಡೆಯುತ್ತದೆ. ಹೀಗೆ ಈ ಚಾರಿತ್ರಿಕ ಆಯಾಮಗಳಲ್ಲಿ ಆ ಪದ ಚಲಿಸಿ, ಯೂರೋಪಿನ ವಸಾಹತು ಭಾರತದಲ್ಲಿ ಸಂಸ್ಕೃತ ಭಾಷೆಯ 'ಸಂಸ್ಕೃತಿ' ಪದವಾಗಿ ನಂತರ ಕನ್ನಡದಲ್ಲಿ ಕನ್ನಡದ್ದೇ ವೇಷತೊಟ್ಟ ಜನಪ್ರಿಯ ರೂಪವನ್ನು ಪಡೆಯುತ್ತದೆ. ಇದನ್ನೇ ಡಿವಿಜಿಯಂಥವರು 'ಮಾನಸಿಕ ಸಂಸ್ಕಾರ' ಎಂದು ಕರೆದದ್ದು. ಅಂದರೆ ಈ ಸಂಸ್ಕೃತಿ ಎನ್ನುವ ಕಲ್ಪಿತ ಸತ್ಯವನ್ನು ಒಪ್ಪದವರು ಪ್ರಸ್ತುತ ಸಮಾಜದಲ್ಲಿ ಬದುಕುವ ಹಕ್ಕನ್ನು ಕಳೆದುಕೊಳ್ಳುತ್ತಾರೆ ಎಂದು ನಂಬಿಸಲಾಗುತ್ತದೆ.

ಆದ್ದರಿಂದ, ಮೇಲೆ ವಿವರಿಸಿಕೊಂಡಂತೆ ಈ ಪದಗಳು ಹೊಸ ಬಗೆಯ ಅರ್ಥಗಳನ್ನು ಪಡೆದದ್ದು 'ಆಧುನಿಕತೆ' ಎಂದು ಸಂಕಥಿಸಿರುವ ವಿಚಾರಧಾರೆಯಲ್ಲಿ. ಅದು ಬುದ್ಧಿ ಮತ್ತು ದೇಹ ಎನ್ನುವ ಇಲ್ಲದ ವರ್ಗೀಕರಣವನ್ನು ತಂದು, ಅದನ್ನೇ ನಮ್ಮ ಅರಿಮೆಯನ್ನಾಗಿಸಿದಲ್ಲದೆ, ಭವಿಷ್ಯದ ಸಮಾಜ ಸಾಗುವ ಮತ್ತು ಸಂಘಟನೆಗೊಳ್ಳುವ ಸೈದ್ಧಾಂತಿಕ ನೆಲೆಗಟ್ಟನ್ನು ಸಂಘಟಿಸುವ ಭಾಷಿಕ ನಿರೂಪಣೆಗಳಾಗುತ್ತವೆ. ಇಂಥ ಐಡಿಯಲಾಜಿಕಲ್ ಆದ ನೆಲೆಗಳನ್ನು ಬಿಟ್ಟು ನಾವು ಯೋಚಿಸುವುದೆಂದರೆ ಅದರ್ಶವಾದಿಗಳಾಗಿ, ಆತ್ಮವಾದಿ ಚಿಂತನೆಯನ್ನು ಜೀವಿಸುವುದು ಎಂದಾಗುತ್ತದೆ. ಏಕೆಂದರೆ ವಾಸ್ತವದಲ್ಲಿ ನಾವು (ಅಂದರೆ) ಆಧುನಿಕತೆಯಲ್ಲಿ ಮೊದಲನೇ ತಲೆಮಾರಿನವರಾಗಿ ಪಾಲ್ಗೊಳ್ಳುವಾಗ ನಮ್ಮ ಹಿಡಿತಕ್ಕೆ ಯಾವುದೂ ನಿಲಕದೆ ನಿಸ್ತೇಜರಾಗಿ ನಿಂತುಬಿಡುತ್ತೇವೆಯಲ್ಲವೇ! ಇಂಥವರನ್ನು ಪಳಗಿಸಲು ಅಥವಾ ವಿದ್ಯಾವಂತರನ್ನಾಗಿಸಲು ಬೇಕಾದ ಅಚ್ಚರಿ ಎನಿಸುವಷ್ಟು ಮಾನವಿಕ ಮತ್ತು ಭೌತಿಕ ವಿಜ್ಞಾನಗಳ ಜ್ಞಾನ ಶಿಸ್ತುಗಳು ಆವಿಷ್ಕಾರಗೊಂಡಿವೆಯಲ್ಲ! ಅಂದರೆ ಜೀವನವಿಡೀ ಕಲಿಯುವಂಥ ಅಥವಾ ಸಾಧಿಸಬೇಕಾದ ಗುರಿಯನ್ನು ಈ ಜ್ಞಾನ ಶಿಸ್ತುಗಳು ನಮ್ಮೆದುರು ಇಟ್ಟಿವೆ. ಇದೇ 'ನಾಗರಿಕ ಸಂಸ್ಕೃತಿ'!

ಕನ್ನಡ ಭಾಷಿಕ ವಲಯದಲ್ಲಿ ಅದರ ಉದ್ಘಾಟನೆ:

ಮೇಲಿನ ವಿಷಯವನ್ನು ಕನ್ನಡದ ಸಂದರ್ಭಕ್ಕೆ ನಿರ್ದಿಷ್ಟಗೊಳಿಸಿ ಇನ್ನು ಮುಂದೆ ಚರ್ಚಿಸಬೇಕಾಗುತ್ತದೆ. ಯಾವ ವಸಾಹತುಶಾಹಿ ಆಧುನಿಕತೆಯನ್ನು ಕನ್ನಡ ಜಗತ್ತು ಸ್ವೀಕರಿಸುತ್ತದೋ, ಅಂದಿನಿಂದಲೇ ಕನ್ನಡ ಭಾಷೆ ಮತ್ತು ಅದು ಸೂಚಿಸುತ್ತಿದ್ದ ಅಥವಾ ಪ್ರತಿನಿಧಿಸುತ್ತಿದ್ದ ಪದಾರ್ಥ ಜಗತ್ತಿನ ನಡುವೆ ಕಂದರವೊಂದು ಏರ್ಪಡುತ್ತದೆ. ಭಾಷೆ ಮತ್ತು ಬದುಕಿನ ನಡುವೆ ಇದ್ದ ನಂಟುತನ ಮಾಯವಾಗಿ, ಅಲ್ಲೊಂದು ಕೃತಕತೆ ಏರ್ಪಡುತ್ತದೆ. ಇದನ್ನೇ ಕನ್ನಡ ಜಗತ್ತಿನ ವಸಾಹತೀಕರಣ ಎಂದು ಬೇಕಾದರೆ ಕರೆಯೋಣ... ವಸಾಹತುಶಾಹಿ ಪ್ರಜೆಗಳಾದ ಕನ್ನಡಿಗರು ಹೇಗೆ ಸಂಘಟಿತಗೊಂಡರು ಎಂಬುದನ್ನು ವಿವರಿಸಿಕೊಳ್ಳುವ ಚಾರಿತ್ರಿಕ ಒತ್ತಡ ಇಲ್ಲಿ ಎದುರಾಗುತ್ತದೆ. ಅದನ್ನು ನಾವು ಸಂಕ್ಷಿಪ್ತವಾಗಿ ಗಮನಿಸಲೇ ಬೇಕಾದ ಜರೂರು ಇದೆ. ಕಳೆದ ಎರಡು ನೂರು ವರ್ಷಗಳ ಅವಧಿಯ ಕನ್ನಡ ಭಾಷಿಕ ಜಗತ್ತನ್ನು ನಾವು ಗಮನಿಸುವಾಗ, ಅದು ಸಾಗಿ ಬಂದ ಪಯಣವನ್ನು ಹಲವರು ಹಲವು ರೀತಿಯಲ್ಲಿ ಗಮನಿಸಿದ್ದಾರೆ. ಆದರೆ ನಾನು, ತೀರಾ ವ್ಯಕ್ತಿಗತ ನೆಲೆಯಲ್ಲೇ ಈ ಪ್ರಕ್ರಿಯೆಯನ್ನು ಗ್ರಹಿಸಲು ಪ್ರಯತ್ನಿಸುತ್ತಿದ್ದೇನೆ. (ಅಂದರೆ ನಿಮ್ಮದೇ ಆದ ತೀರ್ಮಾನಗಳನ್ನು ನೀವು ಬಿಟ್ಟುಕೊಡಬೇಕೆಂಬ ಒತ್ತಾಯ ಇಲ್ಲಿ ಇಲ್ಲ).

ಚಾರಿತ್ರಿಕವಾಗಿ ಟಿಪ್ಪು ಮಡಿದನಂತರ ಹೊಸದಾದ ಒಪ್ಪಂದಗಳು ಸ್ಥಳೀಯ ಪಾಳೆಗಾರರ ನಡುವೆ ಮತ್ತು ಬ್ರಿಟಿಷರ ನಡುವೆ ಏರ್ಪಟ್ಟು ವಸಾಹತು – ಪ್ರಜೆಗಳಾದವರಿಗೆ ಬರೀ ದುಡಿಯಲು ಮತ್ತು ಆಗಷ್ಟೆ ಜಾರಿಯಾದ ಖಾಸಗಿ ಆಸ್ತಿಗೆ ಕಂದಾಯ ಪಾವತಿಸಲಷ್ಟೆ ಅವಕಾಶವಿದ್ದದ್ದು. ಇಂಥ ಜನ, ತಮ್ಮ ಆಯ್ಕೆಗಳನ್ನು ಮತ್ತು ಬದುಕುಗಳನ್ನು ಹೇಗೆ ಸಂಘಟಿಸಿಕೊಂಡರು ಎನ್ನುವುದು ಭಿನ್ನವಾದ ಚರ್ಚೆಯಾಗುತ್ತದೆಯಾದ್ದರಿಂದ ನಾನು ಇಲ್ಲಿ ಅಂಥವರ ಭಾಷಿಕ ಬದುಕನ್ನಷ್ಟೆ ಚರ್ಚಿಸುತ್ತಿದ್ದೇನೆ.


ಮೊದಲಿಗೆ ಯೂರೋಪಿನ ವಿದ್ವಾಂಸರು ಮತ್ತು ಮಿಶಿನರಿಗಳು ಕನ್ನಡ ಭಾಷೆಯನ್ನು 'ವರ್ನಾಕ್ಯುಲರ್' ಭಾಷೆ ಎಂದು ಕರೆಯುತ್ತಾರೆ. ವರ್ನಾಕ್ಯುಲರ್ ಎಂದರೆ ಯೂರೋಪಿನ ಬದುಕಿಗೆ ಅನ್ಯವಾದುದು. ಶೆಲ್ಡನ್ ಪೊಲಾಕ್ ಸಹ ಇದೇ ರೀತಿ ಬಳಸಿರುವುದನ್ನು ಡಾ.ಕೆ.ವಿ.ಎನ್‌ರವರು ಗುರುತಿಸುತ್ತಾರೆ. ಅವರ ಪ್ರಕಾರ ಜನರಾಡುವ, ಮನ್ನಣೆ ಪಡೆಯದ ಭಾಷೆಗಳನ್ನು ಯೂರೋಪಿನಲ್ಲಿ ವರ್ನಾಕ್ಯುಲರ್‌ಗಳೆಂದು ಕರೆಯುವುದು ವಾಡಿಕೆಯಲ್ಲಿತ್ತು. ಅಂದರೆ, ಹೀಗೆ ಕರೆಯುವುದರ ಮೂಲಕ ಜನರನ್ನು ಮತ್ತು ಅವರ ಭಾಷೆಯನ್ನು ಅನ್ಯಗೊಳಿಸುತ್ತಾ ಸ್ಥಳೀಯರ ಐಡೆಂಟಿಟಿಯನ್ನು ತಿರುಚುತ್ತಾರೆ. ಇದಕ್ಕೆ ಅವರು ಬಳಸಿಕೊಂಡದ್ದು ಭಾಷೆಯನ್ನೇ ಎನ್ನುವುದನ್ನು ಗಮನಿಸಬೇಕಾಗುತ್ತದೆ. ಆದ್ದರಿಂದಲೇ 'ಕನ್ನಡ'ವನ್ನು ಯುರೋಪಿಯನ್ನರು, 'ಕೆನರಿಮ್', 'ಕನ್ನರಿಗ', 'ಕನ್ನರಿ', 'ಕೆನಾರಿಸ್' ಮುಂತಾಗಿ ಕರೆಯುತ್ತಾರೆ. ಇತರ 'ವರ್ನಾಕ್ಯುಲರ್' ದೇಶ ಭಾಷೆಗಳಲ್ಲಿ ಹೇಗೆ ನಿಘಂಟು ಮತ್ತು ವ್ಯಾಕರಣ ಕೋಶಗಳು ಬಂದವೋ ಹಾಗೆಯೇ ಲಿಯೊನಾರ್ಡೊ ಚೆನ್ನಾಮಿಯು, ಕನ್ನಡದಲ್ಲಿ ಭಾಷಾ ಕೋಶ ಮತ್ತು ವ್ಯಾಕರಣಗಳನ್ನು ರಚಿಸಿದನೆಂಬ ಉಲ್ಲೇಖ ಕಂಡು ಬರುತ್ತದೆ. ಅಂದರೆ ಇಲ್ಲಿ ಅನ್ಯವಾಗಿ ಸಂಘಟಿತಗೊಂಡ ಭಾಷೆಯಲ್ಲಿನ ಪದಗಳಿಗೆ ಖಚಿತವಾದ ಅರ್ಥಗಳನ್ನು ಬದ್ಧಗೊಳಿಸುವುದನ್ನು ನಾವು ಕಾಣುತ್ತೇವೆ. ಅನಂತರದಲ್ಲಿ 1809ರಲ್ಲಿ ಆಗಿನ ಕೆನರಾ ಜಿಲ್ಲೆಯ ಅಧಿಕಾರಿಯಾಗಿದ್ದ ಜಾನ್ ಮೆಕರಲ್ ಕನ್ನಡ ವ್ಯಾಕರಣ ರಚನೆಯ ಸೂಚನೆಯನ್ನು ಮದ್ರಾಸ್ ಸರಕಾರದ ಮುಂದಿಡುತ್ತಾನೆ. ತನ್ನ ಸೂಚನೆಯ ಪ್ರಕಾರ ಜಾನ್ ಮೆಕೆರಲ್ ಭಾಷಾಂತರಕಾರನಾಗಿ ನೇಮಕಗೊಂಡು, 1820ರಲ್ಲಿ 'ಂ ಉಡಿಚಿಟಟಚಿಡಿ ಂಜ ಣuಜ ಏಚಿಡಿಟಿಚಿಣಚಿಞಚಿ ಐಚಿಟಿಗಿuಚಿgಜ' ಪ್ರಕಟಿಸುತ್ತಾನೆ. ಇದು ರಚನೆಗೊಂಡಿದ್ದು ಬ್ರಿಟಿಷ್ ಅಧಿಕಾರಿಗಳು ಮತ್ತು ಮಿಷನರಿಗಳ ಬಳಕೆಗಾಗಿ. ಇದೇ ತೆರನ ಕೆಲಸಗಳು ಎಷ್ಟು ಭರದಿಂದ ಸಾಗುತ್ತವೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು! ಇದಕ್ಕೆ ಪೂರಕವಾದ ಮತ್ತೊಂದು ಬಗೆಯ ಉದಾಹರಣೆಯನ್ನು ಇಲ್ಲಿ ಗಮನಿಸುವುದು ಮುಖ್ಯವಾದುದು "ಔಟ ಣuಜ ಛಿಚಿಟಿಚಿಡಿಜಟ ಐಚಿಟಿಗಿuಚಿgಜ ಚಿಟಜ ಮುಣಜಡಿಚಿಣuಡಿಜ' ಲೇಖನವನ್ನು ಗಾಡ್ಫ್ರೀಡ್ ವೈಗಲ್ ಜರ್ಮನ್ ಭಾಷೆಯಲ್ಲಿ ಬರೆಯುತ್ತಾನೆ. ಇಲ್ಲಿ ವೈಗಲ್‌ನು ಪ್ರತಿಪಾದಿಸುವ ಸಂಗತಿಗಳು ಕುತೂಹಲಕಾರಿಯಾಗಿವೆ. ಸುಮಾರು ಇಪ್ಪತ್ತೆಂಟು ಪುಟಗಳಷ್ಟಿರುವ ಈ ಲೇಖನ ಮೊದಲ ಬಾರಿಗೆ ಕನ್ನಡ ಭಾಷಾ ಭೌಗೋಳಿಕತೆಯ ಶಾಬ್ದಿಕ ನಕಾಶೆಯನ್ನು ನೀಡುವುದರ ಜೊತೆಗೆ, ಕೇವಲ ಭಾಷೆಯನ್ನಷ್ಟೆ ಸಂಘಟಿಸದೆ, ಅದರ ಭೌಗೋಳಿಕತೆಯನ್ನೂ ಸಹ ಸಂಘಟಿಸುತ್ತದೆ. ಈ ಭೌಗೋಳಿಕತೆ ಮತ್ತು ಭಾಷೆ ಎರಡೂ ಒಂದುಗೂಡಿ ವಸಾಹತುಶಾಹಿಗೆ ಬೇಕಾದ "ಉಜಂಂಡಿಚಿಠಿಛಿಚಿಟ ಂಣuಣಣಾಜಜ" ಅನ್ನು ನಿರೂಪಿಸುತ್ತದೆ. ಇದೇ ಮುಂದೆ ಕನ್ನಡ ಭಾಷಾ ಭೌಗೋಳಿಕವಾಗಿ ಕನ್ನಡ ರಾಷ್ಟ್ರೀಯತೆಯ ಸ್ವರೂಪವನ್ನು ಪಡೆಯುತ್ತದೆ. ಅಂದರೆ ಹೇಗೆ ಅನ್ಯವಾದುದು ಸ್ಥಳೀಯವಾಗಿ, ದೇಶಿಭಾಷೆಯಾಗಿ, ತದನಂತರದಲ್ಲಿ ಕನ್ನಡ ಮಾತೃಭಾಷೆಯಾಗುತ್ತದೆ ಎನ್ನುವ ಪುರುಷ ಮೌಲ್ಯದ ಚಿಂತನೆಯನ್ನು ಬೆಳೆಸುತ್ತದೆ ಎನ್ನುವುದನ್ನು ಇಲ್ಲಿ ನಾವು ಗಮನಿಸಬೇಕಾಗುತ್ತದೆ. ಈ ಪುರುಷ

ಮೌಲ್ಯವೇ ಅಂತಿಮವಾಗಿ 'ಸಂಸ್ಕೃತಿ' ಚಿಂತನೆಯಾಗಿ ಕನ್ನಡ ದೇಶದಲ್ಲಿ ಬೆಳೆಯುವುದು ಮತ್ತು ಪಸರಿಸುವುದು. ಅಲ್ಲದೆ, ವಸಾಹತು ಪ್ರಜೆಯನ್ನು ಸ್ಥಳೀಯವಾಗಿ ಯೂರೋಪಿಯನ್ನರು ಸಂಘಟಿಸಿದ ಕನ್ನಡ ಭಾಷೆಯ ಮೂಲಕ ಪಳಗಿಸಲಾಗುತ್ತದೆ. ಅದನ್ನೇ ಮುಂದಿನ ಅವರ ಭಾಷಾ ಭೌಗೋಳವನ್ನಾಗಿಯೂ (ಕರ್ನಾಟಕ ರಾಜ್ಯವನ್ನಾಗಿ) ಸಂಘಟಿಸಲಾಗುತ್ತದೆ, ಇದೇ ಇವತ್ತಿನ ಮೂಲಭೂತವಾದದ ಕೇಸರೀಕರಣವಾಗಿ ಮತ್ತು ಎಲ್ಲಾ ನಾಡಿನ ಸೇನೆಗಳಾಗಿ – ಭಯದ ವಾತಾವರಣವನ್ನು ಎಲ್ಲರಲ್ಲೂ ತುಂಬುತ್ತಿರುವುದು.

ಆದರ್ಶೀಕರಣ ಮತ್ತು ಪರಂಪರೆಯ ಮಾದರಿಗಳು:

ಮೇಲೆ ವಿವರಿಸಿಕೊಂಡಂತೆ ವಸಾಹತುಶಾಹಿ ತನ್ನ ವಿಶ್ವಾತ್ಮಕ ತರ್ಕ ಮತ್ತು ನಾಗರೀಕರಿಸುವ 'ಬಿಳಿಗಂಡಸಿನ ಹೊಣೆಗಾರಿಕೆ' ಅಂದಿನ ಕನ್ನಡ ಭಾಷಿಕ ವಲಯವನ್ನು ಸಂಘಟಿಸುತ್ತದೆ. ಅಂದರೆ ಯೂರೋಪಿನ ನಾಗರೀಕತೆಯ ವಿಶ್ವಾತ್ಮಕ ತರ್ಕ ಇಲ್ಲಿ ಜಾರಿಯಾಗಿಸಿದ ಜ್ಞಾನ ಮೀಮಾಂಸ ವಿಧಾನಗಳೆಂದರೆ ಎರಡು ರೀತಿಯದ್ದು ಒಂದು ಆಧುನಿಕತೆ ಎನ್ನುವ ಪ್ರಯೋಜನಾಕಾರಿ ಸಿದ್ಧಾಂತ ಮತ್ತು ಎರಡು, ಓರಿಯಂಟಲಿಸ್ಟ್ ಗ್ರಹಿಕೆಯಲ್ಲಿನ ಉದಾರಿ ನಿಲುವು. ಮೊದಲನೆಯದ್ದು ನೇರವಾಗಿ ವಸಾಹತುಶಾಹಿ ಆಳ್ವಿಕೆಯನ್ನು ಸಂಘಟಿಸಿದರೆ, ಎರಡನೆಯದ್ದು ವಸಾಹತುಶಾಹಿಗೆ ಅಗತ್ಯವಾದ ಸಂಸ್ಕೃತ ಪರಂಪರೆಯನ್ನು ಮತ್ತಷ್ಟು ಜಾತಿನಿಷ್ಠ ಜ್ಞಾನವನ್ನಾಗಿ ಸಂಘಟಿಸಿದ್ದು. ಇದೇ ಅಂತಿಮವಾಗಿ ವಸಾಹತುಶಾಹಿ ಪ್ರಜೆಗೆ ಆಧುನಿಕ ಕನ್ನಡ ಐಡೆಂಟಿಟಿಯನ್ನಾಗಿಸಿದಲ್ಲದೆ, ಅದನ್ನೇ ಕನ್ನಡ ಸಂಸ್ಕೃತಿಯನ್ನಾಗಿ ನಿರೂಪಿಸಿದ್ದು. ಈ ಮೂಲಕವೇ ಕನ್ನಡ ಪರಂಪರೆ ಎನ್ನುವುದೂ ಸಹ ಸಂಘಟನೆಗೊಂಡದ್ದು. ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ಜನ ಸಮುದಾಯಗಳ ಅಂತಃಸತ್ವಕ್ಕೆ ಕಾರಣೀಭೂತವಾದ ಕನ್ನಡದ ನುಡಿಗಟ್ಟನ್ನು ಸಂಸ್ಕೃತ ಮಾದರಿಯನ್ನು ಅನುಸರಿಸಿ ಬರವಣಿಗೆಯ ಮೂಲಕ ಪ್ರಮಾಣೀಕರಿಸಲಾದುದು. ಇದರಿಂದಾಗಿ ರಾಜಪ್ರಭುತ್ವ ಮತ್ತು ಧರ್ಮವನ್ನು ಜನಸಮುದಾಯಗಳು ಕಾಯ್ದುಕೊಳ್ಳುವಂತಾಯಿತಲ್ಲದೆ, ಅವನ್ನೇ ಪರಂಪರೆಯ ಶ್ರೇಷ್ಠ ಸಂಕೇತಗಳನ್ನಾಗಿ ಮಾಡಿಕೊಂಡದ್ದು. ಅಂದಿನಿಂದಲೇ ಅವರಾಡುವ ಮಾತು ಮತ್ತು ಅವರ ಸುತ್ತಲಿನ ಪರಿಸರದ ಮಧ್ಯೆ ದೊಡ್ಡ ಕಂದರ ಕಾಣಿಸಿಕೊಂಡದ್ದು. ಈ ಕಂದರ ಇನ್ನೂ ಮುಂದುವರೆದಿರುವುದು ನಾಚಿಗೇಡಿನ ಸಂಗತಿಯಾಗಿದೆ. ಅಂದರೆ 'ಪದ ಮತ್ತು ಪದಾರ್ಥ' ನಡುವೆ ಇದ್ದ ನೇರ ಸಂಬಂಧ ಮರೆಯಾಗಿ ಕಲ್ಪಿತ ಜಗತ್ತೊಂದು ಉದಯಿಸಿ ಅದನ್ನು ಕೆತ್ತುವುದನ್ನೇ ಸಾಹಿತ್ಯ–ಸಂಸ್ಕೃತಿ ಎಂದು ಬಿಂಬಿಸಿದ್ದು.

ಇದಕ್ಕೊಂದು ಭೌತಿಕ ಕಾರಣವೂ ಇತ್ತು ಯೂರೋಪಿನ ವಸಾಹತುಶಾಹಿ ಆಳ್ವಿಕೆ ಇದು ಗಣಿಗಾರಿಕೆಯ ಮೂಲಕ ಪರಿಸರ ಸಂಪತ್ತನ್ನು ವ್ಯಕ್ತಿಗತವಾಗಿ ದೋಚುವಂತೆ, ವಸಾಹತು ನೆಲಗಳೆಲ್ಲಾ ಪ್ರಾಕೃತಿಕ ಸಂಪತ್ತು ಮತ್ತು ಕಂದಾಯದ ಮೂಲಕ ದೋಚಿದ ಸಂಪತ್ತನ್ನು 'ಆಧುನಿಕ ಅರ್ಥಶಾಸ್ತ್ರ'ವನ್ನಾಗಿ ಮಾಡಿದಲ್ಲದೆ, ಹಾಗೆ ದೋಚಿದ ಅಕ್ರಮ ಸಂಪತ್ತನ್ನು ಸಮರ್ಥಿಸಿಕೊಳ್ಳುವ ಸಲುವಾಗಿಯೇ ಕಲ್ಪಿತ ಭಾಷಿಕ ಸಮುದಾಯವೊಂದನ್ನು ಸಂಘಟಿಸಿ, ಅದಕ್ಕೊಂದು 'ಕಲ್ಪಿತ ಸಂಸ್ಕೃತಿ'ಯನ್ನು ಹೊರಗಿನಿಂದ ಹೇರಿದ್ದು. ಇದೇ ಮುಂದೆ ಸಾಹಿತ್ಯ ಎಂದು ಎಲ್ಲಾ ಕಡೆ ಘೋಷಣೆಯಾಗಿ, ಅದಕ್ಕೆ ಅಗತ್ಯವಾದ 'ಸಂಸ್ಕೃತ ಪರಂಪರೆ'ಯ ಮೀಮಾಂಸೆಯನ್ನು ಸಂಘಟಿಸಿದ್ದು. ಆದರೆ ಹೀಗೆ ಮಾಡುವಾಗ, ಕನ್ನಡ ಸಮುದಾಯಗಳ ಮಾತಿನ ವಲಯಗಳನ್ನು ತಮ್ಮ ಪರಿಸರದಿಂದ ದೂರವಾದುವಲ್ಲದೆ, ತಮ್ಮ ದಿನ–ನಿತ್ಯದ ಅರಿವಿನ ಕ್ರಮಗಳನ್ನು ಬಿಟ್ಟುಕೊಟ್ಟು, ಬದುಕಿನ ಕಲಾಚಾರದ ಬದಲು, ವಸಾಹತುಶಾಹಿ ನೀತಿಯ ನಾಗರಿಕತೆ, ಪ್ರಗತಿ ಮತ್ತು ಅಭಿವೃದ್ಧಿಯಾಧಾರಿತ ಆಧುನಿಕತೆಯನ್ನು ಏಕರೂಪಿ ಸತ್ಯವನ್ನಾಗಿ ಒಪ್ಪಿಕೊಂಡದ್ದು. ಇಲ್ಲಿ ಬಹುತ್ವವನ್ನು ನಿರಾಕರಿಸಲಾಗುತ್ತದೆ. "ಸಾಮ್ರಾಜ್ಯ ನಿರ್ಮಾಣದ ಹಂತದಲ್ಲಿ ಯಾವಾಗಲೂ ಬಹುತ್ವದ ನಿರಾಕರಣೆ ಇರುತ್ತದೆ" ಎನ್ನುವ ಡಾ. ಕೆ.ವಿ.ನಾರಾಯಣರವರ ಮಾತು ನನಗೆ ಇಲ್ಲಿ ಬಹಳ ಮುಖ್ಯವಾದುದು. ಈ ಬಹುತ್ವದ ಪ್ರಶ್ನೆಯೆಂದರೆ ಯಾವ ಯಾವ ಕುಲಸಮುದಾಯಗಳು ವಸಾಹತುಶಾಹಿ ಆಳ್ವಿಕೆಯಲ್ಲಿ ಪಾಲ್ಗೊಂಡವು ಮತ್ತು ಯಾವ ಯಾವ ಕುಲಸಮುದಾಯಗಳು ತಮ್ಮ ಐಡೆಂಟಿಟಿಗಳನ್ನು ಕಳೆದುಕೊಂಡವು ಎನ್ನುವುದು ಮುಖ್ಯವಾದ ನಮ್ಮ ಚರ್ಚೆಯ ವಿಷಯವಾಗುತ್ತದೆ. ಆದರೆ ಇದನ್ನು ಮರೆ ಮಾಚಿ, ಆದರ್ಶವನ್ನಾಗಿಸಿದಲ್ಲದೆ, ಎಲ್ಲರೂ ಇದನ್ನು ಅನುಸರಿಸುವಂತೆ ಮಾಡಿರುವುದು ದುರಂತವೇ ಸರಿ. ಇದಕ್ಕೆ ಪೂರಕವಾಗಿ ಕಿಟೆಲ್‌ನವರ "ಂಟ ಇಚಿಥಿ ಠಿ ಅಚಿಟಿಚಿಡಿಇಜ ಋಣಜಡಿಚಿಣಣಡಿಜ" ಕೃತಿಯನ್ನು ಗಮನಿಸಬಹುದು. ಬಾಸಲ್ ಮಿಷನಿನವರು ಸಂಗ್ರಹಿಸಿದ್ದ ಹಸ್ತಪ್ರತಿಗಳು ಮತ್ತು ಮೊಗ್ಲಿಂಗ್‌ನ ಲೇಖನವನ್ನು ಮೂಲವನ್ನಾಗಿಟ್ಟುಕೊಂಡು ಕಿಟಲ್ ತನ್ನ ವಿಚಾರಗಳನ್ನು ಅದರೊಡನೆ ಸೇರಿಸಿ ಈ ಪ್ರಬಂಧವನ್ನು ಸಿದ್ಧಗೊಳಿಸಿ, ನಾಗವರ್ಮನ ಛಂದೋಂಬುಧಿಯ ಪೀಠಿಕೆಯಾಗಿ ಪ್ರಕಟಿಸುತ್ತಾನೆ. ಆರಂಭದಿಂದಲೇ ಎಂಪಿರಿಕಲ್ ಆಗಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡುತ್ತಾ ಸಾಗುತ್ತಾನೆ. ಅಂದಿನ ಸಂದರ್ಭದಲ್ಲಿ ಪ್ರಚಲಿತವಿದ್ದ ಸರಳ ರೇಖಾತ್ಮಕ ಕಾಲದ ಪರಿಕಲ್ಪನೆಯಲ್ಲಿ ಕನ್ನಡ ಕವಿಗಳನ್ನು ಬಂಧಿಸುತ್ತ ಸಾಹಿತ್ಯ ಚರಿತ್ರೆಯೊಂದನ್ನು ಕಟ್ಟಿಕೊಡಲಾರಂಭಿಸುತ್ತಾನೆ. ಈ ಕಾಲದ ಪರಿಕಲ್ಪನೆ ಗ್ರೆಗೋರಿಯನ್ ಕ್ಯಾಲೆಂಡರ್‌ನ್ನು ಅನುಸರಿಸಿದ್ದು,



18ನೇ ಶತಮಾನದ ಮಧ್ಯದಲ್ಲಷ್ಟೇ ಚಲಾವಣೆಗೆ ತರಲಾಗಿದ್ದನ್ನು ನಾವು ಮರೆಯುವಂತಿಲ್ಲ. ಈ ಕಾಲ ಪರಿಕಲ್ಪನೆಯನ್ನು ಕನ್ನಡ ಕವಿಗಳ್ಯಾರು ಬಳಸಿರಲಿಲ್ಲವೆಂಬುದು ಸ್ಪಷ್ಟ. ಆದ್ದರಿಂದ ಕಿಟೆಲ್ ಕನ್ನಡ ಕವಿಗಳಿಗೆ ವ್ಯಕ್ತಿಕೇಂದ್ರಿತ ಕರ್ತೃತ್ವ ಪಟ್ಟವನ್ನು ಕಟ್ಟುತ್ತಾ, ಅವರ ಕಾಲ ನಿಗದಿಯನ್ನು ರಾಜತ್ವದ ಹಿನ್ನೆಲೆಯಲ್ಲಿ ಕಟ್ಟುತ್ತಾ ಸಾಗುತ್ತಿರುವುದು ಅಂದಿನ ವಸಾಹತುಶಾಹಿ ಪ್ರಭುತ್ವಕ್ಕೆ ಅವಶ್ಯವಾಗಿದ್ದಿತ್ತು. "ಕನ್ನಡ ಸಾಹಿತ್ಯದ ಎಲ್ಲ ಪಂಗಡಗಳಲ್ಲಿ ಅಶ್ಲೀಲ ಸಂಗತಿಗಳ ಬಗ್ಗೆ ಇರುವ ಅಸಹ್ಯಕರ ಅಭಿರುಚಿ ಮುಂದಿನ ಶತಮಾನಗಳಲ್ಲಿ ಕಡಿಮೆಯಾಗಲಿಲ್ಲ. ಇತ್ತೀಚಿನ ದಿನಗಳಲ್ಲಿ ಕೂಡ ಅದು ಕಡಿಮೆಯಾಗುತ್ತಿಲ್ಲ. ಅಪರಿಶುದ್ಧ ಧಾರ್ಮಿಕ ಮತ್ತು ಪುರಾಣ ಕತೆಗಳು ಮತ್ತೆ ಮರುಪ್ರಕಟಣೆಯಾಗುತ್ತಿರುವುದು ದುರದೃಷ್ಟಕರ ಸಂಗತಿ. ಅನಕ್ಷರಸ್ಥ ವರ್ಗಗಳಲ್ಲಿ ಕೆಟ್ಟ ಅಭಿರುಚಿ ಬೆಳೆಸುವಂತಹ ವಿವರಣೆಗಳು ಈಗಲೂ ನಡೆದುಕೊಂಡು ಹೋಗುತ್ತಿವೆ." ಇದು ಸಂಘಟಿತಗೊಂಡ ಮಧ್ಯಮವರ್ಗದ ಅಭಿರುಚಿ ಮತ್ತು ನೈತಿಕತೆಯನ್ನಷ್ಟೆ ಸೂಚಿಸುತ್ತದೆ.

ಅಂದರೆ, ಪಾಶ್ಚಿಮಾತ್ಯ ಓರಿಯಂಟಲ್ ವಿದ್ವಾಂಸರು ಇಲ್ಲಿನ 'ಓಚಿಣುತಿಜ' ಪರಂಪರೆಗಳನ್ನು ಕಟ್ಟುವಾಗ, ಅದನ್ನು ಅಂದಿನ ಇಂಗ್ಲೆಂಡಿನಲ್ಲಿ ಆಚರಣೆಯಲ್ಲಿದ್ದ 'ವಿಕ್ಟೋರಿಯನ್ ಪ್ಯೂರಿಟನಿಸಂ'ನ ನೈತಿಕತೆಗೆ ಒಳಪಡಿಸುತ್ತಾರೆ. ಇದೇ ಅನಂತರದಲ್ಲಿ 'ಕನ್ನಡ ಸಾಹಿತ್ಯ ಪರಂಪರೆ'ಯಲ್ಲೂ ಕ್ರಿಯಾಶೀಲವಾಗಿದ್ದನ್ನು ಎಚ್. ಎಸ್. ರಾಘವೇಂದ್ರರಾವ್, ತಮ್ಮ ಕೃತಿ 'ಹಾಡೇ ಹಾದಿಯ ತೋರಿತು' ಎನ್ನುವುದರಲ್ಲಿ ಗುರುತಿಸುತ್ತಾರೆ. ಅಂದರೆ ವಸಾಹತುಶಾಹಿ ಒಂದು ರೀತಿಯ ಸಾವಯವ-ಸಂಬಂಧದ ಮೂಲಕ ಸ್ಥಳೀಯತೆಯನ್ನು ಸಂಘಟಿಸುತ್ತದೆ. ಇದೇ ಭಾಷೆಯ ಮೂಲಕ ಮುಂದೆ ಸಾಂಸ್ಕೃತಿಕವಾಗಿ 'ಮಾತೃ ಭಾಷೆ' ಎಂದಾಗುವುದು. ಇದೇ ಮುಂದೆ ಯೂನಿವರ್ಸಿಟಿ ಮತ್ತು ಅಕಾಡೆಮಿಗಳ ಮೂಲಕ ಏಕರೂಪಿಯಾಗಿಯೇ ಅಧ್ಯಯನಗಳನ್ನು ಪ್ರಾರಂಭಿಸಲಾಗುತ್ತದೆ. ಇಂಥ ಅಧ್ಯಯನಗಳ ಆರಂಭದಲ್ಲಿ ಏಕ ಸಮುದಾಯದ ವ್ಯಕ್ತಿಗಳೇ ಇಂಥ ಅಧ್ಯಯನಗಳಲ್ಲಿ ತೊಡಗಿ ಕಲ್ಪಿತ ಬಾಷಿಕ/ನುಡಿ ರಚನೆ (ಸಾಹಿತ್ಯ)ಯನ್ನೇ ನಿಜವಾದ ಕನ್ನಡ ಐಡೆಂಟಿಯನ್ನಾಗಿ ಮಾಡಿದಲ್ಲದೆ, ಅದೇ ನಿಜವಾದ ಸಾಂಸ್ಕೃತಿಕ ಸಂಗತಿ ಎಂದೂ ಸಹ ಬಿಂಬಿಸಲಾಯಿತು. ಆದರೆ, ಇಂಥ ವಿಭಾಗೀಕರಣದಿಂದ ದೂರವೇ ಉಳಿದಿದ್ದ 'ಜಾನಪದ' ಎನ್ನುವ 'ಬಾಯ್‌ಕನ್ನಡ'ವನ್ನು ತಳಸಮುದಾಯಗಳ ದೈನಂದಿನ ಬದುಕಿನಿಂದ ಪ್ರತ್ಯೇಕಿಸಿ, ಮ್ಯೂಸಿಯಂ ಆಗಿಸಿದಾಗ, ಅದು ಸ್ಥಾಪಿತವಾದ 'ಭಾರತೀಯ ಕಾವ್ಯಮೀಮಾಂಸೆ'ಗೆ ನೀರು ಕುಡಿಸಲಾರಂಭಿಸಿದಾಗ, ಇದೇ ಬಾಯ್ಕನ್ನಡವನ್ನು 'ಸಂಸ್ಕೃತಿನಿಷ್ಠ' ಅಧ್ಯಯನವನ್ನಾಗಿಸಿದರು. ರಾಜಕೀಯ ಬದಲಾವಣೆಗಳಾಗಿ ದೇವರಾಜ ಅರಸು ಕರ್ನಾಟಕದಲ್ಲಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಅವಕಾಶವನ್ನು ಕಲ್ಪಿಸಿದಾಗ, ಮೊದಲನೇ ತಲೆಮಾರಿನವರಾಗಿ ಶಿಕ್ಷಣ ಕ್ಷೇತ್ರಕ್ಕೆ ಕಾಲಿಟ್ಟಾಗ, ಈ ಜಾನಪದವನ್ನೇ ವೈಭವೀಕರಿಸಿದಲ್ಲದೆ, ಅದನ್ನೇ ತಮ್ಮ ಸಾಂಸ್ಕೃತಿಕ ಪ್ರತಿಕೃತಿಯನ್ನಾಗಿ ಮಾಡಿಕೊಂಡದ್ದನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ. ಒಂದೆಡೆ ಇಂಥ ಪಲ್ಲಟಗಳು ಆಗುವಾಗ, ಮತ್ತೊಂದೆಡೆ, ತರಗತಿ ಎನ್ನುವ ಜಾಗವೂ ಸಹ ಬಹುರೂಪಿ ಹಿನ್ನೆಲೆಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಪ್ರವೇಶದಿಂದಾಗಿ ಸಮಸ್ಯಾತ್ಮಕವಾಗುತ್ತದೆ. ಇದನ್ನು ನಿಭಾಯಿಸಿಕೊಳ್ಳುವ ಸಲುವಾಗಿಯೇ ಏಕರೂಪಿ ವ್ಯಕ್ತಿ-ಸಮುದಾಯದ 'ಪಠ್ಯ'ವನ್ನು ಬದಲಾಯಿಸಬೇಕಾಗುತ್ತದೆ. ಮುಂದೆ ಇದನ್ನೇ 'ಸಾಂಸ್ಕೃತಿಕ ರಾಜಕಾರಣ'ವಾಗಿ ಮಾಡಿಕೊಂಡು 'ಬಂಡಾಯ-ಸಾಹಿತ್ಯ' ಕಹಳೆಯಾಗಿ, ತಳಸಮುದಾಯಗಳ ಅಸ್ತಿತ್ವವನ್ನು ಕನಿಷ್ಠ ಮಟ್ಟಿಗಾದರೂ ಗುರುತಿಸಿಕೊಳ್ಳಲು ಪ್ರಾರಂಭಿಸಿದ್ದು.



ಆದ್ದರಿಂದ, ಇಂದು ಸಂಸ್ಕೃತಿ ಎನ್ನುವ ಪರಿಕಲ್ಪಿತ ಸ್ಥಿತಿಯಿಂದ ಹೊರಬಂದು ಬದುಕಿನ ಕಲಾಚಾರ (ಸಂಸ್ಕೃತಿ ಪದಕ್ಕೆ ಕನ್ನಡ ಪದ)ವನ್ನು ಅಧ್ಯಯನಕ್ಕೆ ಒಳಪಡಿಸಿದರೆ ಅಲ್ಲಿರುವ 'ಜ್ಞಾನ-ಅಧಿಕಾರ ಸಂಬಂಧಗಳು' ಅನಾವರಣಗೊಳ್ಳುತ್ತವೆ. ಹೀಗೆ ಮುಂದುವರೆದರೆ, ಸಮುದಾಯಗಳ ದುಡಿಮೆ ಮತ್ತು ಆ ದುಡಿಮೆಯಿಂದ ನಿರೂಪಿಸಿಕೊಂಡಿರುವ ಬದುಕಿನ-ಕಲಾಚಾರವನ್ನು ಮರು ವ್ಯಾಖ್ಯಾನಿಸಿಕೊಂಡು, ಯಾವ ಯಾವ ಸಮುದಾಯಗಳು ತಮ್ಮ ದುಡಿಮೆಯನ್ನು ಕಳೆದುಕೊಂಡು, ಅಸ್ತಿತ್ವವನ್ನು ಉಳಿಸಿಕೊಳ್ಳಲಾಗದೆ ಒದ್ದಾಡುತ್ತಿರುತ್ತಿವೆಯೋ ಅಥವಾ ಅಂಚಿಗೆ ತಳ್ಳಲಾಗುತ್ತಿರುತ್ತಿವೆಯೋ ಅಂತೆಡೆ 'ಕಲಾಚಾರ' ಎನ್ನುವುದು ಐಶಾರಾಮಿ ನೆಲೆಯ ಕಲ್ಪಿತ ಸಂಸ್ಕೃತಿ ಸೋಂಬೇರಿತನದ್ದಾಗಿರುತ್ತದೆ. ಇದು ದುಡಿಮೆಯಿಂದ ಬೇರ್ಪಟ್ಟದ್ದರಿಂದ ಸಮುದಾಯಗಳಿಂದ ತಿರಸ್ಕಾರಕ್ಕೆ ಒಳಗಾಗುತ್ತದೆ. ಅಂದರೆ ಇದು ಭವಿಷ್ಯದ ನಿರೂಪಣೆಯಲ್ಲಿ ಪಾಲ್ಗೊಳ್ಳುವುದರಲ್ಲಿ ಸೋಲುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಅಂತೆಡೆ ಬದುಕಿನ ಕಲಾಚಾರ ಎನ್ನುವುದು ಎಲ್ಲಾ ಜೀವಸಂಕುಲವನ್ನು ಒಳಗೊಂಡಂತೆ ದುಡಿಮೆಯನ್ನು ಭವಿಷ್ಯದ ನೆಲೆಗಟ್ಟನ್ನಾಗಿ ಮಾಡಿಕೊಳ್ಳುತ್ತದೆ. ಇಂಥ ಕಲಾಚಾರದ ಅರಿಮೆಗಳನ್ನು ಅಥವಾ ಅರಿವುಗಳನ್ನು ಕಲ್ಚುರಲ್ ಸ್ಟಡೀಸ್ ವಿಸ್ತರಿಸುತ್ತಾ ಭಿನ್ನತೆಗಳನ್ನು ಮತ್ತು ಬಹುತ್ವದ ಬದುಕಿನ ಕ್ರಮಗಳನ್ನು ಪೋಷಿಸಬೇಕಾಗುತ್ತದೆ. ಆಗ ದುಡಿಮೆಯ ಘನತೆ ಎನ್ನುವುದು ಸಮುದಾಗಳ ಘನತೆಯಾಗುತ್ತದೆ. ಈ ಪ್ರಕ್ರಿಯೆಯಿಂದ ಹೊರತಾದುದು 'ಸಂಸ್ಕೃತಿ ಅಧ್ಯಯನ ಕಣ್ಕಟ್ಟೇ' ಹೊರತು ಬೇರೇನೂ ಅಲ್ಲ!

ಬುದ್ಧ ನಾಟಕದಲ್ಲಿ ದಲಿತ ಲೋಕ

♦ ಆದೆಪ್ಪ. ಕೆ. ಕರಿಬಸಪ್ಪ, ಹಂದಿಹಾಳ್

ಜಗತ್ತಿನಲ್ಲಿ ಯುದ್ಧವನ್ನು ತ್ಯಜಿಸಿ ಶಾಂತಿಯನ್ನು ಸಾರಿದ ಮಹಾಪುರುಷ ಗೌತಮಬುದ್ಧ. ಗೌತಮನು ಶುದ್ಧೋಧನ ಮತ್ತು ಮಹಾಮಾಯೆಯ ಮಗನಾಗಿ ನಾಗಕುಲದ ಸಾಖ್ಯವಂಶದಲ್ಲಿ ಜನಿಸಿದನು. ನಾಗಕುಲ ಎಂದರೆ ಭಾರತದ ಮೂಲನಿವಾಸಿ ಬುಡಕಟ್ಟು ಸಮುದಾಯವೇ ಆಗಿದೆ. ಇಂಥ ಮೂಲನಿವಾಸಿ ಬುಡಕಟ್ಟಿನಿಂದ ಬೆಳೆದು ಬಂದ ಗೌತಮನು ಬುದ್ಧನಾಗಿ ಭಾರತವನ್ನು ಆ ಮೂಲಕ ವಿಶ್ವವನ್ನು ಬೆಳಗಿದ್ದು ಬುದ್ಧಭಾರತದ ಬೆಳಕಿನ ಚರಿತ್ರೆಯೇ ಆಗಿದೆ. ಹೋರಾಟದ ಹಿನ್ನೆಲೆಯಿಂದ ಬಂದ ದಲಿತಪರ ಕಾಳಜಿಯುಳ್ಳ ಸಾಹಿತಿ ಸೋಸಲೆ ಗಂಗಾಧರವರು ಇದನ್ನು ಬರೆದಿದ್ದಾರೆ. ಪ್ರಸ್ತುತ ಇವರು ರಚಿಸಿರುವ 'ಬುದ್ಧ' ನಾಟಕದಲ್ಲಿ 27 ದೃಶ್ಯಗಳಿದ್ದು ಅದರಲ್ಲಿ ಬುದ್ಧನ ಜನನ, ಶಿಕ್ಷಣ, ರಾಜ್ಯಗೃಹವನ್ನು ತ್ಯಜಿಸಿದ್ದು, ಜ್ಞಾನಮಾರ್ಗದ ಹಾದಿಯು ಹುಡುಕಾಟದ ಮೂಲಕ ಎಲ್ಲರಲ್ಲೂ ಜ್ಞಾನವನ್ನು, ಅಂತಃಕರಣವನ್ನು ಮೂಡಿಸುತ್ತಾ ಬದುಕನ್ನು ಮೌಲ್ಯಯುತವಾಗಿ ಸಾಗಿಸುವ ಮಾರ್ಗೋಪಾಯಗಳನ್ನು ಹುಡುಕಾಡಿದ್ದು, ಬೋಧಿಸಿದ್ದು, ಬದುಕಿದ್ದು ಮುಂತಾದವುಗಳು ಈ ನಾಟಕದಲ್ಲಿ ಚಿತ್ರಿಸಲಾಗಿದೆ. ಬುದ್ಧನು ರಾಜ್ಯದಿಂದ ಬಹಿಷ್ಕೃತಗೊಂಡು, ಅಲೆದಾಡಿ ಜ್ಞಾನೋದಯವಾದ ನಂತರ ಅಪ್ಪಾಜಿ, ಕೊಂಡಣ, ವಪ್ಪ, ವಜ್ಜಿ, ಮಹಾನಾಮ ಎಂಬ ಐದು ಜನರಿಗೆ ಜ್ಞಾನವನ್ನು ಬೋಧಿಸಿ ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು. ಬುದ್ದನ ತನ್ನ ಬೋಧನೆಯ ಮೂಲಕ ಜನಸಾಮಾನ್ಯರಿಂದ ಹಿಡಿದು ರಾಜಮಹಾರಾಜರಿಗೂ ಹತ್ತಿರವಾದರು. ಆತನ ಧರ್ಮವು, ಜನಮನಕ್ಕೆ ಆಪ್ತವಾಗುತ್ತಲೇ ಬಂತು. ಹಾಗೆಯೇ ಬುದ್ಧನು ಕಪಿಲ ಮಹಾರ್ಷಿಗೆ ದೇವರು, ಆತ್ಮ, ಬ್ರಹ್ಮ ಎಂಬುದರ ಬಗ್ಗೆ ಸತ್ಯ-ಸುಳ್ಳುಗಳ ತಾಳೆಯ ಮಾಡುತ್ತಾ ಸತ್ಯವನ್ನು ನಿರಂತರ ಶೋಧದಿಂದ, ಅನುಭವದಿಂದ ಕಾಣಬೇಕು ಎಂಬುದನ್ನು ಕಪಿಲ ಮಹಾರ್ಷಿಗೆ ತಿಳಿಸಿದ್ದನು. ಮಹಾಕ್ರೂರಿಯಾಗಿದ್ದ ಅಂಗುಲಿ ಮಾಲನನ್ನು ಬುದ್ಧನು ಅರಿವನ್ನು ಮೂಡಿಸಿ ಬೌದ್ಧಬಿಕ್ಕುವನ್ನಾಗಿ ಮಾಡಿದನು. ಜಯಾದಿತ್ಯನಿಗೆ ಜ್ಞಾನದ ಜ್ಯೋತಿಯನ್ನು ಹಚ್ಚಿಸಿದನು. ಕೆಲವು ಬ್ರಾಹ್ಮಣರ ಕಣ್ಣನ್ನು ತೆರೆಸಿದ್ದನು. ಕಿಸಾಗೌತಮಿ ದುಃಖದ ಮಡುವಲ್ಲಿ ಮುಳುಗಿದಾಗ ಅವಳಿಗೆ ಬುದ್ಧನು ಸಾವು, ನೋವು, ದುಃಖಗಳ ಬಗ್ಗೆ ಅರಿವವನ್ನು ಮೂಡಿಸುತ್ತಾನೆ. ಆಮ್ರಪಾಲಿಗೆ ಮೋಹಸೌಂದರ್ಯದ ಬಗ್ಗೆ ತಿಳಿಸುತ್ತಾನೆ. ಇದರಲ್ಲಿ ಮೋಹ ಮತ್ತು ಮೌನ ಸೌಂದರ್ಯ ತಾತ್ಕಾಲಿಕವಾದದ್ದು ಜ್ಞಾನ ಸೌಂದರ್ಯ ಶಾಶ್ವತವಾದುದ್ದು ಅದಕ್ಕೆ ಎಂದೂ ಸಾವಿಲ್ಲ. ಅದನ್ನು ಪಡೆದರೆ ನೀನು ಸತ್ತರೂ ಬದುಕಿರುತ್ತೀಯಾ! ಇದನ್ನೆ ಬುದ್ಧನು ಅಧರ್ಮ, ಧರ್ಮ,



ಸಧರ್ಮವೆಂದು ಹೇಳುತ್ತಾನೆ. ಇಲ್ಲಿ ಅಧರ್ಮ ಕ್ಷಣಿಕವಾದದ್ದು, ಧರ್ಮ ದೀರ್ಘವಾದದ್ದು, ಸಧರ್ಮ ಶಾಶ್ವತವಾದದ್ದು. ಎಂಬ ಪರಿಕಲ್ಪನೆಯನ್ನು ತಿಳಿದ ಆಮ್ರಪಾಲಿಯು ಬೌದ್ಧ ಬಿಕ್ಷುಣಿಯಾಗಲು ನಿರ್ಧರಿಸುತ್ತಾಳೆ. ಹೀಗೆ ಬುದ್ಧನ ಬೋಧನೆಯಿಂದ ಬದುಕುಗಳಲ್ಲಿ ಬೆಳಕು ಕಂಡ ಚರಿತ್ರೆಯೇ ಬುದ್ಧನ ಜೀವನ ಚರಿತ್ರೆ.

ಪ್ರಸ್ತುತ ನಾಟಕದಲ್ಲಿ ಬುದ್ಧಭಾರತದ ಬೆಳಕಿನ ಚರಿತ್ರೆಯನ್ನು ಹೇಳುತ್ತಲೇ ಬ್ರಾಹ್ಮಣರ ಕೊಳಕು ಚರಿತ್ರೆಗಳನ್ನು ಸೋಸಲೆ ಗಂಗಾಧರರು ಬಿಚ್ಚಿಟ್ಟಿದ್ದಾರೆ. ನಾಟಕದಲ್ಲಿ ಒಂದು ಕಡೆ ಬುದ್ಧ ಹೇಳುವಂತೆ... "ಹಾರುವವರು ಹಸಿವಿನ ದಾಹವನ್ನು ನೀಗಿಸಿಕೊಳ್ಳಲು ಯಜ್ಞ-ಯಾಗ, ಹೋಮ-ಹವನಗಳು, ಮಂತ್ರ-ಶಾಪ, ಅರ್ಥವಿರದ ಆಚರಣೆಗಳು, ಅನಗತ್ಯ ಪ್ರಾಣಿಬಲಿಗಳು, ದೇವರ ಧರ್ಮದ ಹೆಸರಿನಲ್ಲಿ ನಡೆಯುತ್ತಿವೆ. ಈ ವೈದಿಕರು ಮಾಡುವ ಯಾವ ಆಚರಣೆಯಲ್ಲೂ ವೈಚಾರಿಕತೆಯೇ ಇಲ್ಲ. ಧರ್ಮದ ಹೆಸರಿನಲ್ಲಿ ವ್ಯಭಿಚಾರ, ಜೂಜು, ಸುರಾಪಾನ, ಕಪಟ, ಇವೆಲ್ಲ ನಿತ್ಯವೂ ನಿರಾತಂಕವಾಗಿ ನಡೆಯುತ್ತಲೇ ಬಂದಿವೆ. ಆಧ್ಯಾತ್ಮದ ಯಾವ ಲಕ್ಷಣಗಳೂ ಇಲ್ಲದ ಇಂಥ ಸಂಸ್ಕೃತಿ ಆಚರಣೆಯು ಯಾವ ದೃಷ್ಟಿಕೋನದಲ್ಲೂ ನಾಡಿಗಾಗಲಿ, ನಾಡಿನ ಜನತೆಗಾಗಲಿ ಶ್ರೇಯಸ್ಸನ್ನು ತರಲಾರದು. ಆರ್ಯ ಸಂಸ್ಕೃತಿಯು ನೆಲ ಉಳುವುದಿಲ್ಲ, ಜನಬೆರೆಯುವುದಿಲ್ಲ. ಸಮಸಮಾನತೆಯನ್ನು ಬೋಧಿಸುವುದಿಲ್ಲ" "ಹಾರುವವರ ಯಜ್ಞ" ಪ್ರಸಾಂಗದಲ್ಲಿ ಗೋಮಾಂಸದ ವಿಷಯ ಕುರಿತು ಗಹನವಾದ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಅಲ್ಲಿ ಬ್ರಾಹ್ಮಣರ ಮುಖ್ಯ ಆಹಾರ ದನದ ಮಾಂಸವಾಗಿದ್ದ ಪೂರ್ವದ ವಿಚಾರ ನಿರೂಪಿಸಲಾಗಿದೆ. ಬ್ರಾಹ್ಮಣರು ಮೊದಲು ಗೋಮಾಂಸ ಭಕ್ಷಕರಾಗಿದ್ದರು. ಯಜ್ಞಗಳೆಂದರೆ ಏನು? ಗೋಮಾಂಸದ ಆಸೆಯಿಂದ ಧರ್ಮದ ಹೆಸರಿನಲ್ಲಿ ಮುಗ್ಧ ಪ್ರಾಣಿಗಳನ್ನು ಕೊಲ್ಲುವುದೇ ಆಗಿತ್ತು. ಎನ್ನಲಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರರು ಹೇಳುವಂತೆ, "ಯಜ್ಞ ಮತ್ತು ಪಶುಬಲಿ ಮುಖ್ಯವಾಗಿ ಗೋವಿನ ಬಲಿಯನ್ನು ಹೊಂದಿದ್ದ ಬ್ರಾಹ್ಮಣ ಮತವನ್ನು ಬೌದ್ಧರು ತಿರಸ್ಕರಿಸಿದರು. ಗೋವಿನ ಬಲಿಗೆ ಬೌದ್ಧರು ಎತ್ತಿದ ಆಕ್ಷೇಪಣೆ, ವ್ಯವಸಾಯವನ್ನೇ ಅವಲಂಬಿಸಿದ್ದ ಹೆಚ್ಚಿನ ಜನಸಮುದಾಯದ ಮನಸ್ಸಿಗೆ ಆಳವಾಗಿ ನಾಟಿತು. ಯಾಕೆಂದರೆ ಹಸು ಅವರಿಗೆ ಬಹಳ ಉಪಯೋಗಕರವಾಗಿತ್ತು. ಬಹುಶಃ ಬ್ರಾಹ್ಮಣನನ್ನು ಗೋಹಂತಕರೆಂದು ದ್ವೇಷಿಸುವುದಕ್ಕೆ ಪ್ರಾರಂಭವಾಯಿತು. ಹೇಗೆಂದರೆ ಗೃಹಸ್ಥನೊಬ್ಬ ಅತಿಥಿಯನ್ನು ಗೋಘ್ನ, ಗೋಹಂತಕ ಎಂದು ದ್ವೇಷಿಸುತ್ತಿದ್ದ ಹಾಗೆ ಯಾಕೆಂದರೆ ಅತಿಥಿಗಳು ಬಂದಾಗಲೆಲ್ಲ ಅವರ ಗೌರವಾರ್ಥ ಗೋವನ್ನು ಕೊಲ್ಲಲೇಬೇಕಾಗಿತ್ತು. ಆದರಿಂದ ಯಜ್ಞವನ್ನು ಒಂದು ಪೂಜಾ ವಿಧಾನವೆಂದು ಮತ್ತು ಗೋಹತ್ಯೆಯನ್ನು ಕೈಬಿಡದೆ ಬ್ರಾಹ್ಮಣರಿಗೆ ಬೌದ್ಧರ ಎದುರು ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವ ಬೇರೆ ಅವಕಾಶವೇ ಇರಲಿಲ್ಲ ಬ್ರಾಹ್ಮಣರು ಗೋಪೂಜೆ ಮಾಡಲು ಪ್ರಾರಂಭಿಸಿ ಸಸ್ಯಹಾರಿಗಳಾಗಿ, ಗೋಮಾಂಸ ತ್ಯಜಿಸಿದ್ದು ಬೌದ್ಧರನ್ನು ಸೋಲಿಸಲಿಕ್ಕೆ ತಾವು ಕಳೆದುಕೊಂಡ ಸ್ಥಾನವನ್ನು ಮರಳಿ ಪಡೆಯಲು ಒಂದು ಸಾಧನವಾಗಿತ್ತು". (ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು. ಸಂಪುಟ-7 ಪುಟ 347) ಹೀಗೆ ಮೂಲತಃ ಗೋಮಾಂಸವನ್ನು ಅನಾವಶ್ಯಕವಾಗಿ, ಅಧಿಕಾರಕ್ಕಾಗಿ, ಬ್ರಾಹ್ಮಣರು ಉಪಯೋಗಿಸುವುದು ಜೊತೆಗೆ ತಿನ್ನುತಿದ್ದು, ತದನಂತರ ಅಧಿಕಾರಕ್ಕಾಗಿ ತ್ಯಜಿಸಿದ್ದು ಕುಹಕ ಸಂಗತಿ. ಆದರೆ ಹಸುವಿಗಾಗಿ ಗೋಮಾಂಸವನ್ನು ತಿನ್ನುತ್ತಿದ್ದ ದಲಿತ ಜನರನ್ನು ಅಸ್ಪೃಶ್ಯರೆಂದು ಬಗೆದು, ಅಧಿಕಾರಕ್ಕಾಗಿ ಗೋಮಾಂಸವನ್ನು ಬಿಟ್ಟು, ಗೋಮಾಂಸ ನಿಷೇಧದ ಅಘೋಷಿತ ಕಾನೂನು ಮಾಡಿದವರು ಕುಹಕ ಬ್ರಾಹ್ಮಣರು ಬ್ರಾಹ್ಮಣರಿಗೆ ಬಹುಜನರ ಹಸಿವಿಗಿಂತ ತನ್ನ ಅಧಿಕಾರ ದಾಹವೇ ಮೇಲಾಯಿತು. ಹೀಗಾಗಿ ಗೋಮಾಂಸದ ಕುರಿತು ಅಪಮೌಲ್ಯಕರಣದ ಚರಿತ್ರೆ ಆರಂಭವಾಯಿತು. ಅದು ಇಂದಿಗೂ ಸಹ ಮುಂದುವರೆಯುತ್ತಿರುವುದು ಅಮಾನವೀಯವಾದದ್ದು.

ಬುದ್ಧನು ಮಾಂಸಾಹಾರದ ಬಗ್ಗೆ ಹೇಳುವ ಮಾತುಗಳು ತುಂಬಾ ಅರ್ಥ ಪೂರ್ಣವಾಗಿದೆ. ಬೌದ್ಧ ಬಿಕ್ಕುಗಳು ಮಾಂಸಾಹಾರವನ್ನು ಸೇವಿಸುವುದು ಅಪರಾಧವೇ? ಎಂದು ತಮ್ಮ ಐದು ಜನ ಶಿಷ್ಯರು ಪ್ರಶ್ನೆ ಕೇಳಿದಾಗ, ಬುದ್ಧನು ಅಪರಾಧವೇನೂ ಇಲ್ಲ ಸೋದರರೇ ಆದರೆ ನೀವು ಮೂರು ಬಗೆಯ ಮಾಂಸಾಹಾರವನ್ನು ತಿನ್ನಕೂಡದು ಎಂದು ಹೇಳುತ್ತಾನೆ. ಒಂದು ಮನೆಗೆ ಊಟಕ್ಕೆ ಹೋದಾಗ ನನಗೆ ಮಾಂಸಾಹಾರ ಮಾಡಿ ಬಡಿಸಬೇಕೆಂದು ಕೇಳಬಾರದು. ಎರಡನೆಯದು ಸಾಕು ಪ್ರಾಣಿಗಳನ್ನು, ಬೇರೊಂದು ಪ್ರಾಣಿಯನ್ನು ಕೊಲ್ಲುವುದನ್ನು ನೀವು ನೋಡಿಯೂ ಆ ಮಾಂಸವನ್ನು ತಿನ್ನಬಾರದು. ನೀವು ಎಲ್ಲೂ ಕೇಳಿಸಿಕೊಂಡಿರಬಾರದು, ಗೊತ್ತಿದ್ದು ಆ ಊಟವನ್ನು ಸೇವಿಸಬಾರದು. ಎರಡು ಬಗೆಯ ಮಾಂಸಾಹಾರವನ್ನು ಬೌದ್ಧ ಬಿಕ್ಕುಗಳು ಸೇವಿಸಬಹುದು. ಎರಡು ಬಗೆಯ ಮಾಂಸಾಹರವನ್ನು ಬೌದ್ಧ ಬಿಕ್ಕುಗಳು ಸೇವಿಸಬಹುದು. ಸಾಕು ಪ್ರಾಣಿಗಳನ್ನು ಬೇರೊಂದು ಪ್ರಾಣಿಯು ಕೊಂದು ಅದನ್ನು ಬಿಟ್ಟು ಹೋಗಿದ್ದರೆ ಅದು ಸೇವನೆಗೆ ಯೋಗ್ಯವಿದ್ದರೆ ಸೇವಿಸಬಹುದು. ಅಲ್ಲದೇ ಪ್ರಕೃತಿ ದತ್ತವಾಗಿ ಮಾನವರು ತಿನ್ನುವ ಪ್ರಾಣಿಯು ಸತ್ತು ಹೋಗಿದ್ದರೆ ಅದು ಸೇವನೆಗೆ ಯೋಗ್ಯವಿದ್ದರೆ ಮಾತ್ರ ಅದನ್ನು ಸೇವಿಸಬೇಕು. ಅದು ದುರಾಸೆಯಾಗಬಾರದು ಎಂದು ಹೇಳುತ್ತಾನೆ. ಇದು ಮಾಂಸಾಹಾರವನ್ನು ಕುರಿತ ನಿಷೇಧ ಹೇರಿಕೆಯಲ್ಲದ ಬುದ್ಧನ ವಿವೇಕಪೂರ್ಣ ಮಾಧ್ಯಮಮಾರ್ಗವಾಗಿದೆ.

ಅಂಗುಲಿಮಾಲನು ದುಷ್ಟನೆಂದು ಗಿಳಿಪಾಠ ಹೇಳಿಕೊಂಡಿದ್ದ ಚರಿತ್ರೆಯ ವಿಕೃತಿಯನ್ನು ಹೊಡೆದು ತಳಸಮುದಾಯದ ಅಂಗುಲಿ ಮಾಲನು ತನ್ನವರಿಗಾದ ನೋವಿನ ವಿರುದ್ಧ ಹೋರಾಟ ನಡೆಸುವುದನ್ನು ನಾಟಕದಲ್ಲಿ ಚಿತ್ರಿಸಲಾಗಿದೆ. ಹೊಸ ಸಂಶೋಧನೆಗಳಿಂದ ತಿಳಿದು ಬಂದಿರುವಂತೆ ಅಂಗುಲಿಮಾಲನ ಮೊದಲ ಹೆಸರು ಪ್ರಾಪ್ತ. ಇವರ ತಂದೆ ಗಾರ್ಗ್ಯ, ಜಮೀನದ್ದಾರರ ಹೊಲದಲ್ಲಿ ಜೀತದಾಳಾಗಿ ದುಡಿಯುತ್ತಿದ್ದರು. ತಾಯಿ ಇಂದ್ರಾಣಿ, ತಂಗಿ ಸುನೀಲಾ ಊರಾಚೆ ಮನೆ ಮಾಡಿಕೊಂಡು ಜೀವಿಸುತ್ತಿದ್ದರು. ತಂಗಿ ಮೈನೆರೆದಾಗ ಮಾಡುವ ಶಾಸ್ತ್ರದ ಸಂದರ್ಭವನ್ನು ನೋಡಿ ಅಲ್ಲಿಗೆ ಬಂದಾ ಧನಿಕರು ಉಡುಗೊರೆ ಕೊಡುವ ನೆಪದಲ್ಲಿ ತಂದೆ-ತಾಯಿಯನ್ನು ಕಟ್ಟಿಹಾಕಿ ಆ ಎಳೆಯ ಹುಡುಗಿಯ ಮೇಲೆ ಅತ್ಯಾಚಾರ ಮಾಡುವರು ಹಾಗೂ ಗೋಳಾಡುವ ತಂದೆ-ತಾಯಿಯನ್ನು ಕೊಲ್ಲುವರು. ಮನೆಗೆ ಬಂದ ಪ್ರಾಪ್ತ ಈ ಘೋರ ದೃಶ್ಯವನ್ನು ನೋಡಿ ಹತ್ಯೆಗೈದವರನ್ನು ಅಲ್ಲೇ ಕೊಲ್ಲುತ್ತಾನೆ. ತನ್ನ ತಂಗಿಯನ್ನು ಹಾಳು ಮಾಡಿದವರ, ತನ್ನ ಮನೆಯನ್ನು ಸುಟ್ಟು ಭಸ್ಮ ಮಾಡಿದವರ, ತನ್ನ ಬದುಕನ್ನೇ ಹಾಳು ಮಾಡಿದವರ ಕೈ ಬೆರಳುಗಳನ್ನು ಕತ್ತರಿಸಿ ಕೊರಳಿಗೆ ಮಾಲೆಯನ್ನಾಗಿ ಮಾಡಿಕೊಳ್ಳುತ್ತಾನೆ. ಅಂದಿನಿಂದ ಆತನಿಗೆ ಅಂಗುಲಿ ಮಾಲನೆಂದೇ ಹೆಸರು ಬಂದಿತು. ಚಾರಿತ್ರಿಕವಾಗಿ ತಿಳಿದು ಬರುವಂತೆ ಮೇಲು ಜಾತಿಯವರು ತಳಸಮುದಾಯದವರ ಹೆಣ್ಣು ಮಕ್ಕಳನ್ನು ಕಂಡರೆ ಭೋಗದ ವಸ್ತುವನ್ನಾಗಿ ಮಾಡಿಕೊಂಡು ತಮ್ಮ ಸುಖಕ್ಕೆ ಬಳಸಿಕೊಳ್ಳುತ್ತಿದ್ದರು. ಇಂತಹ ಕ್ರಿಶ ಪೂರ್ವದ ದೌರ್ಜನ್ಯದ ವಿರುದ್ಧ ಅಂಗುಲಿಮಾಲನು ಹೋರಾಟ ಮಾಡಿರುವುದನ್ನು ನಾಟಕದಲ್ಲಿ

.....17

ಕಣ್ಮರೆಯಾದ ಮಾನವೀಯ ಒಳನೋಟಗಳು ಮತ್ತು ಸಹಜ ಸೆಕ್ಯುಲರ್‌ತನ

• ಬಿ.ಶ್ರೀಪಾದ ಬಟ್

ಇಂದು ನಾನು ನನ್ನ ಮನೆ ನಂಬರನ್ನು ಒರೆಸಿದೆ
ನನ್ನ ಓಣಿಯ ಹಣೆಯ ಮೇಲಿರುವ ಐಡೆಂಟಿಟಿಯನ್ನು
ತೆಗೆದು ಹಾಕಿದೆ
ಪ್ರತಿಯೊಂದು ರಸ್ತೆಯಲ್ಲಿರುವ ನಾಮ ನಿರ್ದೇಶನಗಳನ್ನು
ಅಳಿಸಿ ಹಾಕಿದೆ
ಆದರೆ ನೀನು ನಿಜವಾಗಲೂ ನನ್ನನ್ನು ಭೇಟಿಯಾಗಬೇಕೆಂದರೆ
ಪ್ರತಿಯೊಂದು ದೇಶದ ಮನೆಬಾಗಿಲುಗಳನ್ನು ತಟ್ಟು
ಪ್ರತಿಯೊಂದು ನಗರ,ಪ್ರತಿಯೊಂದು ಓಣಿಗಳನ್ನು ಸಹ
ಎಲ್ಲೆಲ್ಲಿ ಮುಕ್ತವಾದ ಚೈತನ್ಯ ಬದುಕಿರುತ್ತದೆಯೋ
ಅದೇ ನನ್ನ ಮನೆ

– ಲೇಖಕಿ,ಕವಿಯಿತ್ರಿ ಅಮೃತಾ ಪ್ರೀತಂರ ಕವನ

ಭಯೋತ್ಪಾದನೆ, ಕೋಮುವಾದ ಇಂದಿಗೂ ನಿರಂತರವಾಗಿ ಚಾಲ್ತಿಯಲ್ಲಿರುವುದನ್ನು ಅನುಭವಿಸುತ್ತಿರುವ ನಮಗೆಲ್ಲ ಇದೆಲ್ಲಾ ವಾಸ್ತವಕ್ಕೆ ಅದೇನಾ ? ಎಂದು ಅನುಮಾನ ಹುಟ್ಟುವಷ್ಟರ ಮಟ್ಟಿಗೆ ಇವೆಲ್ಲ ಸಹಜ ಘಟನೆಗಳಾಗಿ ಹೋಗಿವೆ. ಕನಿಷ್ಟ ಮಟ್ಟದಲ್ಲಾದರೂ ಜೊತೆಗಾರರಾಗಿ ಬದುಕವಂತಹ ಜನ ಸಮೂಹವನ್ನು,ನಾಗರಿಕ ಸಮಾಜವನ್ನು ಕಟ್ಟಬೇಕಾದಂತಹ ರಾಜಕೀಯ ಪ್ರಜ್ಞೆ ಮತ್ತು ಮಾನವೀಯ,ಜನಪರ ರಾಜಕೀಯ ಸಿದ್ಧಾಂತಗಳು ಸತ್ತು ಹೋಗಿರುವುದೇ ಈ ಅರಾಜಕತೆಗೆ ಮೂಲಭೂತ ಕಾರಣವೆನ್ನುವ ತರ್ಕಗಳೂ ಇಂದು ಬೆಲೆ ಕಳೆದುಕೊಂಡಿದೆ. ಏಕೆಂದರೆ ರಾಜಕೀಯದ ಹೊರತಾಗಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ,ಆರ್ಥಿಕವಾಗಿ ನಾವೆಲ್ಲ ನಮ್ಮ ಹೊಣೆಗಾರಿಕೆಯನ್ನು ನಿಭಾಯಿಸಿದ್ದೇವೆಯೇ ? ಇಲ್ಲ. ಒಂದು ವೇಳೆ ನಿಭಾಯಿಸಿದ್ದರೆ ಇವೆಲ್ಲ ಅವೇನಾ ಎನ್ನುವ ದುಸ್ಥಿತಿಗೆ ಬಂದು ತಲುಪುತ್ತಿರಲಿಲ್ಲ. ಸ್ವಾತಂತ್ರ್ಯ ನಂತರದ ಕಳೆದ 64 ವರ್ಷಗಳಲ್ಲಿ ಎಲ್ಲಾ ಧರ್ಮದ ಮೂಲಭೂತವಾದಿಗಳ ಕ್ರೌರ್ಯವನ್ನು,ಹಿಂಸೆಯನ್ನು ಸಶಕ್ತವಾಗಿ ಎದುರಿಸುವಂತಹ ವ್ಯವಸ್ಥೆಯನ್ನು ನಿರ್ಮಿಸಲು ನಾವೆಲ್ಲ ದಯನೀಯವಾಗಿ ಸೋತಿದ್ದೇವೆ. ವೈಯುಕ್ತಿಕ ನಂಬಿಕೆಗಳು ದ್ವೇಷವಾಗಿ



ಪರಿವರ್ತನೆಗೊಂಡು ತದನಂತರ ಅದು ಹಿಂಸೆಯ ರೂಪ ತಾಳಿ ಸಮಾಜದ ಮೇಲೆ ಆಕ್ರಮಣ ನಡೆಸಿದಾಗ, ಈ ಹಿಂಸೆಗೆ ಮುಖಾಮುಖಿಯಾಗದೆ ನಾವೆಲ್ಲ ಮೂಕಪ್ರೇಕ್ಷಕರಾಗಬೇಕಾಗಿ ಬಂದದ್ದು ನಮ್ಮೆಲ್ಲರ ಸ್ವಯಂಕೃತ ಅಪರಾಧವಷ್ಟೇ. ಇಲ್ಲದಿದ್ದರೆ ಪತ್ರಕರ್ತ ಸಿದ್ದಿಕಿಯನ್ನು ಭಯೋತ್ಪಾದನೆಯ ಆಪಾದನೆಯ ಮೇಲೆ ಬಂಧಿಸಿ ತಿಂಗಳುಗಳ ಕಾಲ ಜೈಲಿನಲ್ಲಿರಿಸಿದಾಗ ಇರಬಹುದೇನೋ,ಯಾವ ಹುತ್ತದಲ್ಲಿ ಯಾವ ಹಾವು ಯಾರಿಗೆ ಗೊತ್ತು ಎಂದು ಮುಗುಮ್ಮಾಗಿದ್ದ ನಾವು ಇದೇ ಸಿದ್ದಿಕಿಯನ್ನು ಇತ್ತೀಚೆಗೆ ಅಪರಾಧಿಯಲ್ಲ,ಆತನ ಮೇಲೆ ಸುಳ್ಳು ಕೇಸುಗಳನ್ನು ಸೃಷ್ಟಿಸಲಾಗಿದೆ,ಆತನ ಮೇಲಿನ ಆರೋಪಗಳನ್ನು ಹಿಂದಕ್ಕೆ ಪಡೆದಿದ್ದೇವೆ ಎಂದು ತನಿಖಾ ತಂಡ ಕೋರ್ಟಿಗೆ ತಪ್ಪೊಪ್ಪಿಕೆಯ ಮನವಿ ಸಲ್ಲಿಸಿದಾಗ ಎಂತಹ ಅನಾಹುತವಾಗಿ ಹೋಯಿತೆಂದು ನಾವ್ಯಾರೂ ಮರುಗಲಿಲ್ಲ,ತರುಣ ಪತ್ರಕರ್ತನೊಬ್ಬನ ಭವಿಷ್ಯವೇನು ಎಂದು ಚಿಂತಿಸಲಿಲ್ಲ, ಕನಿಷ್ಟ ಸಾರ್ವಜನಿಕವಾಗಿ ಈ ಫ್ಯಾಸಿಸ್ಟ್ ಶಕ್ತಿಗಳನ್ನು ಖಂಡಿಸಬೇಕಿತ್ತು!! ಕೆಲವು ಹಿಂದೂ ಸಂಘಟನೆಗಳಿಗೆ ಸೇರಿದ ವ್ಯಕ್ತಿಗಳನ್ನು ಭಯೋತ್ಪಾದನೆಯ ಆರೋಪದ ಮೇಲೆ ಬಂಧಿಸಿದಾಗ ಇದು ಹೇಗೆ ಸಾಧ್ಯವೆಂದು ಅಚ್ಚರಿ ಪಡುವ ಮನಸ್ಥಿತಿಯಿಂದ, ಮುಸ್ಲಿಂ ಸಂಘಟನೆಗಳಿಗೆ ಸೇರಿದ ವ್ಯಕ್ತಿಗಳು ಭಯೋತ್ಪಾದನೆಯ ಆರೋಪದಲ್ಲಿ ಬಂಧಿಸಲ್ಪಟ್ಟಾಗ ನಾನು ಹೇಳಲಿಲ್ಲವೇ ಎನ್ನುವ ಪೂರ್ವಗ್ರಹ ಪೀಡಿತ,ಕೊಳಕು,ಹಳಸಿದ ಮನಸ್ಥಿತಿಯಿಂದ ಹೊರಬರದ ಹೊರತು ವ್ಯವಸ್ಥೆಯಲ್ಲಿನ ಕ್ರೌರ್ಯಕ್ಕೆ ಪರ್ಯಾಯವಾದ ನೆಲೆಗಳು ಹುಟ್ಟಲಾರವು.ಗಾಂಧೀಜಿ ಹತ್ಯೆಯೇ ಇಂಡಿಯಾ ದೇಶದ ಮೊಟ್ಟಮೊದಲ ಭಯೋತ್ಪಾದನೆಯ ಕೃತ್ಯ ಎಂದು ಹಿರಿಯ ಪತ್ರಕರ್ತ ಮಿತ್ರರು ಹೇಳುತ್ತಿದ್ದುದು ಅಕ್ಷರಶಃ ಸತ್ಯ. ಈ ಮೊಟ್ಟ ಮೊದಲ ಭಯೋತ್ಪಾದನೆಯನ್ನು ನಡೆಸಿದ ಸಂಘಟನೆ ಹಿಂದೂ ಮಹಾ ಸಭಾ ಮತ್ತು ಭಾರತದ ಮೊಟ್ಟ ಮೊದಲ ಭಯೋತ್ಪಾದಕ ನಾಥುರಾಮ್ ಘೋಡ್ಸೆ ತಮ್ಮ ಸಹವರ್ತಿಗಳಾಗಿದ್ದನ್ನು ಇಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಲು ಸಾಧ್ಯವಾಗದಷ್ಟು ಸಂಘ ಪರಿವಾಕ್ಕೆ ಅಮ್ನೇಷಿಯಾ ತಗಲಿದೆ!! ಮಾಲೇಗಾವ್ ಸ್ಪೋಟ,ಹೈದರಾಬಾದನ ಜಾಮಾ ಮಸಿದಿಯ ಸ್ಪೋಟ,ಸಂಜೋತಾ ಎಕ್ಸಪ್ರೆಸ್‌ನ ಸ್ಪೋಟಗಳು ಮತ್ತು ಅಮಾಯಕರ ಸಾವುಗಳ ಕುರಿತಾಗಿ ಈಗ ಸಂಘ ಪರಿವಾರ ಕ್ವಚಿತ್ತೂ ಮಾತನಾಡುತ್ತಿಲ್ಲ. ತಮ್ಮ ಸಹವರ್ತಿಗಳೇ ಈ ಭಯೋತ್ಪಾದನೆಯ ಆರೋಪಗಳ ಮೇಲೆ ಜೈಲಿನಲ್ಲಿರುವುದು ಸಂಘಪರಿವಾರಕ್ಕೆ ನೆನಪಿಸಿಕೊಟ್ಟಷ್ಟೂ ಅದಕ್ಕೆ ಅಮ್ನೇಷಿಯಾ ಮರುಕಳಿಸುತ್ತದೆ!! 2002ರಲ್ಲಿ ಗುಜರಾತ್‌ನಲ್ಲಿ ನಡೆದ ಹತ್ಯಾಕಾಂಡದಲ್ಲಿ ವಿನಾಕಾರಣ ಸಾವಿರಾರು ಮುಸ್ಲಿಮರನ್ನು ನಿರಾಳವಾಗಿ ಹತ್ಯೆ ಮಾಡಿದ್ದನ್ನು, ಆ ಕ್ರೌರ್ಯದ ಮನೋಸ್ಥಿತಿಯನ್ನು,ಈ

ಹಿಂಸಾಚಾರದ ರೂವಾರಿಯೆಂದು ಆರೋಪಿತವಾಗಿರುವ ಫ್ಯಾಸಿಸ್ಟ್ ಮುಖ್ಯಮಂತ್ರಿ ನರೇಂದ್ರ ಮೋದಿ ಇವರನ್ನೆಲ್ಲ ಭಾರತದ ಮಧ್ಯಮ ವರ್ಗ ಇನ್ನಾದರೂ ಬಹಿರಂಗವಾಗಿ ಖಂಡಿಸಲಾರರೇಕೆ? ತನ್ನ ಕೈಗೆ ಅಂಟಿಕೊಂಡಿರುವ ಆ ರಕ್ತದ ಕಲೆ ಮತ್ತು ತನಗಂಟಿದ ಕಳಂಕ ಸಾಬೀತಾದರೆ ಮೋದಿ ಶಿಕ್ಷೆಗೆ ಒಳಗಾಗಲೇ ಬೇಕೆಂದು ಮಧ್ಯಮ ವರ್ಗ ಆಗ್ರಹಿಸಿ ಸರದಿ ಉಪವಾಸಕ್ಕೆ ತೊಡಗಲಾರರೇಕೆ? ಮುಸ್ಲಿಂ ಮೌಲ್ವಿಗಳನ್ನು,ಜಮಾತೆಗಳನ್ನು ಶಿಲಾಯುಗದವರೆಂದು ಖಂಡಿಸುವ ನಮ್ಮ ಮಧ್ಯಮವರ್ಗ ಅಷ್ಟೇ ನೈತಿಕತೆಯಿಂದ, ಮುಕ್ತ ಮನಸ್ಸಿನಿಂದ ಸಂಘ ಪರಿವಾರದ ಹಿಂದೂ ಫೆನಟಿಸಂ ಮತ್ತು ಫ್ಯಾಸಿಸಂ ವಿರುದ್ಧ ಸಾರ್ವಜನಿಕವಾಗಿ ಹೋರಾಡುತ್ತಿಲ್ಲವೇಕೆ? ಕೇವಲ ಟಿವಿಗಳ ಮೂಲಕ ತಮ್ಮ ಜ್ಞಾನದ ಪರಿಧಿಯನ್ನು ಹಿಗ್ಗಿಸಿಕೊಳ್ಳಬಯಸುವ ಇಂಡಿಯಾದ ಮಧ್ಯಮವರ್ಗಕ್ಕೆ ಈ ದೃಶ್ಯ ಮಾಧ್ಯಮವನ್ನು ಹೊರತುಪಡಿಸಿಯೂ ಅನೇಕ ಬಗೆಯ ಜ್ಞಾನದ ಮಾರ್ಗಗಳಿವೆ ಎಂದೇಕೆ ಅರಿವಾಗುತ್ತಿಲ್ಲ?ಇತರೇ ಜ್ಞಾನದ ಮಾರ್ಗಗಳನ್ನು ಮುಕ್ತ ಮನಸ್ಸಿನಿಂದ ನೋಡಿದ್ದರೆ ಈ ತ್ರಿಶೂಲಧಾರಿ ಸಂಘಪರಿವಾರದ ಲುಂಪೆನ್ ಗುಂಪನ್ನು ಮಧ್ಯಮವರ್ಗ ತೀವ್ರವಾಗಿ ಖಂಡಿಸುತ್ತಿತ್ತು.ಈ ಒಳನೋಟ ದಕ್ಕಿದ್ದರೆ ತನ್ನ ಧರ್ಮದ ಮತಾಂಧರಿಂದ ಹಲ್ಲೆಗೊಳಗಾದ ತಸ್ಲೀಮಾಳಿಗೆ ಆಸರೆ ಕೊಡಲು ಮುಂದಾದ ಸಂಘಪರಿವಾರದ ವರ್ತನೆಯ ಹಿಂದಿನ ಗುಪ್ತ ಕಾರ್ಯಸೂಚಿಗಳ ಕುರಿತಾಗಿ ಅರಿವಾಗುತ್ತಿತ್ತು.ಮತ್ತೊಂದು ಕಡೆ ಈ ಮುಸ್ಲಿಂ ಮೂಲಭೂತವಾದಿಗಳ,ಈ ಪಾಪ್ಯುಲರ್ ಫ್ರಂಟ್‌ಗಳ,ಜಮಾತೆಗಳ ಧಾರ್ಮಿಕ ಮೂಲಭೂತವಾದ ಮತ್ತದರ ದುಷ್ಪರಿಣಾಮಗಳ ಕುರಿತಾಗಿ ನೇರವಾಗಿ ಖಂಡಿಸದೆ ಅದೇಕೆ ಅನೇಕ ಎಡಪಂಥೀಯ ಚಿಂತಕರು ಅದು ಹಾಗೇ,ಅದು ಹೀಗೆ ಎಂದು ಉಗ್ಗುತ್ತ ತಲೆಮರೆಸಿಕೊಳ್ಳುತ್ತಾರೆ? ಇನ್ನಾದರೂ ಈ ಎಡಪಂಥೀಯರು ತಾನು ಮುಸ್ಲಿಂ ಮೂಲಭೂತವಾದವನ್ನು ಖಂಡಿಸಿದರೆ ತಾನು ಸ್ವಧರ್ಮನಿಷ್ಠನಾಗಿಬಿಡುತ್ತೇನಲ್ಲ,ನನ್ನ ಸಿದ್ಧಾಂತಗಳ ಗತಿಯೇನು? ಎಂಬ ಹುಂಬ ಮತ್ತು ಚಲನರಹಿತ ಮನಸ್ಥಿತಿಯಿಂದ ಹೊರ ಬಂದು ವರ್ತಿಸತೊಡಗಿದಾಲೇ ಹೊಸಬೆಳಕು ಮೂಡುತ್ತದೆ. ಆಗ ಈ ಕೋಮುವಾದಿ ಮಧ್ಯಮವರ್ಗವನ್ನು ಈ ಹಿಂದೂತ್ವದ ಕಬಂಧಬಾಹುಗಳಿಂದ ಹೊರತರಬಹುದು. ಈ ಇಂಡಿಯ ಮುಜಾಹಿದ್ದಿನ್‌ಗಳು,ಲಷ್ಕರ್ ಎ ತೊಯ್ಬಾಗಳು ಯಾವುದೂ ಗೊತ್ತಿಲ್ಲದ,ಗೊತ್ತಿದ್ದರೂ ಅದರ ಸಹವಾಸ ಅವರಿಗೆ ಬೇಕಿಲ್ಲದ, ಋಜಣಣಂಗಳಲ್ಲಿ ಅತಂತ್ರರಾಗಿ ಬದುಕುತ್ತಿರುವ ಇಂಡಿಯಾದ ಮುಸ್ಲಿಂರನ್ನು ಸಮಾಜದ ಮುಂಚೂಣಿಗೆ ತರುವಲ್ಲಿ ಇಂಡಿಯಾದ ಮಧ್ಯಮವರ್ಗ ಮತ್ತು ಎಡಪಂಥೀಯ ಚಿಂತಕರು ಅತ್ಯಂತ ಪ್ರಮುಖ ಪಾತ್ರ ವಹಿಸಲೇಬೇಕಾಗಿದೆ. ಈ ಮಧ್ಯಮವರ್ಗ ಮೋದೀಕರಣದ,ಹಿಂದುತ್ವದ ಪ್ರಭಾವದಿಂದ ಕಳಚಿಕೊಂಡಾಗಲಷ್ಟೇ ಇದು ಸಾಧ್ಯ. ಆಗಲೇ ಎಲ್ಲಾ ಧರ್ಮಗಳ ಹೆಸರಿನಲ್ಲಿ ನಡೆಯುವ ಭಯೋತ್ಪಾದನೆಯ ವಿರುದ್ಧದ ಹೋರಾಟಕ್ಕೆ ನೈತಿಕತೆಯ ಬಲ ದೊರಕುತ್ತದೆ ಇಲ್ಲದಿದ್ದಲ್ಲಿ ಕ್ಷುಲ್ಲಕ,ಸ್ವಾರ್ಥ ರಾಜಕಾರಣ ಮತ್ತು ಮೂಲಭೂತವಾದಿ ಹಿಂದೂ ಮತ್ತು ಮುಸ್ಲಿಂ ಸಂಘಟನೆಗಳು ನಿರಂತರವಾಗಿ ಪರಿಸ್ಥಿಯ ದುರ್ಲಾಭ ಪಡೆದುಕೊಳ್ಳುತ್ತಲೇ ಇರುತ್ತವೆ.

ಬುದ್ಧ ನಾಟಕದಲ್ಲಿ....

.....15

ಚಿತ್ರಿಸಲಾಗಿದೆ. ಪುರಾತನ ಕಾಲದಲ್ಲಿ ಹಾರುವವರು ಶಿಕ್ಷಣವನ್ನು ತಮ್ಮ ಸ್ವತ್ತು ಎಂದು ದಲಿತರನ್ನು ಕಡೆಗಣಿಸಿದ್ದರು. ಆದರೆ ಇದೇ ಕಾಲದಲ್ಲಿ ಅಂಗುಲಿ ಮಾಲನು ಮುಖಾಮುಖಿಯಾದ ಬುದ್ಧನು ಜೀವಪರವಾದ ಪಾಠವನ್ನು ಬೋಧಿಸಿದ್ದು, ಅಂಗುಲಿಮಾಲನನ್ನು ಪ್ರತೀಕಾರದಿಂದ ಹೃದಯವಂತನ್ನಾಗಿಸಿದ್ದು ದಲಿತಪರ ಶಿಕ್ಷಣದ ಬಹುದೊಡ್ಡ ದಾಖಲೆಯಾಗಿದೆ. ಅಂಗುಲಿಮಾಲ ತಳಸಮುದಾಯದ ಕರುಣೆಯೂ, ಈ ನೆಲದ ತಳಸಮುದಾಯ ಪರವಾದ ಬುದ್ಧನ ಹೃದಯವಂತಿಕೆಯೂ ಆಗಿದೆ.

ನಾಟಕದಲ್ಲಿ ಬುದ್ಧನ ಬೋಧನೆಯು ಪರಿಮಳದಂತೆ ದಿಕ್ಕು ದಿಕ್ಕುಗಳಿಗೆ ಹರಡುವುದನ್ನು ಕಂಡು ವೈದಿಕರು ಬುದ್ಧನ ಮೇಲೆ ಅಪಕೀರ್ತಿಯನ್ನು ತರಲು 'ಚಿಂಚ' ಎನ್ನುವ ಹೆಣ್ಣನ್ನು ಹಣದ ಆಸೆಯನ್ನು ತೋರಿಸಿ, ತಮ್ಮ ಸುಖಕ್ಕಾಗಿ ಬಳಸಿಕೊಂಡು, ಅವಳನ್ನು ಮತ್ತೊಬ್ಬ ದಲಿತನಿಂದ ಕೊಲ್ಲಿಸಿ, ಆ ಅಪಾಧನೆಯನ್ನು ಬುದ್ಧನ ಮೇಲೆ ಏರಲು ಪ್ರಯತ್ನಿಸುತ್ತಾರೆ. ಇಲ್ಲಿ ಹಾರುವವರು ಯಾವುದೇ ಸುಳಿವಿನಲ್ಲಿ ಸಿಕ್ಕಿಕೊಳ್ಳದೆ ತಮ್ಮ ಹಿತಾಸಕ್ತಿಗಾಗಿ ದಲಿತರನ್ನು ಬಳಸಿ, ಬೀಸಾಕುವ ಕ್ರೌರ್ಯ, ಕುತಂತ್ರಗಳನ್ನು ಹೊಂದಿರುವುದನ್ನು ನಾಟಕಕರರು ಚಾರಿತ್ರಿಕ ಹಿನ್ನೆಲೆಯಲ್ಲಿ ಬಿಚ್ಚಿಟ್ಟಿದ್ದಾರೆ. ಬುದ್ಧನನ್ನು ದ್ವೇಷಿಸುವವರು ಬುದ್ಧನಿಗೆ ಅಗೌರವವನ್ನು ತರಲು 'ಆಮ್ರಪಾಲಿ' ಎಂಬ ಸ್ತ್ರೀಯನ್ನು ಬಳಸಿಕೊಂಡರು. ಆದರೆ ಆಮ್ರಪಾಲಿಯು ಬುದ್ಧನ ಅನುಯಾಯಿಯಾದುದು ಬುದ್ಧನ ಹೃದಯವಂತಿಕೆಯಿಂದ. ಆಮ್ರಪಾಲಿ ಸುರಸುಂದರಾಂಗನೆ, ಅವಳ ಚೆಲುವಿನ ಮೈಮಾಟವು ರಾಜಮಹಾರಾಜರಿಂದ ಹಿಡಿದು ದಾರಿಯಲ್ಲಿ ಹೋಗುವ ತಿರುಕನು ಅವಳನ್ನು ಮೋಹಿಸುವಷ್ಟು ಸುಂದರಿ ಅಲ್ಲದೇ ಅವಳೊಬ್ಬ ವೇಶ್ಯೆಯಾಗಿದ್ದಳು. ಪುರಾತನ ಕಾಲದಿಂದಲೂ ವೇಶ್ಯೆಯರು ಯಾರು ಆಗಿರುತ್ತಿದ್ದರು, ಏಕೆ ಆಗುತ್ತಿದ್ದರು ಎಂಬ ಪ್ರಶ್ನೆ ಬರುತ್ತದೆ ರಾಜಪ್ರಭುತ್ವದಲ್ಲಿ ರಾಜರು ತಮ್ಮ ಸ್ವಾರ್ಥಕ್ಕಾಗಿ, ಸುಖಕ್ಕಾಗಿ, ವೈಶ್ಯಾಗೃಹಗಳನ್ನು ಸ್ಥಾಪಿಸುತ್ತಿದ್ದರು. ಹಾಗೆಯೇ ಬ್ರಾಹ್ಮಣರು ದೇವಸ್ಥಾನಗಳಲ್ಲಿ ದೇವದಾಸಿಯರನ್ನು ಸೃಷ್ಟಿಸುತ್ತಿದ್ದರು. ಈ ದೇವದಾಸಿಯರೆಲ್ಲಾ ಬಹುತೇಕ ತಳಸಮುದಾಯದವರೇ ಆಗಿದ್ದಾರೆ. ಇಂತಹವರನ್ನು ತನ್ನ ಬೋಧನೆಗಳಿಂದ ಬದಲು ಮಾಡಿ ಬದುಕಿನ ಬೆಳಕು ತೋರಿದ5. ಮಹಾನ್ ಚೇತನ ಬುದ್ಧ.

ಹೀಗೆ ಬುದ್ಧನ ಬೆಳಕಿನ ಚರಿತ್ರೆಯನ್ನು ಸೋಸಲೆ ಗಂಗಾಧರವರು ಬರೆದಿರುವ 'ಬುದ್ಧನಾಟಕ'ದಲ್ಲಿ ಅವಲೋಕಿಸುತ್ತಾ ಹೋದರೆ ನಮ್ಮ ವರ್ತಮಾನಗಳ ಅನೇಕ ಸಂದಿಗ್ಧತೆಗಳು ಹಾಗೂ ಅವುಗಳಿಗೆ ಸೂಕ್ತ ಪರಿಹಾರಗಳು ಗೋಚರವಾಗುತ್ತವೆ. ಜನಪರವಾದ ಬುದ್ಧನ ಚರಿತ್ರೆಯನ್ನು ಔಚಿತ್ಯಪೂರ್ಣವಾಗಿ, ವಿವೇಕಪೂರ್ಣವಾಗಿ, ನಾಟಕದ ಮೂಲಕ ಚಿತ್ರಿಸಿರುವ ಸೋಸಲೆ ಗಂಗಾಧರವರ ಪ್ರಯತ್ನವು ಅನುಕರಣೀಯವಾದದ್ದು ಬುದ್ಧನ ಚರಿತ್ರೆ ಎಂದರೆ ಅದು ಭಾರತದ ಬೆಳಕಿನ ಚರಿತ್ರೆಯೇ ಆಗಿದೆ. ಇದನ್ನು ವಿವೇಕದಿಂದ ಅಂದುಕೊಂಡಷ್ಟು ತಮದಂದ ಕೇಡು ಕ್ಷಣ ಕ್ಷಣಕ್ಕೂ ಕರಗಿ ಹೋಗುವುದರಲ್ಲಿ ಯಾವುದೇ ಸಂಶಯವಿಲ್ಲ. ಹೀಗಾಗಿ ಬುದ್ಧನ ಕುರಿತಾದ,ತಳಸಮುದಾಯದ ಕುರಿತಾದ ಏಕೀಕೃತ ಚರಿತ್ರೆಯನ್ನು ಒಡೆದು ಕಟ್ಟುವ ಪುನರ್‌ನಿರ್ಮಾಣ ಮತ್ತು ಮೌಲ್ಯೀಕರಣ ಮಾಡುವುದು ಅನಿವಾರ್ಯವಾಗಿದೆ.

ತತ್ವಪದಕಾರರಲ್ಲಿ ದಲಿತ ಸಂವೇದನೆ

♦ ಮಹಾದೇವಸ್ವಾಮಿ ಎಂ. ಅಂಬಳೆ

ಅನಾದಿ ಕಾಲದಿಂದಲು ಬೆಳೆದು ಬಂದಿರುವ ವರ್ಣಾಶ್ರಮ ವ್ಯವಸ್ಥೆ ಜಾತಿ-ಜಾತಿಗಳ ನಡುವೆ ಒಡಕು ಉಂಟು ಮಾಡಿದೆ. ಇದರ ವಿರುದ್ಧ ಅನೇಕ ಧಾರ್ಮಿಕ ಆಂದೋಲನಗಳು ಸಿಡಿದಿದ್ದವೆ. ಇಷ್ಟಾದರೂ ಹುಟ್ಟಿನಿಂದ ಜಾತಿಯನ್ನು ನಿರ್ಧರಿಸುವ ನಮ್ಮ ಸಮಾಜ ಛಿದ್ರಗೊಳ್ಳುತ್ತಲೇ ಇದೆ. ಭಾರತೀಯ ಸಮಾಜದಲ್ಲಿ ಜಾತಿ ಪದ್ಧತಿಯು ಆಳವಾಗಿ ಎತ್ತರೆತ್ತರವಾಗಿ ಬೆಳೆದಿದೆ. ಎರಡು ಸಾವಿರದ ಐದುನೂರು ವರ್ಷಗಳ ಅವಧಿಯ ಧಾರ್ಮಿಕ ಆಂದೋಲನಗಳು ಸಮಾನತೆಯ ತತ್ವವನ್ನು ಸಾರಿವೆಯಾದರೂ ಜಾತಿ ಪದ್ಧತಿ ಹಾಗೆಯೇ ಉಳಿದು ಬಂದಿದೆ. ಬುದ್ಧನಿಂದ ಅಂಬೇಡ್ಕರ್‌ರವರೆಗೆ ಸಾಮಾಜಿಕ ಸುಧಾರಣೆಯನ್ನು ಬಯಸಿ ಬೆಳೆದು ಬಂದಿರುವ ವಚನ, ಕೀರ್ತನೆ ಮತ್ತು ತತ್ವಪದಗಳು ಜಾತಿ ಪದ್ಧತಿಯನ್ನು ಅಳಿಸಲು ಶ್ರಮವಹಿಸಿವೆ.

ಕನ್ನಡ ಸಾಹಿತ್ಯದಲ್ಲಿ ತತ್ವಪದಗಳನ್ನು ಭಜನೆ ಪದಗಳು, ಸ್ವರವಚನಗಳು, ಕೈವಲ್ಯಪದಗಳು, ಗುರುಶಿಷ್ಯರ ಪದಗಳು, ಅನುಭಾವ ಪದಗಳು ಎಂಬ ಹೆಸರುಗಳಿಂದ ಗುರುತಿಸಲಾಗಿದೆ. ಇವು ಶರಣರ ವಚನಗಳಂತೆ, ಹರಿದಾಸರ ಕೀರ್ತನೆಗಳಂತೆ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದ್ದು, ಸಮಾಜಪರ ಧೋರಣೆಯನ್ನು, ಪ್ರಖರವಾದ ವೈಚಾರಿಕತೆಯನ್ನು ಒಳಗೊಂಡಿವೆ.

ತತ್ವಪದ ಸಾಹಿತ್ಯವು ಕನ್ನಡದಲ್ಲಿ ತನ್ನದೆಯಾದ ಪರಂಪರೆಯನ್ನು ಪಡೆದುಕೊಂಡು ಬಂದಿದೆ. ತತ್ವಪದಗಳು ಹಾಡುವುದಕ್ಕಾಗಿ ರಚನೆಯಾದರೂ ಜನ ಸಮುದಾಯದ ಬದುಕಿನ ಮಗ್ಗುಲುಗಳನ್ನು ಕುರಿತು ಮೌಲಿಕವಾಗಿ ಅನಾವರಣಗೊಳಿಸುವಂತಹ ಶಕ್ತಿಯನ್ನು ಹೊಂದಿವೆ. ಇವು ಹನ್ನೆರಡನೇ ಶತಮಾನದಲ್ಲಿ ಸಕಲೇಶ ಮಾದರಸ ಮುಂತಾದ ಶಿವಶರಣರ ಸ್ವರವಚನದ ಸಾಹಿತ್ಯದೊಂದಿಗೆ ಪ್ರಾರಂಭಗೊಂಡು ಹದಿನಾರನೆಯ ಶತಮಾನದಲ್ಲಿ ನಿಜಗುಣ ಶಿವಯೋಗಿಗಳಿಂದ ಜನಪ್ರಿಯಗೊಂಡಿವೆ. ನಂತರ ಹದಿನೇಳರಿಂದ ಹತ್ತೊಂಭತ್ತನೆಯ ಶತಮಾನದಷ್ಟೊತ್ತಿಗೆ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಮೈಲಾರ ಬಸವಲಿಂಗ, ಕೈವಾರ ನಾರಾಯಣಪ್ಪ ಮುಂತಾದವರಿಂದ ಉತ್ತುಂಗ ಶಿಖರಕ್ಕೆ ತಲುಪಿತು.

'ತತ್ವಪದ ಸಾಹಿತ್ಯ ಜನಸಮ್ಮುಖ ವಿಚಾರಧಾರೆ ಹೊಂದಿದ ಸಾಹಿತ್ಯವಾಗಿದೆ.'[1] ಸಾಹಿತ್ಯ ಮತ್ತು ಸಂಗೀತ ಇಲ್ಲಿ ಮುಪ್ಪುರಿಗೊಂಡಿದೆ. ಲೋಕಶಿಕ್ಷಣ, ಲೋಕನೀತಿ, ಆಧ್ಯಾತ್ಮ ವಿಚಾರಗಳು ತತ್ವಪದಕಾರರ ಪದಗಳಲ್ಲಿ ಹಾಸುಹೊಕ್ಕಾಗಿ ಬೆರೆತಿರುವುದನ್ನು ನಾವು ಗುರುತಿಸಬಹುದು. ಮೂಢನಂಬಿಕೆ, ಹಾಗೂ ಶ್ರದ್ಧೆಗಳಿಗೆ ಜೋತುಬಿದ್ದ, ಜಾತಿಪದ್ಧತಿಯಂತಹ ಕೊಳೆಯಿಂದ ಜಡ್ಡುಗಟ್ಟಿದ ಸಮಾಜದಲ್ಲಿ ಚಲನಶೀಲತೆಯ ಹೋರಾಟಕ್ಕೆ ತೊಡಗಿಸಿಕೊಂಡ ತತ್ವಪದಕಾರರು ಸಮಾಜದ ಅನಿಷ್ಟಗಳ ವಿರುದ್ಧ ಕೈಗೊಂಡ ಹೋರಾಟಗಳೇ ಈ ತತ್ವಪದಗಳಾಗಿವೆ.

'ತತ್ವಪದಕಾರರು ಜಾತಿಯ ಗೋಡೆಯನ್ನುರುಳಿಸಲು ಪ್ರಯತ್ನಿಸಿದ ಧೀರರು'[2]. ಇವರು ಜನರ ಮನದಂಗಳದಲ್ಲಿ ಸಮಾನತೆಯ ಬೀಜ ಬಿತ್ತಿ ಬೆಳೆಕಾಣಲು ಹೊರಟ ಕೃಷಿಕರು, ಮಾನವ-ಮಾನವರ ಮಧ್ಯೆ ಬೇಲಿಯಾಗಿದ್ದ ಜಾತಿಯನ್ನು ನಾಶಮಾಡಲೆತ್ನಿಸಿದ ಮಹಾನುಭಾವರು. ಅನಾದಿಕಾಲದಿಂದಲೂ ಭಾರತವನ್ನು ಬಿಡದೆ ಕಾಡುತ್ತಿರುವ ಜಾತಿಪದ್ಧತಿಯೆಂಬ ಹೀನ ಪದ್ಧತಿಯನ್ನು ಅಳಿಸಲೆಂದೆ ಸತತವಾಗಿ ತಮ್ಮ ಪದಗಳ ಮುಖೇನ ಪ್ರಯತ್ನಿಸಿದ ಮಹಾಮಹಿಮರು. 'ಮಾನವ ಕುಲ ತಾನೊಂದೆ ವಲಂ' ಎಂಬ ಪಂಪವಾಣಿಯಂತೆ ಮನುಷ್ಯರೆಲ್ಲ ಒಂದೇ ಜಾತಿಗೆ ಸೇರಿದವರು, ಯಾರು ಶ್ರೇಷ್ಠರಲ್ಲ. ಯಾರು ಕನಿಷ್ಠರಲ್ಲ. ಉಚ್ಚಕುಲ, ನೀಚಕುಲ ಎಂಬುದಿಲ್ಲ ಎಂಬ ನಿಲುವು ಉಳ್ಳವರು. ಆದರೆ ಶತಶತಮಾನಗಳಿಂದಲೂ ನಮ್ಮ ರಾಷ್ಟ್ರದಲ್ಲಿ ಜಾತಿಯ ಹೆಮ್ಮರ ತನ್ನ ಕಬಂಧ ಬಾಹುಗಳನ್ನು ಚಾಚಿ ಬೃಹದಾಕಾರವಾಗಿ ಬೆಳೆದು ನಿಂತಿದೆ. ಅದರ ಬೇರುಗಳಂತು ಅತೀ ಆಳಕ್ಕೆ ಇಳಿದು ಗಟ್ಟಿಯಾಗಿವೆ. ಎಲ್ಲೆಂದರಲ್ಲಿ ಜಾತಿ ನಿರ್ಭಯದಿಂದ ನರ್ತಿಸುತ್ತಿದೆ. ಅನಿಷ್ಟ ಕ್ರೂರ ಪರಂಪರೆಯಾಗಿ ಭಾರತೀಯರಿಗೆ ಬೆಂಬಿಡದ ಭೂತವಾಗಿ ಪರಿಣಮಿಸಿದೆ.

ಮೇಲ್ಜಾತಿಯವರು ಯಾವುದೇ ಕೆಟ್ಟ ಕಾರ್ಯ ಮಾಡಿದರೂ ಅದು ಕೀಳೆನಿಸುವುದಿಲ್ಲ ಎಂದು ಸಾರುವ ಮನುಸ್ಮೃತಿಯಂಥ



ಗ್ರಂಥಗಳು ಭಾರತೀಯರಲ್ಲಿ ಜಾತಿಯ ವಿಷ ಬೀಜವನ್ನು ಬಿತ್ತುತ್ತಾ ಬಂದುದನ್ನು ಕಾಣುತ್ತೇವೆ. ಜಾತಿಪದ್ಧತಿಯನ್ನು ಮುಂದುವರೆಸುವಲ್ಲಿ ಇಂತಹ ಕೃತಿಗಳ ಪಾತ್ರ ಹೆಚ್ಚಿರುವುದು ಗೋಚರಿಸುತ್ತದೆ. ವೈದಿಕ ಪರಂಪರೆಯು ಮನುಷ್ಯನ ಜಾತಿಯನ್ನು ಹುಟ್ಟಿನಿಂದಲೇ ಅಳೆಯುತ್ತದೆ. ವಿನಾಃ ಆತನ ಗುಣದಿಂದಲ್ಲ. ಜಾತಿ ನಿರ್ಧಾರಕ್ಕೆ ಹುಟ್ಟೇ ಮುಖ್ಯ, ಗುಣ ಮುಖ್ಯವಾಗಲಿಲ್ಲ. ಇಂತಹ ಶೋಷಣೆಯುಕ್ತ ಅನಿಷ್ಟ ಆಚರಣೆಗಳನ್ನು, ನಂಬಿಕೆಗಳನ್ನು ತತ್ವಪದಕಾರರು ಪ್ರಬಲವಾಗಿ ವಿರೋಧಿಸಿದರು. ತತ್ವಪದಗಳನ್ನು ರಚಿಸುತ್ತಾ ಆ ಮೂಲಕ ಶೋಷಿತರ, ತುಳಿತಕ್ಕೊಳಗಾದವರ ಪರ ದನಿಯೆತ್ತಿದರು.

ಬುದ್ಧನ ತರುವಾಯ ಸಮಾನತೆಯ, ಸೋದರತೆಯ ಸ್ವಾತಂತ್ರ್ಯದ ಆಚರಣೆಗಳು ಈ ನೆಲದ ಮೇಲೆ ಮತ್ತೆ ಮೂಡಿಬಂದದ್ದು ವಚನಕಾರರ ಸಂದರ್ಭದಲ್ಲಿ. ನಂತರದ ದಿನಗಳಲ್ಲಿ ಅದನ್ನು ಮುನ್ನಡೆಸಿದವರು ತತ್ವಪದಕಾರರು. ಇವರು ಸರ್ವಸಮಾನತೆಯ ತಳಹದಿಯ ಮೇಲೆ ನವಸಮಾಜವನ್ನು ರೂಪಿಸಲು ಸಾಮಾಜಿಕ ಅವ್ಯವಸ್ಥೆಗಳನ್ನು ನಿರ್ಭೀತಿಯಿಂದ ವಿಮರ್ಶೆ ಮಾಡುವ ಕೆಚ್ಚನ್ನು ಮೈಗೂಡಿಸಿಕೊಂಡರು. ಪುರೋಹಿತಷಾಹಿ ವಿಧಿಸಿದ್ದ ಕುತಂತ್ರ ದಿಗ್ಬಂಧನಗಳನ್ನು ಕಳಚಿ ಹೊಸಗಾಳಿಗೆ ಮೈಯೊಡ್ಡಿ ನಿಂತರು. ಅಲ್ಲದೆ ವೈಚಾರಿಕತೆ ತುಂಬಿದ ಮಾನವೀಯ ಪಾತಳಿಯಲ್ಲಿ ಆತ್ಮಸ್ಥೈರ್ಯ ಹಾಗೂ ಆತ್ಮಪ್ರತ್ಯಯಗಳನ್ನು ರೂಪಿಸಿಕೊಂಡರು. ಇಷ್ಟಲ್ಲದೆ ಪರಸ್ಪರ ಪ್ರೇಮ, ಸಮತಾಭಾವ ಮುಂತಾದ ಮಾನವೀಯ ಅಂಶಗಳನ್ನು ಜನ ಸಮುದಾಯದಲ್ಲಿ ಸಾರಿದರು. ಇವರು ತಮ್ಮನ್ನು ಯಾವುದೇ ಧರ್ಮ, ಜಾತಿ-ಮತಗಳಿಗೆ ಸೀಮಿತಗೊಳಿಸಿಕೊಂಡವರಲ್ಲ. ಇಡೀ ಮನುಕುಲಕ್ಕೆ ಸಂಬಂಧಿಸಿದ ವಿಚಾರಗಳನ್ನು ಹೃದಯ ತುಂಬಿ, ಭಾವ ತಾಳಿ ತತ್ವಪದಗಳನ್ನು ರಚಿಸಿ ಹಾಡಿದರು. ಶತಶತಮಾನಗಳಿಂದ ತುಳಿತಕ್ಕೊಳಗಾದ, ತಳವರ್ಗದವರ ಮೂಕವೇದನೆಯ ಮುಖವಾಣಿಯಂತೆ ಹಲವಾರು ಪದಗಳನ್ನು ಕಟ್ಟಿ ಹಾಡುತ್ತಾ ವ್ಯವಸ್ಥೆಯನ್ನು ನಿಂದಿಸಿದರು. ಈ ಹಿನ್ನೆಲೆಯಲ್ಲಿ ನಿಜಗುಣಶಿವಯೋಗಿ, ಮುಪ್ಪಿನ ಷಡಕ್ಷರಿ, ಕಡಕೋಳ ಮಡಿವಾಳಪ್ಪ ಕೈವಾರ ನಾರಾಯಣಪ್ಪ, ಶಿಶುನಾಳ ಶರೀಫ ಮುಂತಾದವರು ರಚಿಸಿರುವ ತತ್ವಪದಗಳಲ್ಲಿ ವ್ಯಕ್ತವಾಗಿರುವ 'ದಲಿತ ಸಂವೇದನೆ' ಯನ್ನು ಈ ಮುಂದಿನಂತೆ ಗುರುತಿಸಬಹುದು.

ತತ್ವಪದಕಾರರಂತು ತಮ್ಮ ಅನೇಕ ತತ್ವಪದಗಳಲ್ಲಿ ಜಾತಿಪದ್ಧತಿ, ಅಸ್ಪೃಶ್ಯತೆ ಮುಂತಾದ ಅಂಶಗಳನ್ನು ಖಂಡಿಸುತ್ತಲೇ ಸಾಮಾಜಿಕ ಸಾಮರಸ್ಯದ ಬದುಕಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಜಾತಿ-ಕುಲ-ಅಸ್ಪೃಶ್ಯತೆಯ ಸಮಸ್ಯೆಗಳನ್ನು ಸ್ವತಃ ತತ್ವಪದಕಾರರು ಅನುಭವಿಸಿದ್ದಾರೆ. ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿದ್ದಾರೆ. ಸಾಕಷ್ಟು ಅಸಮಾನಕ್ಕೆ, ಅವಹೇಳನೆಗೂ ಕೂಡ ಗುರಿಯಾಗಿದ್ದಾರೆ. ಇವೆಲ್ಲದರಿಂದ ಬೇಸತ್ತಂತಹ ಅವರು ಈ ಗಂಭೀರ ಸಮಸ್ಯೆಗಳನ್ನು ಕುರಿತು ಅನೇಕ ತತ್ವಪದಗಳನ್ನು ರಚಿಸಿದ್ದಾರೆ. ಸಾಮಾಜಿಕ ವಿಡಂಬನೆಯ ತತ್ವಪದಗಳಲ್ಲಿ ಅವಾಚ್ಯ ಶಬ್ಧಗಳಿಂದ ನಿಂದನೆಯನ್ನು ಸಹಾ ಮಾಡಿದ್ದಾರೆ.

ಹೈದ್ರಾಬಾದ್ ಕರ್ನಾಟಕದ ಬಹುದೊಡ್ಡ ಅನುಭಾವಿ ಹಾಗೂ ತತ್ವಪದಕಾರರಾದ ಕಡಕೋಳ ಮಡಿವಾಳಪ್ಪನವರು ಕುಲ-ಜಾತಿಯನ್ನು ನಂಬಿ ಶೋಷಿಸುವ ಜನರನ್ನು ತೀವ್ರವಾಗಿ ಖಂಡಿಸಿ ಅನೇಕ ತತ್ವಪದಗಳನ್ನು ರಚಿಸಿದ್ದಾರೆ. 'ಕುಲಛಲಕೆ ಹೊಡೆದಾಡಬೇಡಿರೋ ಮುಂದನೆಲೆ ಮಾಡಿಕೊಳ್ಳುವುದು ನೋಡಿರೊ, ಕುಲಛಲವೆಲ್ಲಾ ಸುಳ್ಳು ಇಹಲೋಕದ ಅಭಿಮಾನ ಬಿಡಿ' ಎಂದು ಹೇಳುತ್ತಾರೆ.

"ಮುಡಿಚಟ್ಟಿನೊಳು ಬಂದು ಮುಟ್ಟು ತಟ್ಟು ಅಂತೀರಿ
ಮುಡಿಚೆಟ್ಟು ಎಲ್ಲ್ಯಾದ ಹೇಳಣ್ಣಾ ।
ಮುಟ್ಟಾದ ಮೂರು ದಿನಕ ಹುಟ್ಟಿ ಬಂದಿರಿ ನೀವು
ಮುಡಚೆಟ್ಟು ಎಲ್ಲ್ಯಾದ ಹೇಳಣ್ಣ ॥ಪ॥
ತೊಗಲೊಳು ತೊಗಲ್ದೊಕ್ಕು ತಗಲಿಬಂದವ ನೀನು
ತಗಲ ಮಾತಾಡುವುದೇನಣ್ಣ
ಇದರ ಬಗಿಯ ತಿಳಿಯದೆ ಬಗದು ಮಾತಾಡದಿರು
ನಗಿಗೇಡಿ ಕಾಣುತಾದಣ್ಣ"3

ಸಮಾಜದಲ್ಲಿ ಮಡಿ-ಮೈಲಿಗೆಯ ಆಚರಣೆಯ ಬಗ್ಗೆ ವಿರೋಧವು ಈ ಪದದಲ್ಲಿ ವ್ಯಕ್ತವಾಗಿದೆ. ಗಂಡು ಮತ್ತು ಹೆಣ್ಣಿನ ದೈಹಿಕ ಸಮಾಗಮದ ಮೂಲಕ ಮತ್ತೊಂದು ಜೀವವು ಹುಟ್ಟುತ್ತದೆ. ಈ ದೇಹವು ಮಲ-ಮೂತ್ರ, ಮಾಂಸಗಳ ಮುದ್ದೆಯಾಗಿದೆ. ಆದ್ದರಿಂದ ಈ ದೇಹ ಹೇಗೆ ಶ್ರೇಷ್ಠವಾಗುತ್ತದೆ? ಮುಂತಾದ ಪ್ರಶ್ನೆಯನ್ನು ಎತ್ತಿದ್ದಾರೆ. ಈ ಮೂಲಕ ಸಾಮಾಜಿಕ ಶೋಷಣೆಯ ನೆಲೆಗಳಾದ ಜಾತಿ-ಕುಲಗಳನ್ನು, ಮಡಿ-ಮೈಲಿಗೆಗಳನ್ನು ನಿರಾಕರಿಸಿದ್ದಾರೆ.

ಕೈವಾರ ನಾರಾಯಣಪ್ಪನವರು

"ಅಲ್ಪವೆಂಬ ಜಾತಿಗೆ ಸೇರಿದವರು ಯಾರು ಇಲ್ಲ
ಮೇಲು-ಕೀಳು ಜಾತಿ ಕಲ್ಪಿಸಬಾರದು
ಮಾನವರೆಲ್ಲ ಒಂದೇ ಜಾತಿಗೆ ಸೇರಿದವರು
ಹೊಲೆಯನನ್ನು ನಿಂದಿಸುವ ಕಾರಣವಿಲ್ಲ"4

ಎಂದು ಹೇಳುತ್ತಾ ಸಮಾಜದಲ್ಲಿನ ಜಾತಿ-ಕುಲಗಳೆಲ್ಲವೂ ಮನುಷ್ಯನ ಸೃಷ್ಟಿಗಳಾಗಿದ್ದು, ಇವುಗಳನ್ನು ಮೀರಬೇಕು. ಮನುಷ್ಯರೆಲ್ಲರೂ ಒಂದೇ, ಯಾರು ಯಾರನ್ನೂ ನಿಂದಿಸಬಾರದು ಎಂಬ ಕರೆ ನೀಡಿದ್ದಾರೆ.

ಕೂಡಲೂರು ಬಸವಲಿಂಗ ಶರಣರು ಜಾತಿ ಶ್ರೇಷ್ಠತೆಯಲ್ಲಿ ನಂಬಿಕೆಯಿಡದೆ, ಮಾನವರೆಲ್ಲರೂ ಮಾತೃಗರ್ಭದಿಂದ ಹೊರಬೀಳುವಾಗ ಮೂತ್ರದ್ವಾರದ ಮೂಲಕವೇ ಹುಟ್ಟಿ ಬರುತ್ತಾರೆ. ಹೀಗಿರುವಾಗ ಜಾತಿ ಶ್ರೇಷ್ಠತೆ ಎಲ್ಲಿಂದ ಬರುತ್ತದೆ ಎಂದು ತನ್ನ ತತ್ವಪದದಲ್ಲಿ ಪ್ರಶ್ನಿಸಿದ್ದಾರೆ.

"ಮಲಮೂತ್ರದೊಳು ಬಂದು
ಶೀಲ ಬಹಳ ಮಾಡುವವರು
ಶೂಲಪಾದದ ಧ್ಯಾನ ನಿಲ್ಲಿಸಿದವರು
ಮುಟ್ಟನಲಿ ಹುಟ್ಟಿ ಬಂದು
ಮುಟ್ಟಿಗಿ ತಟ್ಟಿಗಿ ಅನುವವರು
ಹುಟ್ಟಿಸಿದ ಶಿವನ ಕೂಡ ಅರಿಯದವರು"5

ಆದ್ದರಿಂದ ಉತ್ತಮ ಕುಲದವರು ಯಾರು ಇಲ್ಲ. ಹಾಗಾಗಿ ಜಾತಿ ಹೆಸರಿನಲ್ಲಿ ಮೇಲು-ಕೀಳುಗಳನ್ನು ಕಲ್ಪಿಸುತ್ತಾ ದಲಿತರನ್ನು ನಿಂದಿಸುವುದು ಕ್ಷುದ್ರತನವಾಗುತ್ತದೆ ಎಂದಿದ್ದಾರೆ.

ಮುಪ್ಪಿನ ಷಡಕ್ಷರಿಯವರು ಮಡಿ ಮೈಲಿಗೆ, ಜಾತಿ-ಕುಲ, ಆಚಾರ-ವಿಚಾರಗಳ ಬಗ್ಗೆ ತಮ್ಮ ತತ್ವಪದದಲ್ಲಿ ವಿರೋಧ ವ್ಯಕ್ತಪಡಿಸಿದ್ದಾರೆ.

"ಕುರಿಯ ಕಾಯುತಿರಲಿ
ಕರುವ ಕಾಯುತಿರಲಿ
ಕೆರವ ಹೊಲಿಯುತಿರಲಿ ಅವರು ಲಿಂಗವಂಗದಿ
ಧರಿಸಿ ಭಸಿತವಕ್ಷಮಾಲೆ
ಇರಲು ಶಿವನ ಸಮವದೆಂದು
ಅರಿದು ಶರಣು ಮಾಡುತಿರ್ಪುದೆಂದಿಗಪ್ಪದೋ"6

ಎನ್ನುತ್ತಾ ಮೇಲು ಕೀಳಿನ ಭ್ರಮೆಯಲ್ಲಿ ಬಿದ್ದು ಜಾತಿ ಭೇದ

ಮಾಡುವ ಜನರಿಗೆ ಬುದ್ಧಿಮಾತು ಹೇಳಿದ್ದಾರೆ.

ಶಂಕರಾನಂದ ಶಿವಯೋಗಿಗಳು ಜ್ಞಾನ ಮಾರ್ಗದಲ್ಲಿ ನಡೆಯುವವರಿಗೆ ಜಾತಿ-ಮಡಿ-ಮೈಲಿಗೆಗಳು ಕಿಂಚಿತ್ತೂ ಇಲ್ಲವೆನ್ನುತ್ತಾ, ವಿಶ್ವವಿಶಾಲ ದೃಷ್ಟಿಯನ್ನು ತಮ್ಮ ತತ್ವಪದಗಳಲ್ಲಿ ಮೆರೆದಿದ್ದಾರೆ.

"ನಮ್ಮ ಕುಲ ಮೇಲೆನುತ ವಂದಿಸಿ
ನಿಮ್ಮ ಕುಲ ಕೀಲೆನುತ ನಿಂದಿಸಿ
ಇಲ್ಲ ಜಾತಿಯು ಸ್ವರ್ಗ, ನರಕದೊಳು
ಇಲ್ಲ ಜಾತಿಯು ತೀರ್ಥಕ್ಷೇತ್ರದೊಳು
ಜಾತಿ ಜೀವಿಗಳಿಂದ ನಿರ್ಮಿತವು"7

ಹುಟ್ಟಿನಿಂದ ಕುಲವನ್ನು ನಿರ್ಧರಿಸಿ ಉತ್ತಮ, ಅದಮ ಎಂದು ತೀರ್ಮಾನಿಸಿ ಕೆಲವರನ್ನು ಅಸ್ಪೃಶ್ಯರಂತೆ ಕಾಣುವುದನ್ನು ಶಿವಯೋಗಿಗಳು ಕಟುವಾಗಿ ಟೀಕಿಸಿದ್ದಾರೆ. ಖೈನೂರ ಕೃಷ್ಣಪ್ಪನು ತನ್ನ ತತ್ವಪದದಲ್ಲಿ

"ಎಲ ಎಲ ಎಲ ಹುಟ್ಟಿ ಏನು ಪಡದಿ
ನಿನ್ನ ನೆಲಿ ತಿಳಿಯದೆ ಸುಳ್ಳೆ ದಿನಗಳದಿ
ಕುಲ ಚಲದೊಳು ಬಂದು ಬಲು ಉರದಿ
ಮುಂದ ಯಮಕೊಲಿ ಆದೋ ನಿನ್ನ ಹಣೆಬರದಿ
ಬದುಕಿನಲ್ಲಿ ಹುಟ್ಟಿದ ಮೇಲೆ ಏನನ್ನು ಪಡೆದೆ ?"8

ನಿನ್ನ ಬದುಕಿನ ಪರಿಕಲ್ಪನೆಯನ್ನು ಅರಿಯದೆ ಸುಳ್ಳುದಿನಗಳನ್ನು ಕಳೆದೆ. ಜಾತಿ, ಕುಲ ಮತ್ತು ಒಣ ಅಹಂಕಾರದಲ್ಲಿ ಮೆರೆದು ಉರಿದುಹೋದೆ. ಜೀವನದ ಪ್ರಮುಖ ನಿಲುವು ತಿಳಿಯದೆ ಯಮನ ಪಾಶಕ್ಕೆ ಬಲಿಯಾಗುವ ಪರಿಯನ್ನು ಬದುಕಿನಲ್ಲಿ ಕಂಡುಕೊಳ್ಳುವ ನಿಲುವು ಬಹಳ ಮುಖ್ಯ ಎಂಬುದು ಇಲ್ಲಿನ ವಿಚಾರವಾಗಿದೆ. ಬದುಕಿನ ಡೋಲಾಯಮಾನದ ಸ್ಥಿತಿರೂಪದ ಚಿತ್ರಣದೊಂದಿಗೆ ಜಾತಿ, ವರ್ಣ ಪರಂಪರೆಯ ಕಲ್ಪನೆಯ ಸೂಕ್ಷ್ಮ ವಿರೋಧ, ಖಂಡನೆ ಇಲ್ಲಿರುವುದು ತೋರುತ್ತದೆ.

ದೇವದಾಸಿ ಪದ್ಧತಿ ಜಾತಿಪದ್ಧತಿಯಷ್ಟೆ ಕ್ರೂರವಾಗಿದ್ದು, ಭಾರತೀಯ ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾಗಿದೆ. ಇದಕ್ಕೆ ಸಂಪ್ರದಾಯ ಮತ್ತು ಆಚರಣೆಗಳೇ ತಳಹದಿಯಾಗಿದೆ. ಇದು ಕೆಳಗಿನ ಜಾತಿಯ ಅಬಲೆಯರನ್ನು ಬಹಿರಂಗ ಲೈಂಗಿಕತೆಗೆ ದಾರಿ ಮಾಡುವುದರ ಮೂಲಕ ಆಕೆಯ ಮನಸ್ಸನ್ನು ವಿಕೃತಗೊಳಿಸುವಂಥಾಗಿದೆ. ದೇವರ ದಾಸಿಯನ್ನಾಗಿಸಿ ಮೇಲಿನವರ ಜನತೆಗೆ ಭೋಗದ ವಸ್ತುವನ್ನಾಗಿಸುವ ಅನಿಷ್ಟ ಪದ್ಧತಿಯಾಗಿದೆ.

"ವೇಶ್ಯೆ ಸ್ತ್ರೀಯರ ಆಶದ ಬಲಿಯಲ್ಲಿ
ದಾಸನಾಗಿ ಕಾಲ ಕಳೆಯುವುದು
ನೀತಿ ಸಮಾಜದ ತತ್ವವು ತಿಳಿಯದೆ
ದಲಿತರ ದೂರ ಸರಿ ಎನ್ನುವರು"9

ಇಲ್ಲಿ ಆಕೆಯನ್ನು ಅನುಭವಿಸುವಾಗ ಮುಟ್ಟು ತಟ್ಟು ಎಂದು ಪರಿಗಣಿಸದೆ, ಬಳಸಿ ಮುಪ್ಪಿನ ಕಾಲಕ್ಕೆ ಆಕೆಯನ್ನು ತಿರಸ್ಕರಿಸಿ ದಲಿತಳೆಂಬ ಹಣೆಪಟ್ಟಿ ಕಟ್ಟುವುದರ ಮೂಲಕ ಮೇಲ್ವರ್ಗದ ಜನ ನಿರಾಕರಿಸುವುದನ್ನು ಖೈನೂರು ಕೃಷ್ಣಪ್ಪ ಟೀಕಿಸಿದ್ದಾರೆ.

ನಮ್ಮ ದೇಶದಲ್ಲಿ ಜಾತಿ-ಜಾತಿಗಳ ನಡುವೆ ಕುಲ-ಕುಲ ಬಾಂಧವರ ನಡುವೆ ದುಷ್ಟಶಕ್ತಿಗಳು ಕಲಹವನ್ನು ಎಬ್ಬಿಸುತ್ತಿವೆ. ಇದನ್ನು ಕಂಡ ತತ್ವಪದಕಾರ ಕ್ವಾನಳ್ಳಿ ಹೊನ್ನಪ್ಪ ಮಹಾರಾಜರು ಒಂದು ಜಾತಿಗೆ ಇನ್ನೊಬ್ಬ ಜಾತಿಯವನನ್ನು ಗುಲಾಮನನ್ನಾಗಿ ಜೀತಗಾರನನ್ನಾಗಿ ಮಾಡಿಕೊಂಡು ಹಿಂಸಿಸುವುದನ್ನು ವಿರೋಧಿಸುತ್ತಾರೆ.

"ಜಾತಿಗೆ ಜೀತನಾಗಿ
ಜ್ಯೋತಿ ಕಂಡನಯೋಗಿ
ನಿಜನಾಂದಲ್ಲಿ ಜನಿಸಿದ್ದೇವೋ
ನಮಗೆಲ್ಲಿ ಕುಲವೂ"10

ಮಾನವ ಕುಲವೆಲ್ಲವೂ ಒಂದೇ ಎಂದು ಬೋಧಿಸುತ್ತಾ ಅಂತರಂಗದಲ್ಲಿ ಅಡಗಿರುವ ಜಾತಿಯ ಮರ್ಮವನ್ನು ವಿರೋಧಿಸುತ್ತಾರೆ. ಈ ಜಾತೀಯತೆಯಿಂದಾಗಿ ರಾಜಕೀಯ ಹಾಗೂ ಧಾರ್ಮಿಕವಾಗಿ ಅದೋಗತಿಗೆ ಹೋಗುತ್ತಿರುವುದನ್ನು ಕಂಡ ಕಲ್ಯಾಣಿ ಮಾಸ್ತರರು ಹೀಗೆ ಅಭಿಪ್ರಾಯಪಟ್ಟಿದ್ದಾರೆ.

"ಜನರಲ್ಲಿ ಹೆಚ್ಚಾಯಿತೆ ಜಾತಿಭೇದ
ಸ್ವಾತಂತ್ರ್ಯ ಸಿಕ್ಕು ಏನು ಫಲವಾದ
ರಾಜಕೀಯ ಧಾರ್ಮಿಕ ಆಧ್ಯಾತ್ಮದ
ಅನುಭವವಿಲ್ಲೋ ಅಧೋಗತಿ ದೇಶದೊ"11

ಎನ್ನುತ್ತಾರೆ. ತಲತಲಾಂತರದಿಂದಲೂ ನಡೆದುಬಂದ ಕುಲಕಲಹದಿಂದ ಹೊಡೆದಾಡುವ ಈ ದೇಶದ ಮೇಲ್ವರ್ಗದವರು ಅಸ್ಪೃಶ್ಯರನ್ನು ಹೀನವಾಗಿ ಕಂಡು ಹಿಂದುಳಿದ ರಾಷ್ಟ್ರವಾಗಿಯೇ ಉಳಿದಿದೆ. ಈ ವ್ಯವಸ್ಥೆಯ ಕುರಿತಾಗಿ ಈ ರೀತಿ ವಿಡಂಬಿಸಿದ್ದಾರೆ.

"ಕಲಿಯುಗದೊಳಗಿನ ಕಲಹದ ಕೇಳಿರಿ
ಕುಲ ಕುಲ ಎನ್ನುವ ಕಾಲವನು
ಕುಲ ಕುಲ ಎನ್ನುತ ಬಲೆಯಲ್ಲಿ ಬೀಳುತ
ಹೊಲೆಹೊಲೆಯ ಎನ್ನುತ ಹಿಂದುಳಿಯಿತು"12


ಜಾತಿ ಎಂಬ ಅಂಧಕಾರದಲ್ಲಿ ಮುಳುಗಿ ಇನ್ನೂ ಹಿಂದೆ ಉಳಿದ ಭಾರತದ ಸ್ಥಿತಿಯನ್ನು ಕಂಡು ಮರುಗಿದ್ದಾರೆ.

ಜಾತಿಯೆಂಬ ಕಲ್ಪನೆ ಸಮಾಜಕ್ಕೆ ಮಾರಕವಾಗಿ ಜಾತಿಯ ಜ್ವಾಲೆ ಸಾಮಾಜಿಕ ರೀತಿ-ನೀತಿಗಳನ್ನು ದಹಿಸಿ ಪರಸ್ಪರರಲ್ಲಿ ಭೀತಿಯನ್ನು ಹುಟ್ಟುಹಾಕುತ್ತಲೇ ಬಂದಿದೆ. ಕುಡಿಯುವ ನೀರು, ಬೀಸುವ ಗಾಳಿ, ಸುಡುವ ಅಗ್ನಿ ಜಗತ್ತಿಗೆ ಒಂದೇ ಆದರೂ ಇದನ್ನು ಮರೆಮಾಚಿ ಕುಲವನ್ನು ಎಣಿಸುವ ಜನತೆಗೆ ಸರ್ವಜ್ಞನನು ವಿಡಂಬಿಸಿದಂತೆಯೇ ಕಲ್ಕಂಬರುಕುಮ್ದ್ದೀ ಸಾಬನು ಜಾತಿ-ಜಾತಿಗಳ ಒಳಗೊಳಗಿರುವ ವಿಷಮತೆಯನ್ನು ತೊಲಗಿಸಲು ಹಾಗೂ ಭೇದವನ್ನು ಅಳಿಸಲು ಪ್ರಯತ್ನಿಸಿದ್ದಾನೆ. ಅದನ್ನು ಅವನ ಅನೇಕ ತತ್ವಪದಗಳಲ್ಲಿ ಗುರುತಿಸಬಹುದು.

"ಮುಟ್ಟುಮುಟ್ಟು ಅನ್ನಬೇಡ್ರಿ ಕಿಟ್ಟುಪುಟ್ಟು
ಮುಟ್ಟಿನೊಳಗ ಹುಟ್ಟಿಬಂದ್ರಿ ಕಿಟ್ಟುಪುಟ್ಟು
ಹುಟ್ಟಿನೊಳಗ ಮುಟ್ಟು ಅದ ಕಿಟ್ಟುಪುಟ್ಟು
ಮುಟ್ಟಿನೊಳಗ ಹುಟ್ಟು ಅದ ಕಿಟ್ಟುಪುಟ್ಟು"13

ಎನ್ನುವ ರುಕ್ಮುದ್ದೀನ್ ಸಾಬನು ಜನಮಾನಪದಲ್ಲಿನ ವಿರಸ, ಜಾತೀಯತೆ, ಮಡಿ-ಮೈಲಿಗೆಯಂತಹ ಆಚರಣೆಯನ್ನು ನಿಂದಿಸಿದ್ದಾನೆ. ಮುಂದುವರಿದು,

"ಎಲ್ಲರೂ ಹುಟ್ಟೋದು ಒಂದೇಜಾಗ
ಎಲ್ಲರೂ ಬದುಕೋದು ಒಂದೇಜಾಗ
ಎಲ್ಲಿಂದ ಬಂತು ಕೆಳಗ ಮ್ಯಾಗ
ಎಲ್ಲಾ ಒಂದೇ ಒಳಗ-ಹೊರಗ"14



ಹಾಗಾಗಿ ಮೇಲು-ಕೀಳು, ಉಚ್ಚ-ನೀಚ ಭಾವವನ್ನು ಬಿಟ್ಟು ಸಾಮರಸ್ಯದ ಬದುಕು ಸಾಗಿಸಬೇಕು ಎನ್ನುತ್ತಾರೆ.

ಶಿಶುನಾಳ ಶರೀಫರಂತು ಜಾತಿಭೇದ ಮಾಡುವವರನ್ನು ಕಂಡು ಅವರ ಮುಖಕ್ಕೆ ಹೊಡೆದಂತೆ ಅವರೆಲ್ಲರ ಹುಟ್ಟಿನ ಗುಟ್ಟನ್ನು ತಮ್ಮದೊಂದು ತತ್ವಪದದಲ್ಲಿ, ಭೂಮಿಯ ಮೇಲೆ ಹುಟ್ಟುವ ಪ್ರತಿಯೊಬ್ಬ ಮಾನವನು ತೊಗಲಮೊಲೆಯ ಹಾಲು ಕುಡಿದು ಬೆಳೆದರೂ ಶೀಲ ಮಾಡುವುದನ್ನು ನೋಡಿ ಅಣಕಿಸಿದಾರೆ.

"ತೊಗಲಮಲಿ ಹಾಲು ಕುಡಿದು ದೊಡ್ಡವರಾಗಿ
ಶೀಲಮಾಡತಿರಿ ನಾಡೆಲ್ಲ...!
ನಾ ಆದರೇನು ನೀ ಆದರೇನು
ಗಂಧ ವಿಭೂತಿ, ತೊಗಲಿಗೆ ಧರಿಸಿ
ಜಾತಿ ಜಾತಿ ಬ್ಯಾರೆಯೆನಿಸಿ"15

ತೊಗಲಿನಗೂಡು ಎಂದು ಶರೀರವನ್ನು ಹಗುರವಾಗಿ ನಿಂದಿಸಿ, ಎಲ್ಲರೂ ಅದರೊಳಗಿಂದ ಬಂದವರೇ. ಅದರ ಹಾಲು ಕುಡಿದು ಬೆಳೆದವರೆ, ಹೀಗಿರುವಾಗ ಮೇಲು-ಕೀಳಿನ ಭಾವನೆಯೇಕೆ? ಎಂದು ಪ್ರಶ್ನಿಸುತ್ತಾನೆ. ಹಾಗೆಯೇ ನಾ ಆದರೇನು? ನೀ ಆದರೇನು? ಎಂಬ ಶರೀಫನ ಪ್ರಶ್ನೆ ಬ್ರಾಹ್ಮಣರಾದರೇನು ಅಸ್ಪೃಶ್ಯರಾದರೇನು ಎಲ್ಲರೂ ಒಂದೇ, ಎಲ್ಲರೂ ಆ ತೊಗಲಿನ ಶರೀರದಿಂದ ಬಂದವರು. ಎಲ್ಲಾ ಜಾತಿ ಒಂದೇ ಎಂದು ಹೇಳಿ ಸಾಮಾಜಿಕ ಸಮಾನತೆಯನ್ನು ಸಾರಿದ್ದಾರೆ.


"ಬೋಕಿಯೊಳಗ ಮೂರು ಲೋಕ ಹುಟ್ಟಿತೋ
ಆ ಕುಲ ಈ ಕುಲ ಎಲಿತ್ತೋ.."16

ಎನ್ನುತ್ತಾ ಎಲ್ಲಾ ಮಾನವರು ಯೋನಿಯಿಂದಲೇ ಬಂದವರು. ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಈ ರೀತಿ ಮನುಷ್ಯ ಮನುಷ್ಯರ ನಡುವೆ ವಾಸ್ತವಿಕ ಸಮಾನತೆಯಿರುವಾಗ ಮಡಿ ಮೈಲಿಗೆ ಎಲ್ಲಿಂದ ಬರುತ್ತದೆ? ಎಂದು ಪ್ರಶ್ನಿಸುತ್ತಾನೆ. ಮಾನವರೆಲ್ಲ ಸಮಾನರು, ಅದನ್ನು ಮರೆತು ನನ್ನ ಜಾತಿ ದೊಡ್ಡದು ಇತರರು ಕೀಳು ಎಂಬ ಕೆಟ್ಟ ಭಾವನೆ ಸರಿಯಲ್ಲ ಎಂದು ಹೇಳಿ ಇಂತಹ ತಾರತಮ್ಯ ನಿವಾರಿಸಲು ಶರೀಫರು ಪ್ರಾಮಾಣಿಕ ಪ್ರಯತ್ನ ನಡೆಸಿರುವುದು ಗೋಚರಿಸುತ್ತದೆ.

ರಸ್ತಾಪುರದ ಭೀಮಕವಿ ಕೆಳಸ್ತರದಲ್ಲಿ ಜನಿಸಿ ಜಾತಿ ಶೋಷಣೆಯನ್ನು ಅನುಭವಿಸಿದವನು. ಅವನ ತತ್ವಪದವನ್ನು ಗಮನಿಸಿದಾಗ ಜಾತಿಕಲ್ಪನೆಯ ಬಗ್ಗೆ ಅವನಿಗಿದ್ದ ಅಭಿಪ್ರಾಯ ವ್ಯಕ್ತವಾಗುತ್ತದೆ.

"ಜಾತಿಸೂತಕವಿಡಿದೇತಕೆ ಬಳಲುವಿ
ಜಾತಿ ನಿಬಂಧದ ಮಾತಿಲ್ಲ ಜ್ಞಾನದಿ
ಆತ್ಮವನರಿಯದ ಪಾತಕಿಗಳು ಕೂಡಿ
ಜಾತಿಕಲ್ಪನೆಯಳಿದು ಹೋದಂತಹ
ದಾತಗೆ ಜಾತಿಯ ಸೂತಕವುಂಟೆ?"17

ಅಜ್ಞಾನಿಗಳು ಜಾತಿ ಸೂತಕದಿಂದ ಬದುಕುತ್ತಾರೆ. ಜ್ಞಾನಿಯಾದವನಿಗೆ ಯಾವುದೇ ಜಾತಿ ಸೂತಕವಿಲ್ಲ ಎಂದು ಭೀಮಕವಿ ವಿವರಿಸಿದ್ದಾನೆ. ಎಲ್ಲ ಮನುಜರು ಸೂತಕ ಯೋನಿಯಲ್ಲಿ ಹುಟ್ಟಿಬಂದಿರುವ ಮರ್ಮ ತಿಳಿಯದೆ ಗೋತ್ರಾದಿ ಕುಲಛಲವನ್ನಾರಿಸಿ ನರಕಕ್ಕೆ ಬೀಳುವರು ಎಂದಿದ್ದಾನೆ.



'ತತ್ವಪದಕಾರರು ಎಲ್ಲಾ ಜಾತಿಯ ಮರಗಳ ಕಾಡು ಇದ್ದಂತೆ'18 ಎನ್ನುವ ಮಾತು ಅರ್ಥವತ್ತಾಗಿದೆ. ಇವರಿಗೆ ನಿರ್ದಿಷ್ಟವಾದ ಜಾತಿಯಿಲ್ಲ ಧರ್ಮವಿಲ್ಲ, ಎಲ್ಲರೂ ಒಂದೇ. ಅವರು ನಾನಾ ವಿಧದ ಸ್ತರಗಳಿಂದ ಜಾತಿಗಳಿಂದ ಬಂದವರು. ಕುಲಧರ್ಮಗಳನ್ನು ಮೀರಿನಿಂತವರು. ಯಾವುದೇ ಧರ್ಮತತ್ವಗಳಿಗೆ ಕಟ್ಟುಬಿದ್ದು ತತ್ವಪದಗಳನ್ನು ರಚಿಸಲಿಲ್ಲ. ಸಮಾಜ ಕಲ್ಯಾಣಕ್ಕಾಗಿ ಕಟ್ಟಿದ ಅವರ ಪದಗಳು ಒಂದು ಸಂಸ್ಕೃತಿಯಾಗಿ, ವಿನೂತನ ಪರಂಪರೆಯಾಗಿ ನಮ್ಮಲ್ಲಿ ಉಳಿದುಬಂದಿದೆ. ಇವು ಮನುಷ್ಯನ ಮನಸ್ಸಿನಲ್ಲಿ ಕುದಿಯುತ್ತಿರುವ ಸ್ವಾರ್ಥದ ಮನಸ್ಸಿನ ವಿರುದ್ಧ ಅಂತರಂಗದ ಹೋರಾಟ ನಡೆಸಿವೆ.

ಭಾರತೀಯ ಸಂದರ್ಭದಲ್ಲಿ ಅಂದಿನಿಂದ ಇಂದಿನವರೆವಿಗೂ ವರ್ಣಭೇದ, ಲಿಂಗಭೇದ, ಮೇಲು-ಕೀಳು ಎಂಬ ತಾರತಮ್ಯ ತಾಂಡವವಾಡುತ್ತಿದೆ. ಮತೀಯ ವಾದ ತುಂಬಿ ತುಳುಕುತ್ತಿದೆ. ಇನ್ನೊಂದೆಡೆ ಮತಾಂಧರು, ಧರ್ಮಾಂಧರು ಸಮಾಜಕ್ಕೆ ಕಂಟಕಪ್ರಾಯರಾಗಿ ಬೆಳೆಯುತ್ತಿದ್ದಾರೆ. ಹೀಗಾಗಿ ಜನ ಸಾಮಾನ್ಯರ ಬದುಕು ದುಸ್ತರವಾಗಿದೆ. ಜಾತಿ-ಮತಗಳ ಗೋಡೆಗಳು ನಿರ್ಮಾಣವಾಗಿ ಮನುಷ್ಯ ಮೃಗವಾಗುತ್ತಿದ್ದಾನೆ. ಇಂಥಹ ಸಾಮಾಜಿಕ ಸಂದರ್ಭದಲ್ಲಿ ವೈದಿಕ ಪರಂಪರೆಗೆ ಕೊಡಲಿಪೆಟ್ಟು ನೀಡುವ ತತ್ವಪದಕಾರರ ಪದಗಳು ಕುಲ-ಜಾತಿ ಅಸ್ಪೃಶ್ಯತೆಯನ್ನು ವಿರೋಧಿಸುತ್ತದೆ. ಗಂಡು ಹೆಣ್ಣಿನ ಸಮಾಗಮದ ಮೂಲಕ ಮತ್ತೊಂದು ಜೀವವು ಸೃಷ್ಟಿಯಾಗುತ್ತದೆ. ಆದ್ದರಿಂದ ಹುಟ್ಟುವಾಗಲೇ ಅಪವಿತ್ರವಾಗಿರುವ ಜೀವಿ ಮೇಲು-ಕೀಳು ಎಂದು ವಾದಿಸುವುದರಲ್ಲಿ ಅರ್ಥವಿಲ್ಲವೆಂದು ಸಾರಿದೆ. ಸಮಾನತೆಯ ತತ್ವಕ್ಕೆ ಒತ್ತು ನೀಡುವ, ಜಾತಿಬೀಜವನ್ನು ಬಿತ್ತುವವರನ್ನು ಕಂಡು ಕೆಂಡ ಕಾರುವ ತತ್ವಪದಕಾರರು ಇಂದು ನಮಗೆ ಸರಿಯಾದ ಮಾರ್ಗವನ್ನು ತೋರಿಸಬಲ್ಲವರಾಗಿದ್ದಾರೆ. ನೀತಿಯ ಮಾತುಗಳನ್ನು ಹೇಳಿ, ಸಮಾನತೆ ಹಾಗೂ ಸೌಹಾರ್ದತೆಯ ಪಾಠಗಳನ್ನು ಕಲಿಸಿ ಮನುಷ್ಯನಿಗೆ ಬಿಡದೆ ಅಂಟಿಕೊಂಡಿರುವ ಜಾತಿಯ ಕವಚವನ್ನು ಕಿತ್ತೊಗೆಯುವವರಾಗಿದ್ದಾರೆ.

ಅಡಿ ಟಿಪ್ಪಣಿಗಳು

1. ಡಾ.ವ್ಹಿ.ಜಿ.ಪೂಜಾರ, ನಡುಗನ್ನಡ ಸಾಹಿತ್ಯ, ಪುಟ-22, 2008.
2. ಡಾ.ಶಾಂತಪ್ಪ ಟಿ.ಗುರೋಡೆ, ಗುಲಬರ್ಗಾ ಜಿಲ್ಲೆಯ ತತ್ವಪದಕಾರರು, ಪುಟ-91, 2010.
3. ಶಿವರಾಜ ಪಾಟೀಲ್, ಮಹಾಜ್ಞಾನಿ ಕಡಕೋಳ ಮಡಿವಾಳರು, ಪುಟ-76, 1991.
4. ಡಾ.ವ್ಹಿ.ಜಿ.ಪೂಜಾರ, ನಡುಗನ್ನಡ ಸಾಹಿತ್ಯ, ಪುಟ-28, 2008.
5. ಎನ್.ಜಿ.ಸ್ವಾಮಿ (ಸಂ) ಕೂಡಲೂರು ಬಸವಲಿಂಗಪ್ಪ, ಪುಟ-42, 1996.
6. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಸಂ) ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು, ಪುಟ-110, 1998.
7. ಡಾ.ವ್ಹಿ.ಜಿ.ಪೂಜಾರ, ನಡುಗನ್ನಡ ಸಾಹಿತ್ಯ, ಪುಟ-79, 2008.
8. ಮೀನಾಕ್ಷಿ ಬಾಳಿ (ಸಂ), ಖೈನೂರ ಕೃಷ್ಣಪ್ಪ, ಪುಟ-13, 1998.
9. ಮಲ್ಲಿಕಾರ್ಜುನ ಸಾಬ : ಗುಲಬರ್ಗಾ ಜಿಲ್ಲೆಯ ದಲಿತ ತತ್ವಪದಕಾರರು, ಪುಟ-187, 2002.
10. ಅದೇ, ಪುಟ -85.
11. ಅದೇ, ಪುಟ-110.
12. ಅದೇ, ಪುಟ-106.
13. ಬಸವರಾಜ ಸಬರದ, ಹೈದರಬಾದ್ ಕರ್ನಾಟಕದ ತತ್ವಪದಗಳು, ಪುಟ-76, 2000.
14. ರುಕ್ಮುದ್ದೀನ ಸಾಬ, ಜ್ಞಾನ ಜ್ಯೋತಿ ತತ್ವಪದಗಳು, ಭಾಗ-2, ಪುಟ-52, 1988.
15. ಡಾ.ಶಿವಾನಂದ ಗುಬ್ಬಣ್ಣನವರ (ಸಂ), ಶಿಶುನಾಳ ಶರೀಫರ ಗೀತೆಗಳು, ಪುಟ-52, 1988.
16. ಅದೇ, ಪುಟ-52.
17. ಡಾ.ಜಿ.ನಾರಾಯಣಸ್ವಾಮಿ, ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ : ಒಂದು ಅಧ್ಯಯನ, ಪುಟ-179, 2008.
18. ಕನ್ನಡ ತತ್ವಪದಕಾರರು (ವಿವಿಧ ಲೇಖಕರ ಲೇಖನಗಳ ಸಂಕಲನ) ಪ್ರೊ. ಎಚ್.ಎಸ್.ಶಿವಪ್ರಕಾಶ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಗೋಕಲ್ಲು

• ಎನ್.ಗೋವಿಂದಪ್ಪ

ಗ್ರಾಮೀಣ ಭಾರತದ ರೈತನ ನಿಕಟವರ್ತಿ ಗೋವು. ಆದ್ದರಿಂದಲೇ ಗೋವುಗಳನ್ನು ತನ್ನ ಬಹುಪಯೋಗಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾನೆ. ಪೂಜ್ಯ ಸ್ಥಾನದಲ್ಲಿಯೂ ಇಟ್ಟಿದ್ದಾನೆ. ಗೋವಿನಲ್ಲಿ ಕೋಟ್ಯಾನು-ಕೋಟಿ ದೇವತೆಗಳು ವಾಸವಾಗಿದ್ದಾರೆ, ಗೋವೆಂದರೆ ಕಾಮಧೇನು, ಗೋವಿನ ಹಾಲು ಅಮೃತ ಎಂದು ನಂಬಿದ್ದಾನೆ. ಹಾಗಾಗಿಯೇ ನಮ್ಮ ಪುಣ್ಯಕೋಟಿಯ ಕತೆ ಕನ್ನಡನಾಡಿನ ಮನೆ-ಮನೆಯ ಕತೆಯಾಗಿದೆ. ನಾಗರಿಕತೆಯ ಪ್ರಾರಂಭದಲ್ಲಿ ಗೋವು-ಎತ್ತುಗಳನ್ನು ಪಶುಪತಿ ಎಂಬ ಹೆಸರಿನಿಂದ ಪೂಜಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಗೋಮಹಾಲಕ್ಷ್ಮಿ ಗೋಮಾತೆಯನ್ನು ಪೂಜಿಸುವುದರಿಂದ ಅಭಿವೃದ್ಧಿ ಹೋಂದುತ್ತೇವೆ ಕಾರ್ಯಸಿದ್ಧಿಯಾಗುತ್ತದೆ ಎಂಬ ನಂಬಿಕೆಯಿದೆ. ಅವುಗಳನ್ನು ಪಳಗಿಸಿ ಕೃಷಿ ಕಾರ್ಯಗಳಲ್ಲಿ ಬಳಸಿಕೊಳ್ಳುತ್ತಾ ಬಂದಿದ್ದಾರೆ. ಗೋವುಗಳಿಂದ ಪ್ರಯೋಜನ ಪಡೆದ ಮಾನವ ಅವು ಇಹಲೋಕ ತ್ಯಜಿಸಿದಾಗ ಸೂಕ್ತ ರೀತಿಯಲ್ಲಿ ಮಣ್ಣು ಮಾಡಿ ಮನುಷ್ಯರಿಗೆ ಮಾಡುವಂತೆ ಅಂತಿಮ ಕ್ರಿಯಾದಿಗಳನ್ನು ಮಾಡುವುದರ ಮೂಲಕ ಅದರ ಋಣವನ್ನು ತೀರಿಸಲು ಮುಂದಾಗುತ್ತಾನೆ. ಹಾಗೇ ಮಾಡಿದುದರ ಕುರುಹಾಗಿ ಗೋಕಲ್ಲುಗಳನ್ನು ನೆಟ್ಟು ಅವುಗಳಿಗೆ ನಡೆದುಕೊಳ್ಳುತ್ತಾನೆ. ಗೋವುಗಳಿಂದ ಮನುಷ್ಯರಿಗೆ ಆಗುತ್ತಿರುವ ಪ್ರಯೋಜನವನ್ನು ಕುರಿತು ಹೇಳುವ ಎಸ್.ಜಿ. ನರಸಿಂಹಾಚಾರ್ ರವರು ಅವರ ಗೋವಿನ ಚರಿತ್ರೆಯಲ್ಲಿ "ನೀನಾರಿಗಾದೆಯೋ ಎಲೆ ಮಾನವ?" ಎಂದು ಕೇಳಿರುವದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕಟ್ಟಿದ್ದ ಕಣ್ಣಿಯನು ಬಿಚ್ಚಿಕೊಳ್ಳಲು ಅರಿಯೆ
ಹಾಯೆ ಹರಿಗೋಲಾದೆ, ರಾಯ ಬೇರಿಗೆಯಾದೆ
ಹೊಟ್ಟೆಗೆ ಬೇಕೆಂದು ಕೇಳಲರಿಯೆ
ರಾಯರಾ ಕಾಲಿಗೆ ಮುಳ್ಳೊತ್ತು ಆದೆ
ಪುಟ್ಟಕರು ಇಲ್ಲದಿರೆ ಕರೆದು ತಾರೆನಲರಿಯೆ
ಆಯವರಿತು ನುಡಿಯೆ ಮಧುರಗಾನಕ್ಕಾದೆ
ನೀನಾರಿಗಾದೆಯೋ ಎಲೆ ಮಾನವ
ನೀನಾರಿಗಾದೆಯೋ ಎಲೆ ಮಾನವ
ಹರಿ ಹರಿ ಗೋವು ನಾನು

ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ
ದೇಹಶುದ್ದಿಗೆ ನಾನು ಪಂಚಗವ್ಯವನೀವೆ
ಸುಟ್ಟರೆ ನೊಸಲಿಗೆ ವಿಭೂತಿಯಾದೆ
ವಾಹನಕೆ ಆಗುವನು ಎನ್ನ ಮಗನು
ತಟ್ಟದೇ ಹಾಕಿದರೆ ಮೇಲು ಗೊಬ್ಬರವಾದೆ
ಊಹೆಗಸದಳವಹುದು ನನ್ನ ಉಪಕಾರಗಳು
ನೀನಾರಿಗಾದೆಯೋ ಎಲೆ ಮಾನವ
ನೀನಾರಿಗಾದೆಯೋ ಎಲೆ ಮಾನವ

ಹಾಲಾದೆ ಕರೆದರೆ, ಮೊಸರಾದೆ ಹೆತ್ತರೆ
ಉಳುವೆ ಭೂಮಿಯನು ಹೊರುವೆನಾ ಹೇರನ್ನು
ಮೇಲ್ಗೆನೆಯ ಕಡೆದರೆ ಬೆಣ್ಣೆಯಾದೆ
ತುಳಿದು ಕಡ್ಡಿಯ ಕಾಳ ವಿಂಗಡಿಸುವೆ
ಮೇಲಾದ ತುಪ್ಪವು ನಾನಾದೆ ಕಾಸಿದರೆ
ಕಳಪೆಯಾಗಿಹ ನೆಲವ ನಗುವ ತೋಪನುಮಾಳ್ಪೆ
ನೀನಾರಿಗಾದೆಯೋ ಎಲೆ ಮಾನವ



ನೀನಾರಿಗಾದೆಯೋ ಎಲೆ ಮಾನವ

ಹಾದಿಬೀದಿಯಲಿರುವ ಕಸದ ಹುಲ್ಲನುಮೇದು
ಕರು ಸತ್ತ ಬೇಗೆಯಲಿ ನಾ ಬೆಯ್ಯುತಿದ್ದರೆ
ಬಂದು ಮನೆಗೆ ನಾನು ಅಮೃತವವೀವೆ
ಮರುಕವಿಲ್ಲದೆ ಸತ್ತ ಕರುವ ತಂದು
ಅದನುಂಡು ನನಗರಡ ಬಗೆವ ಮಾನವ
ತಿರುತಿರುಗಿ ಮುಂದಿಟ್ಟು ಹಾಲ ಕರೆವೆ ನೀನು
ನೀನಾರಿಗಾದೆಯೋ ಎಲೆ ಮಾನವ
ನೀನಾರಿಗಾದೆಯೋ ಎಲೆ ಮಾನವ

ಗೋಕಲ್ಲುಗಳನ್ನು ನೆಟ್ಟು ಸ್ಮರಿಸುವ ಎರಡು ಬಗೆಗಳನ್ನು ಈ ಭಾಗದಲ್ಲಿ ಕಾಣಬಹುದಾಗಿದೆ. ದೇವರಿಗೆಂದು ಹರಕೆಗೆ ಬಿಟ್ಟ ಹೋರಿ ಕರು ಊರೆಲ್ಲಾ ಅಡ್ಡಾಡಿಕೊಂಡು ಊರು ಬಸವಿಯಾಗಿ ಯಾರ ಹೊಲ ಮನೆಯೆನ್ನದೆ ಅಲೆದಾಡಿ ಬೀಡು-ಬೀಸಾಗಿ ಅಡ್ಡಾ-ದಿಡ್ಡಿಯಾಗಿ ಬೆಳೆದು ಮುದಿಯಾಗಿ ಒಂದು ದಿನ ಅವಸಾನ ಕಂಡಾಗ ಅದಕ್ಕೆ ಅಂತಿಮ ಸಂಸ್ಕಾರ ಮಾಡಿ ಅದರ ನೆನಪಿನಲ್ಲಿ "ಗೋಕಲ್ಲ"ನ್ನು ನೆಟ್ಟು ಪೂಜಿಸಿಕೊಂಡು ಬರುವ ವಾಡಿಕೆ ಇದೆ. ತಮ್ಮ ಮನೆಯ ದನಕರುಗಳಿಗೆ ಖಾಯಿಲೆ-ಕಸಾಲೆ ಬಂದಾಗ ಇಂತಹ ಗೋಕಲ್ಲು ಗಳಿಗೆ ಹರಕೆ ಹೊತ್ತು ನಡೆದುಕೊಳ್ಳಲಾಗುತ್ತದೆ. ವರ್ಷದ ಆರಂಭದ ದಿನಗಳಲ್ಲಿ ಭರಣಿ ಮಳೆ ಬಂದು ಹೊಲಗಳ ಉಳುಮೆ ಮಾಡಲು ಮೊದಲಿಟ್ಟಾಗ ಊರವರೆಲ್ಲ ಸೇರಿ ಗೋಕಲ್ಲಿಗೆ ಪೂಜಿಸಿ ಪಂಚಾಂಗದ ಅನುಸಾರ ಯಾವ ಬಣ್ಣದ ಎತ್ತು ಎಂದು ತಿಳಿದುಕೊಂಡು ಅಂತಹ ಬಣ್ಣದ ಎತ್ತುಗಳನ್ನು ಹೂಡಿ ಊರಿನ ಎಲ್ಲಾ ಹೊಲಗಳನ್ನು ಬಲಸುತ್ತಿನಿಂದ ಉಳುವಂತೆ ಬರಲಾಗುತ್ತಿತ್ತು. ಆ ಎತ್ತುಗಳು ಸುತ್ತಿ ಬರುವ ಹೊತ್ತಿಗೆ ಉಳಿದ ಊರಿನ ಎಲ್ಲಾ ಎತ್ತುಗಳು "ಮಾರಮ್ಮನ ಗುಡಿ ಹೊಲವನ್ನು" ಉಳುಮೆ ಮಾಡಿರುತ್ತಿದ್ದರು. ಇದು ಕೆಲವು ಹಳ್ಳಿಗಳಲ್ಲಿರುವ ಕೃಷಿ ಆರಂಭದಲ್ಲಿ ಕೈಗೊಳ್ಳುವ ಗೋಕಲ್ಲು ಪೂಜೆಯ ವೈಶಿಷ್ಟತೆ.

ಹಿಂದೆ ಪ್ರತಿಯೊಂದು ಗ್ರಾಮದ ಮನೆ-ಮನೆಯಲ್ಲಿಯೂ ಯಥೇಚ್ಛವಾಗಿ ಕರೆಯುವ ಹಸು, ಎಮ್ಮೆ, ಎತ್ತು, ದನಕರು, ಕುರಿ, ಮೇಕೆಗಳಿರುತ್ತಿದ್ದವು. ಈ ಎಲ್ಲಾ ಪಶು ಸಂಪತ್ತನ್ನು ಮನೆಯ ಸದಸ್ಯರೆ ನೋಡಿಕೊಳ್ಳಲು ಆಗುತ್ತಿರಲಿಲ್ಲ, ಹಾಗಾಗಿ ಊರ ದನಗಳನ್ನು ನೋಡಿಕೊಳ್ಳಲೆಂದೆ ದನಗಾಹಿಗಳಿರುತ್ತಿದ್ದರು. ಅವರಿಗೆ ಎರಡು ಹೊತ್ತು ಊಟ ಜೊತೆಗೆ ಕಾಸು-ಕಡಿ ಕೊಡಲಾಗುತ್ತಿತ್ತು. ಊರ ದನಗಳನ್ನು ಬೆಳಗಿನಿಂದ ಬೈಗಿನವರೆಗೆ ಗೋಮಾಳ, ಅಡವಿ, ಸರ್ಕಾರಿ ಜಾಗಗಳಲ್ಲಿ ಮೇಯಿಸಿಕೊಂಡು ಬರುವುದು ಇವರ ಕೆಲಸ. ಹಳ್ಳಿಗರು ಬೆಳಗ್ಗೆ ಹಾಲು ಕರೆದುಕೊಂಡು ದನಗಳು ಸೇರುವ ದನಮಂದೆಯ ಜಾಗಕ್ಕೆ ತಮ್ಮ ಮನೆಯ ದನಕರುಗಳನ್ನು ಹೊಡೆಯುತ್ತಿದ್ದರು. ಇಂಥ ದನಮಂದೆಗಳು ಸೇರುವ ಜಾಗದಲ್ಲಿ ಅಲ್ಲಲ್ಲಿ ಸುಮಾರು ಮೂರ್‍ನಾಲ್ಕು ಅಡಿಗಳ ಉದ್ದದ ನಿಲುವುಗಲ್ಲುಗಳನ್ನು ನಿಲ್ಲಿಸಲಾಗುತ್ತಿತ್ತು. ಇದನ್ನೇ "ಗೋಕಲ್ಲು"ಗಳೆಂದು ಕರೆಯಲಾಗುತ್ತದೆ. ತಮ್ಮ ಊರಿನ ಯಾವುದೆ ದನ, ಕರು, ಎತ್ತು ಕಾರಣಾಂತರಗಳಿಂದ ಮೃತಪಟ್ಟರೆ ಅಂತಹ ಗೋವುಗಳನ್ನು ಮಣ್ಣು ಮಾಡಿ ಆ ಜಾಗದಲ್ಲಿ ನಿಲುವುಗಲ್ಲುಗಳನ್ನು ನಿಲ್ಲಿಸಲಾಗುತ್ತಿತ್ತು. ಈ ಗೋಕಲ್ಲುಗಳಿಗೆ ದನಗಳು ಮೈ ತಿಕ್ಕಿಕೊಂಡಾಗ ರೋಗ-ರುಜಿನಗಳು ಬರುವುದಿಲ್ಲವೆಂಬುದು ಗ್ರಾಮೀಣರ ಬಲವಾದ ನಂಬಿಕೆ. ವರ್ಷದ ಸಂಕ್ರಾತಿ ಹಬ್ಬದಂದು ಕೂಡ ಸಿಂಗರಿಸಲ್ಪಟ್ಟ ದನಕರುಗಳಿಗೆ ಇಲ್ಲಿಯೇ ಪೂಜೆಗೈದು ಕಿಚ್ಚು ಹಾಯಿಸಲಾಗುತ್ತಿತ್ತು. ಗೋಕಲ್ಲನ್ನು ನೆಡುವುದು ಸಾರ್ಥಕ ಕೆಲಸವೆಂದು ರೈತಾಪಿ ವರ್ಗ ಭಾವಿಸಿ ನಡೆದುಕೊಳ್ಳುತ್ತಿತ್ತು. ಇತರೆ ಸೋಮಾರಿಗಳನ್ನು ಛೇಡಿಸುವಾಗ "ಗೊಡ್ಡು ಮೈ ಉಜ್ಜಿಕೊಳ್ಳಲು ಒಂದು ಕಲ್ಲನ್ನಾದರೂ ನೆಟ್ಟಿದ್ದಿಯೇನೊ" ಎಂದು ಸಾರ್ಥಕ ಬದುಕಿನ ಬಗ್ಗೆ ಕೇಳುತ್ತಿದ್ದರು. ದನಮಂದೆ ತಲುಪುವ ಬಾಯರಿಯದ ಗೋವುಗಳು ಮೆಲುಕು ಹಾಕಿಕೊಂಡು ಮೈಯನ್ನು ಗೋಕಲ್ಲುಗಳಿಗೆ ಉಜ್ಜಿಕೊಂಡು ನವೆ ಉರಿಗಳನ್ನು ಶಮನ ಮಾಡಿಕೊಳ್ಳುತ್ತಿದ್ದವು. ಅದಕ್ಕಾಗಿಯಾದರೂ ಗೋಕಲ್ಲನ್ನು ನೆಡಬೇಕೆಂದು ಹೇಳುತ್ತಿದ್ದರು. ಅಂದರೆ ಮನುಷ್ಯ ಮನುಷ್ಯನಿಗೆ ಏನೂ ಮಾಡದಿದ್ದರೂ ದನ-ಕರುಗಳು ಮೈಯುಜ್ಜಿಕೊಳ್ಳಲು ಗೋಕಲ್ಲನ್ನಾದರೂ ನೆಡಬೇಕು ಎಂಬುದೇ ಇದರ ಅರಿವು.

ಪ್ರಧಾನ ಸಂಪಾದಕರು :
ಕೋಟಿಗಾನಹಳ್ಳಿ ರಾಮಯ್ಯ
9945208725

ಲಿವಿಂಗ್ ಟೈಮ್ಸ್ ಬಳಗ
ಕಾರ್ಯನಿರ್ವಾಹಕ ಸಂಪಾದಕ
ಸಿ.ಜಿ ಲಕ್ಷ್ಮೀಪತಿ
ಬಿ.ಶ್ರೀಪಾದ ಭಟ್
ವಸು ಎಂ.ವಿ
ವಡ್ಡಗೆರೆ ನಾಗರಾಜಯ್ಯ
ಸುಮಾ ಬಿ.ಯು

ಡಾ. ಡಿ. ಡೊಮಿನಿಕ್
ಮಹದೇವಸ್ವಾಮಿ ಅಂಬಳೆ
ಗೋವಿಂದಪ್ಪ
ಕೆ.ಎಂ. ಭೈರಪ್ಪ
ರುದ್ರೇಶ್ ಅದಿರಂಗಿ
ಅದಿರಪ್ಪ

ವಿನ್ಯಾಸ
ಅರುಣ್ ಅಂಡ್ ಟೀಮ್

ಚಂದಾ ವಿವರ
ಬಿಡಿಪ್ರತಿ 10 ರೂ.
ದ್ವೈವಾರ್ಷಿಕ -250 ರೂ.
ಪೋಷಕ-1000 ರೂ.

ಪರಂಜ್ಯೋತಿ ಧರೆಗೆ ದೊಡ್ಡವರು

"15ನೇ ಶತಮಾನದಲ್ಲಿ ನಡೆದ ಮಂಟೇಸ್ವಾಮಿ ಚಳುವಳಿಯ ಕುರಿತ ಸಾಕ್ಷಚಿತ್ರ"

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಒಂದು ವರ್ಗ ನಡೆಸುತ್ತಿರುವ "ಸಾಂಸ್ಕೃತಿಕ ರಾಜಕಾರಣ"ದಿಂದ ಮೂಲನಿವಾಸಿಗಳು ತಮ್ಮ ಗುರುತನ್ನು ಕೆಳೆದುಕೊಳ್ಳುವುದರೊಂದಿಗೆ ಆರ್ಥಿಕ ಸೌಲಭ್ಯದಿಂದಲೂ ವಿಮುಖರಾಗಿರುವುದು ಕಾಣಬಹುದು, ಅದರಂತೆ ಪ್ರತಿರೋಧವು ಸಹ ಈ ಸಮುದಾಯಗಳ ಜೀವನ ವಿಧಾನವಾಗಿಯೇ ರೂಪಿತವಾಗಿದೆ.



ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ನಡೆಸಿದ ಕ್ರಾಂತಿಕಾರಕ "ವಚನ ಚಳುವಳಿ" ಒಂದು ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿಸಿಕೊಳ್ಳುವುದರೊಂದಿಗೆ ಅಂದಿನ ಜಡತ್ವದ ಸಮಾಜದ ನೆಲೆಯನ್ನು ಛಿದ್ರಗೊಳಿಸಿತು. ಬಸವಣ್ಣರೊಂದಿಗೆ ಅಕ್ಕಮಹಾದೇವಿ, ಅಲ್ಲಮ ಪ್ರಭು ಈ ಚಳುವಳಿಯನ್ನು ಸರಿಯಾದ ದಿಕ್ಕಿನಲ್ಲಿ ನಿರ್ವಹಿಸಿದರು. ಇಂತಹ ಚಳುವಳಿಯು 14ನೇ ಶತಮಾನದ ಕೊನೆಯಲ್ಲಿ ಆಳುವ ವ್ಯಕ್ತಿತ್ವ ಮತ್ತು ವ್ಯವಸ್ಥೆಯ ಸಹಭಾಗಿಯಾಗಿ ಒಂದು ಜಾತಿಯಾಗಿ ವಿರೋಧಿಸಿದ ಮೌಲ್ಯವನ್ನೇ ಆಚರಿಸುವ ಮಟ್ಟಕ್ಕೆ ಬದಲಾಗಿರುತ್ತದೆ, ಇಂತಹ ಸಂದರ್ಭದಲ್ಲಿ 'ಆರೂಢ ಸಂಗಮನಾಥ' ಜನರಿಗೆ ಜಾಗೃತಿ ಮೂಡಿಸುವುದಕ್ಕೆ 'ವೀರಶೈವ' ಚಳುವಳಿಯ ಸದಸ್ಯನೇ ಆದ 'ಕೊಡೇಕಲ್ ಬಸವ'ರನ್ನು ನೇಮಿಸುತ್ತಾರೆ. ಕೊಡೇಕಲ್ ಬಸವನ ಹಾದಿಯಲ್ಲಿ ಮಕ್ಕಳಾದ ರಾಚಪ್ಪಾಜೀ, ಗುಹೇಶ್ವರ, ಸಂಗಪ್ಪಯ್ಯ, ಶಿಷ್ಯರಾದ ಮಂಟೇಸ್ವಾಮಿ, ತಿಂಥಿಣಿ ಮೊನ್ನಪ್ಪ ಇನ್ನು ಹಲವು ಮಂದಿ ಕಲಾಜ್ಞಾನವನ್ನು ರಚಿಸುವುದರ ಮುಖಾಂತರ ಜನರನ್ನು ಜಾಗೃತಗೊಳಿಸುತ್ತಾರೆ. ಮಂಟೇಸ್ವಾಮಿ ಪ್ರವೇಶದ ನಂತರ ಈ ಚಳುವಳಿ 'ಮಂಟೇಸ್ವಾಮಿ ಚಳುವಳಿ'ಯಾಗಿಯೆ ರೂಪುಗೊಳ್ಳುತ್ತದೆ.

ಬ್ರಾಹ್ಮಣವಾದದ ಶ್ರೇಷ್ಠತೆಯನ್ನು ವಿರೋಧಿಸಿ ಹುಟ್ಟಿದ "ವಚನ ಚಳುವಳಿ" ಮತ್ತೊಂದು ಶ್ರೇಷ್ಠತೆಯ ನೆಲೆಯನ್ನು ಸೃಷ್ಟಿಸುವುದರೊಂದಿಗೆ ಆರ್ಥಿಕ ಮತ್ತು ಸಾಮಾಜಿಕ ಸಮುದಾಯವಾಗಿ ರೂಪುಗೊಂಡಿತು ಆದರೆ ಮಂಟೇಸ್ವಾಮಿ ಪರಂಪರೆಯಲ್ಲಿ ತಾವು ಬದುಕುತ್ತಿರುವ ಮೂಲ ನೆಲೆಯೇ ಶ್ರೇಷ್ಠವಾದದ್ದು ಎನ್ನುವುದನ್ನು ತಮ್ಮ ಪರಂಪರೆಯುದ್ದಕ್ಕೂ ನಿರೂಪಿಸುತ್ತಾರೆ. ಅದಕ್ಕಾಗಿಯೇ ಮಂಟೇಸ್ವಾಮಿ ತಮ್ಮ ಚಳುವಳಿಯಲ್ಲಿ ಕುರಿ ದೊಡ್ಡಿಯನ್ನೆ ಗದ್ದಿಗೆಯಾಗಿ ಮಾಡಿಕೊಂಡಿದ್ದು, ಅಸ್ಪೃಶ್ಯತೆಯಿಂದ ಕಾಣುತ್ತಿದ್ದ ಮುಟ್ಟಾದ ಮಹಿಳೆ, ಭಂಗಿ ಸೇವನೆ, ಹೆಂಡ, ಮಾಂಸ ಇವುಗಳನ್ನೇ ಪ್ರಮುಖ ಸಾಂಸಕೃತಿಕ ಗುರುತುಗಳನ್ನಾಗಿಸಿ ತಮ್ಮ ಚಳುವಳಿಯನ್ನು ರೂಪಿಸುತ್ತಾರೆ ಆದ್ದರಿಂದ ಮಂಟೇಸ್ವಾಮಿ ಚಳುವಳಿ ವಿಶೇಷ ಮತ್ತು ಸ್ಪೂರ್ತಿದಾಯಕ.

http://www.youtube.com/watch?feature=player_detailpage

ಸಾಕ್ಷಚಿತ್ರ ನೋಡಿದ ನಂತರ ನಿಮ್ಮ ಅಭಿಪ್ರಾಯವನ್ನು ತಿಳಿಸಿ

ಧನ್ಯವಾದಗಳು

ಚಂದ್ರಶೇಖರ್.ಪಿ

ಆದಿಮ ಲಿವಿಂಗ್ ಟೈಮ್ಸ್

ಇದು ನಮ್ಮ ಸಂಪರ್ಕ ವಿಳಾಸ...
ಆದಿಮ ಲಿವಿಂಗ್ ಟೈಮ್ಸ್
ನಂ.1007, ಸಿದ್ಧಾರ್ಥ ಲೇಔಟ್, ಚನ್ನಸಂದ್ರ ರೋಡ್,
ಕಾಡುಗೋಡಿ. ಬೆಂಗಳೂರು-67. 9945208735

ಪತ್ರಿಕೆಗೆ ಸಂಬಂಧಿಸಿದ ಲೇಖನಗಳನ್ನು ಈ ವಿಳಾಸಕ್ಕೆ ಕಳುಹಿಸಿ

email: laxmipathicg@gmail.com
shripad.budi@gmail.com
arunodayagc@gmail.com
ph: 9945321970, 9880453799

Book Post

Editor, Publisher, Printer : Kotiganahalli Ramaiah, Address:1007, Sidhartha layout, channasandra Raod, Kadugodi. Bangalore-67. www.adimalivingtimes.blogspot.com